ಶಾಲಾ ಶಿಕ್ಷಣ ಇಲಾಖೆ

# ಮರುಸಿಂಚನ

# ಕನ್ನಡ

**2026–2027**

## ವಿದ್ಯಾರ್ಥಿ ಅಭ್ಯಾಸ ಪುಸ್ತಕ

@KSEEBS
NOT TO BE REPUBLISHED

**8**

ಎಂಟನೇ ತರಗತಿ

**ಸಮಗ್ರ ಶಿಕ್ಷಣ– ಕರ್ನಾಟಕ**
ರಾಜ್ಯ ಯೋಜನಾ ನಿರ್ದೇಶಕರ ಕಚೇರಿ
ಹೊಸ ಸಾರ್ವಜನಿಕ ಕಛೇರಿಗಳ ಪೂರಕ ಕಟ್ಟಡ
ನೃಪತುಂಗ ರಸ್ತೆ, ಬೆಂಗಳೂರು – 560 001

## ಪರಿಕಲ್ಪನೆ

| | | |
|---|---|---|
| **ಶ್ರೀಮತಿ ವಿ. ರಶ್ಮಿ ಮಹೇಶ್** ಭಾ.ಆ.ಸೇ<br>ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು<br>ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ<br>ಕರ್ನಾಟಕ ಸರ್ಕಾರ | **ಶ್ರೀ ವಿಕಾಸ್ ಕಿಶೋರ್ ಸುರಳ್ಕರ್** ಭಾ.ಆ.ಸೇ<br>ಆಯುಕ್ತರು<br>ಶಾಲಾ ಶಿಕ್ಷಣ ಇಲಾಖೆ<br>ನೃಪತುಂಗ ರಸ್ತೆ ಬೆಂಗಳೂರು | **ಶ್ರೀಮತಿ ಡಾ. ಕೆ. ವಿದ್ಯಾಕುಮಾರಿ** ಭಾ.ಆ.ಸೇ<br>ರಾಜ್ಯ ಯೋಜನಾ ನಿರ್ದೇಶಕರು<br>ಸಮಗ್ರ ಶಿಕ್ಷಣ ಕರ್ನಾಟಕ<br>ಬೆಂಗಳೂರು |
| **ಶ್ರೀ ಮಾರುತಿ ಎಂ.ಆರ್.**<br>ನಿರ್ದೇಶಕರು, ಗುಣಮಟ್ಟ<br>ಸಮಗ್ರ ಶಿಕ್ಷಣ ಕರ್ನಾಟಕ<br>ಬೆಂಗಳೂರು | **ಶ್ರೀ ಹೆಚ್.ಎನ್. ಗೋಪಾಲಕೃಷ್ಣ**<br>ನಿರ್ದೇಶಕರು<br>ಡಿ.ಎಸ್.ಇ.ಆರ್.ಟಿ<br>ಬೆಂಗಳೂರು | **ಶ್ರೀ ಸಿ.ಆರ್. ನಾಗರಾಜಯ್ಯ**<br>ಪ್ರಾಂಶುಪಾಲರು ಹಾಗೂ<br>ಉಪನಿರ್ದೇಶಕರು (ಅಭಿವೃದ್ಧಿ)<br>ಡಯಟ್ ಮೈಸೂರು |

## ಸಹಕಾರ

| | |
|---|---|
| **ಶ್ರೀ ಬಿ.ಎಸ್. ಜಗದೀಶ್ವರ**<br>ಸಹನಿರ್ದೇಶಕರು<br>ಡಿ.ಎಸ್.ಇ.ಆರ್.ಟಿ ಬೆಂಗಳೂರು | **ಶ್ರೀಮತಿ ಮಂಗಳ ಜಿ.**<br>ಉಪನಿರ್ದೇಶಕರು<br>ಡಿ.ಎಸ್.ಇ.ಆರ್.ಟಿ ಬೆಂಗಳೂರು |

## ಸಂಪನ್ಮೂಲ ರಚನಾ ತಂಡ (2024–2025)

| | | |
|---|---|---|
| **ಶ್ರೀ ಬಾಲಕೃಷ್ಣಯ್ಯ**<br>ನಿವೃತ್ತ ಶಿಕ್ಷಕರು, ರಾಜ್ಯ ಸಂಪನ್ಮೂಲ ವ್ಯಕ್ತಿಗಳು,<br>ಪಠ್ಯಪುಸ್ತಕ ರಚನಾ ಸಮಿತಿ ಸದಸ್ಯರು,<br>ಮೈಸೂರು ಜಿಲ್ಲೆ. | **ಶ್ರೀ ಸಂಜಯ್ ಕುಮಾರ್.ಹೆಚ್.ಕೆ**<br>ಸಹ ಶಿಕ್ಷಕರು, ಸರ್ಕಾರಿ ಪ್ರೌಢಶಾಲೆ,<br>ಕಂಪಲಾಪುರ, ಪಿರಿಯಾಪಟ್ಟಣ ತಾ॥,<br>ಮೈಸೂರು ಜಿಲ್ಲೆ. | **ಶ್ರೀ ನಾಗರಾಜು.ಎಂ.ಎನ್**<br>ಸಹ ಶಿಕ್ಷಕರು, ಸರ್ಕಾರಿ ಪ್ರೌಢಶಾಲೆ,<br>ರೈಲ್ವೆ ಕಾರ್ಯಾಗಾರ, ದಕ್ಷಿಣ ವಲಯ,<br>ಮೈಸೂರು ಜಿಲ್ಲೆ. |
| **ಶ್ರೀ ಆನಂದ್.ಎಸ್**<br>ಸಹ ಶಿಕ್ಷಕರು, ಸರ್ಕಾರಿ ಪ್ರೌಢಶಾಲೆ,<br>ವಿನಾಯಕ ನಗರ, ಉತ್ತರ ವಲಯ,<br>ಮೈಸೂರು ಜಿಲ್ಲೆ. | **ಶ್ರೀ ನಾಗರಾಜಪ್ಪ.ಎಂ.ಎಂ**<br>ಸಹ ಶಿಕ್ಷಕರು, ಸರ್ಕಾರಿ ಪ್ರೌಢಶಾಲೆ,<br>ಕುಂಬಾರಕೊಪ್ಪಲು, ಉತ್ತರ ವಲಯ,<br>ಮೈಸೂರು ಜಿಲ್ಲೆ. | **ಶ್ರೀಮತಿ ಶಿಲ್ಪ**<br>ಸಹ ಶಿಕ್ಷಕರು, ಮಹಾರಾಣಿ ಸ.ಪ.ಪೂ.ಕಾಲೇಜು<br>(ಪ್ರೌಢಶಾಲಾ ವಿಭಾಗ), ದಕ್ಷಿಣ ವಲಯ,<br>ಮೈಸೂರು ಜಿಲ್ಲೆ. |
| **ಶ್ರೀ ರಾಘವೇಂದ್ರ.ವಿ**<br>ಸಹ ಶಿಕ್ಷಕರು, ಸರ್ಕಾರಿ ಪ್ರೌಢಶಾಲೆ,<br>ಗುಂಗ್ರಾಲ್‌ಛತ್ರ, ಮೈಸೂರು ಗ್ರಾಮಾಂತರ,<br>ಮೈಸೂರು ಜಿಲ್ಲೆ. | **ಕು ಧ್ರುವಜ್ಯೋತಿ.ಸಿ**<br>ಸಹ ಶಿಕ್ಷಕರು, ಸರ್ಕಾರಿ ಪ್ರೌಢಶಾಲೆ,<br>ಗಿರಿಯಾಬೋವಿಪಾಳ್ಯ, ಉತ್ತರ ವಲಯ,<br>ಮೈಸೂರು ಜಿಲ್ಲೆ. | **ಶ್ರೀ ಮಹೇಂದ್ರಕುಮಾರ್.ಸಿ**<br>ಸಹ ಶಿಕ್ಷಕರು, ಸ.ಪ.ಪೂ.ಕಾಲೇಜು<br>(ಪ್ರೌಢಶಾಲಾ ವಿಭಾಗ), ಸಂತೆಮಾಳ, ಬನ್ನೂರು,<br>ಟಿ.ನರಸೀಪುರ ತಾ॥, ಮೈಸೂರು ಜಿಲ್ಲೆ. |

## ಸಂಪನ್ಮೂಲ ಪರಿಷ್ಕರಣ ತಂಡ (2026–2027)

| | |
|---|---|
| **ಶ್ರೀ ಆರ್.ಡಿ.ರವೀಂದ್ರ**<br>ಸಹ ಶಿಕ್ಷಕರು, ಸರ್ಕಾರಿ ಪ್ರೌಢಶಾಲೆ, ಲೋಕನಾಥಪುರ,<br>ಕೊಪ್ಪ ತಾ॥, ಚಿಕ್ಕಮಗಳೂರು ಜಿಲ್ಲೆ. | **ಶ್ರೀ ಸಂಜಯ್ ಕುಮಾರ್.ಹೆಚ್.ಕೆ**<br>ಇ.ಸಿ.ಒ. ಬಿ.ಇ.ಒ ಕಛೇರಿ<br>ಮೈಸೂರು ಗ್ರಾಮಾಂತರ ಮೈಸೂರು ಜಿಲ್ಲೆ. |
| **ಶ್ರೀ ರಾಘವೇಂದ್ರ.ವಿ**<br>ಸಹ ಶಿಕ್ಷಕರು, ಸರ್ಕಾರಿ ಪ್ರೌಢಶಾಲೆ,<br>ಗುಂಗ್ರಾಲ್‌ಛತ್ರ, ಮೈಸೂರು ಗ್ರಾಮಾಂತರ, ಮೈಸೂರು ಜಿಲ್ಲೆ. | **ಕು ಧ್ರುವಜ್ಯೋತಿ.ಸಿ**<br>ಸಹ ಶಿಕ್ಷಕರು, ಸರ್ಕಾರಿ ಪ್ರೌಢಶಾಲೆ, ಅತ್ತಹಳ್ಳಿ<br>ಟಿ ನರಸೀಪುರ ತಾ॥ ಮೈಸೂರು ಜಿಲ್ಲೆ. |

## ಸಮನ್ವಯ

- **ಶ್ರೀಮತಿ ನಾಗಮಣಿ ಎಂ.** ಹಿರಿಯ ಸಹಾಯಕ ನಿರ್ದೇಶಕರು, ಡಿ.ಎಸ್.ಇ.ಆರ್.ಟಿ ಬೆಂಗಳೂರು
- **ಶ್ರೀಮತಿ ಶಿವಮ್ಮ,** ಹಿರಿಯ ಸಹಾಯಕ ನಿರ್ದೇಶಕರು, ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ, ಕರ್ನಾಟಕ.
- **ಶ್ರೀ ಕೆ.ವಿ.ಸುರೇಶ್,** ಹಿರಿಯ ಉಪನ್ಯಾಸಕರು, ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ, ಮೈಸೂರು.
- **ಶ್ರೀಮತಿ ಬಿ.ಎನ್.ನಳಿನಾಕ್ಷಿ,** ಉಪನ್ಯಾಸಕರು, ಕಾರ್ಯಾನುಭವ ವಿಭಾಗ, ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ, ಮೈಸೂರು.
- **ಶ್ರೀ ಶಿವಶಂಕರಯ್ಯ,** ಉಪನ್ಯಾಸಕರು, ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ, ಮೈಸೂರು.

**ಬೆಂಬಲ ಟ್ರಾನ್ಸ್ ಫಾರ್ಮ್ ಸ್ಕೂಲ್ಸ್,**

NOT TO BE PUBLISHED

# ಮುನ್ನುಡಿ

ವಿದ್ಯಾರ್ಥಿಗಳು ಆಲೋಚನೆಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಾಗ, ತಮ್ಮ ತಿಳುವಳಿಕೆಯನ್ನು ವಿಶ್ಲೇಷಿಸಿದಾಗ ಮತ್ತು ಹೊಸ ಪರಿಕಲ್ಪನೆಗಳನ್ನು ತಮ್ಮಲ್ಲಿನ ಪೂರ್ವಜ್ಞಾನದೊಂದಿಗೆ ಜೋಡಿಸಿಕೊಂಡಾಗ ಮಾತ್ರ ಕಲಿಕೆಯು ಅರ್ಥ ಪೂರ್ಣವಾಗುತ್ತದೆ. ಇದನ್ನು ಮನಗಂಡು, **'ಮರುಸಿಂಚನ'** ಕಾರ್ಯಕ್ರಮವು ವಿದ್ಯಾರ್ಥಿಗಳ ಸಕ್ರಿಯ ಭಾಗವಹಿಸುವಿಕೆ ಮತ್ತು ಅನುಭವ ಆಧಾರಿತ ಕಲಿಕೆಗೆ ಹೆಚ್ಚಿನ ಒತ್ತು ನೀಡಿದೆ. ಈ ಕಾರ್ಯಕ್ರಮವನ್ನು ವಿಶೇಷವಾಗಿ ಕಲಿಕಾ ಅಂತರಗಳನ್ನು **(learning gaps)** ಇಲ್ಲವಾಗಿಸಲು ಹಾಗೂ ವಿದ್ಯಾರ್ಥಿಗಳು ತಮ್ಮ ತರಗತಿಗೆ ಅನುಗುಣವಾದ ಕಲಿಕಾ ಮಟ್ಟವನ್ನು ತಲುಪಲು ಅತ್ಯಗತ್ಯವಾದ ಬುನಾದಿ **(foundational)** ಮತ್ತು ಪೂರ್ವ–ಅಗತ್ಯ (ರಿಡಿಜಡಿಜಡಣಖುಣಜ) ಸಾಮರ್ಥ್ಯಗಳಲ್ಲಿ ಪ್ರಾವೀಣ್ಯತೆ ಸಾಧಿಸಲು ಅನುವಾಗುವಂತೆ ರೂಪಿಸಲಾಗಿದೆ.
ಈ ದೂರ ದೃಷ್ಟಿಯನ್ನು ಸಾಕಾರಗೊಳಿಸಲು **'ವಿದ್ಯಾರ್ಥಿ ಅಭ್ಯಾಸ ಪುಸ್ತಕ' (Student Activity Book - SAB)** ವನ್ನು ಅಭಿವೃದ್ಧಿಪಡಿಸಲಾಗಿದೆ. ಇದು ವಿದ್ಯಾರ್ಥಿಗಳಿಗೆ ಒಂದು ವ್ಯವಸ್ಥಿತ ಕಲಿಕಾ ಸಂಗಾತಿಯಾಗಿ ಕಾರ್ಯ ನಿರ್ವಹಿಸುತ್ತದೆ; ವಿದ್ಯಾರ್ಥಿಗಳು ತಮ್ಮ ಪೂರ್ವ–ಅಗತ್ಯ ಪರಿಕಲ್ಪನೆಗಳನ್ನು ಪುನರ್ಮನನ ಮಾಡಿಕೊಳ್ಳಲು, ಮಾರ್ಗದರ್ಶಿತ ಕಲಿಕಾ ಚಟುವಟಿಕೆಗಳಲ್ಲಿ ಪಾಲ್ಗೊಳ್ಳಲು ಮತ್ತು ತರಗತಿವಾರು ಪಾಠಗಳ ಬಗ್ಗೆ ತಮ್ಮ ತಿಳುವಳಿಕೆಯನ್ನು ದೃಢೀಕರಿಸಿಕೊಳ್ಳಲು ಇದು ಸಹಕಾರಿಯಾಗಲಿದೆ.

ಈ ಪುಸ್ತಕದಲ್ಲಿ ಅಳವಡಿಸಲಾಗಿರುವ ಚಟುವಟಿಕೆಗಳನ್ನು ಈ ಕೆಳಗಿನ ಉದ್ದೇಶಗಳಿಗಾಗಿ ರೂಪಿಸಲಾಗಿದೆ :

- ವಿದ್ಯಾರ್ಥಿಗಳಲ್ಲಿನ ಕಲಿಕಾ ನ್ಯೂನತೆಗಳನ್ನು ಸರಿದೂಗಿಸಿ ಸಮನ್ವಯಗೊಳಿಸುವುದು.
- ವಿದ್ಯಾರ್ಥಿಗಳಲ್ಲಿ ಆಲೋಚನಾ ಸಾಮರ್ಥ್ಯ, ಚರ್ಚೆ ಮತ್ತು ಸಮಸ್ಯೆಪರಿಹರಿಸುವ ಕೌಶಲಗಳನ್ನು ಉತ್ತೇಜಿಸುವುದು.
- ತರಗತಿವಾರು ನಿಗದಿಪಡಿಸಿದ ಕಲಿಕಾ ಸಾಮರ್ಥ್ಯಗಳ ಕಡೆಗೆ ಹಂತ ಹಂತವಾಗಿ ಪ್ರಗತಿ ಸಾಧಿಸಲು ಬೆಂಬಲ ನೀಡುವುದು.

@KTBS NOT TO BE REPUBLISHED

ಈ **ವಿದ್ಯಾರ್ಥಿ ಅಭ್ಯಾಸ ಪುಸ್ತಕವು** ಕೇವಲ ಪರೀಕ್ಷಾ ಅಭ್ಯಾಸ ಪುಸ್ತಕವಲ್ಲ ಅಥವಾ ಹೆಚ್ಚುವರಿ ಪಠ್ಯ ಪುಸ್ತಕವೂ ಅಲ್ಲ. ಇದನ್ನು ದೈನಂದಿನ ಕಲಿಕಾ ಪ್ರಕ್ರಿಯೆಯ ಭಾಗವಾಗಿ, ಶಿಕ್ಷಕರ ಮಾರ್ಗದರ್ಶನದಲ್ಲಿ, ಸಾಮಾನ್ಯ ತರಗತಿ ಬೋಧನೆಯ ಸಮಯದಲ್ಲಿ ಬಳಸಲು ರೂಪಿಸಲಾಗಿದೆ. ಪಠ್ಯಪುಸ್ತಕದ ಪಾಠಗಳಿಗೆ ಪೂರಕವಾಗಿರುವ ಮತ್ತು ಕ್ರಮಬದ್ಧವಾಗಿ ಜೋಡಿಸಲಾದ ಚಟುವಟಿಕೆಗಳ ಮೂಲಕ, ಸಿದ್ಧತೆಯಿಂದ ಹಿಡಿದು ಕಲಿಕೆಯ ದೃಢೀಕರಣದವರೆಗಿನ ಪ್ರತಿಯೊಂದು ಹಂತದಲ್ಲೂ ವಿದ್ಯಾರ್ಥಿಗಳಿಗೆ ಇದು ನೆರವು ನೀಡುತ್ತದೆ.

ಈ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವುದರಿಂದ ವಿದ್ಯಾರ್ಥಿಗಳು ಸಕ್ರಿಯವಾಗಿ ಕಲಿಯಲು, ತಮ್ಮ ಆಲೋಚನೆಗಳನ್ನು ವ್ಯಕ್ತಪಡಿಸಲು, ಸಹಪಾಠಿಗಳಿಂದ ಕಲಿಯಲು ಮತ್ತು ವಿಷಯದ ಬಗ್ಗೆ ಆತ್ಮ ವಿಶ್ವಾಸವನ್ನು ಬೆಳೆಸಿಕೊಳ್ಳಲು ಪ್ರೇರೇಪಿತರಾಗುತ್ತಾರೆ.

ಶಿಕ್ಷಕರ ಆಪ್ತ ಮಾರ್ಗದರ್ಶನದೊಂದಿಗೆ ಈ ವಿದ್ಯಾರ್ಥಿ ಅಭ್ಯಾಸ ಪುಸ್ತಕದ ನಿರಂತರ ಬಳಕೆಯು ವಿದ್ಯಾರ್ಥಿಗಳ ಪರಿಕಲ್ಪನಾ ತಿಳುವಳಿಕೆಯನ್ನು ಬಲಪಡಿಸುತ್ತದೆ, ಕಲಿಕಾಫಲಗಳನ್ನು ಸುಧಾರಿಸುತ್ತದೆ ಮತ್ತು ತರಗತಿಗಳಲ್ಲಿ ಆನಂದದಾಯಕ ಕಲಿಕಾ ವಾತಾವರಣವನ್ನು ನಿರ್ಮಿಸುತ್ತದೆ ಎಂದು ನಾವು ನಂಬಿದ್ದೇವೆ.

ಈ ಪುಸ್ತಕವು ವಿದ್ಯಾರ್ಥಿಗಳ ಕಲಿಕಾ ಪಯಣದಲ್ಲಿ ಅವರ ಕುತೂಹಲ, ಪಾಲ್ಗೊಳ್ಳುವಿಕೆ ಮತ್ತು ಆತ್ಮವಿಶ್ವಾಸವನ್ನು ಹೆಚ್ಚಿಸಲಿ ಎಂದು ನಾವು ಆಶಿಸುತ್ತೇವೆ.

ಈ ಸಾಹಿತ್ಯ ರಚನೆಯಲ್ಲಿ ಭಾಗವಹಿಸಿದ ಎಲ್ಲಾ ಸಂಪನ್ಮೂಲವ್ಯಕ್ತಿಗಳಿಗೂ, ಅಧಿಕಾರಿ ಬಂಧುಗಳಿಗೂ ಧನ್ಯವಾದಗಳು.

# ಪರಿವಿಡಿ

ಹೆಚ್ಚಿನ ಕಲಿಕೆಗಾಗಿ ಸ್ಕ್ಯಾನ್ ಮಾಡಿ


| ಬುನಾದಿ ಹಂತ | | |
|---|---|---|
| ಕ್ರ.ಸಂ. | ಅವಧಿ | ಪುಟ ಸಂಖ್ಯೆ |
| 1 | ಅಂತ್ಯಾಕ್ಷರಿ ಆಡೋಣ | 01 |
| 2 | ನೋಡಿ – ಮಾತನಾಡಿ | 02 |
| 3 | ಕಥೆ ಕೇಳಿ – ಉತ್ತರ ಹೇಳಿ | 03 |
| 4 | ಕಥೆ ಕೇಳಿ– ಕಥೆ ಹೇಳಿ | 04 |
| 5 | ಚಿತ್ರ ನೋಡಿ – ಕಥೆ ಜೋಡಿಸಿ | 05 |
| 6 | ಕೇಳಿ – ಹೇಳಿ | 07 |
| 7 | ಚಿತ್ರ ನೋಡಿ – ಅಭಿಪ್ರಾಯ ಹೇಳಿ | 08 |
| 8 | ಓದೋಣ – ಬರೆಯೋಣ | 09 |
| 9 | ಸಂಯುಕ್ತಾಕ್ಷರಗಳನ್ನು ತಿಳಿಯೋಣ | 11 |
| 10 | ಅರ್ಥಪೂರ್ಣ ಪದ ರಚಿಸೋಣ | 13 |
| 11 | ಚಿತ್ರ ನೋಡಿ – ಘೋಷವಾಕ್ಯ ಮಾಡಿ | 14 |
| 12 | ಅರ್ಥಪೂರ್ಣ ವಾಕ್ಯ ರಚಿಸೋಣ – 1 | 16 |
| 13 | ಅರ್ಥಪೂರ್ಣ ವಾಕ್ಯ ರಚಿಸೋಣ – 2 | 17 |
| 14 | ಕೇಳಿ ಬರೆ | 18 |
| 15 | ನೋಡಿ ಬರೆ | 20 |
| 16 | ಸಂಭಾಷಣೆ ಬರೆಯೋಣ – 1 | 22 |
| 17 | ಸಂಭಾಷಣೆ ಬರೆಯೋಣ –2 | 24 |
| 18 | ಶಬ್ದಕೋಶ ಬಳಸೋಣ | 26 |
| 19 | ಓದು – ಚಿಂತಿಸಿ – ಹೇಳಿ – 1 | 27 |
| 20 | ಓದು – ಚಿಂತಿಸಿ – ಹೇಳಿ – 2 | 29 |
| 21 | ವಚನಗಳು, ನಾಮಪದಗಳನ್ನು ತಿಳಿಯೋಣ | 30 |
| 22 | ಸರ್ವನಾಮಗಳನ್ನು ತಿಳಿಯೋಣ | 33 |
| 23 | ಪತ್ರ ಬರೆಯೋಣ – 1 | 35 |
| 24 | ಪತ್ರ ಬರೆಯೋಣ – 2 | 36 |


© DSERT NOT TO BE REPUBLISHED

# ಪರಿವಿಡಿ




ಹೆಚ್ಚಿನ ಕಲಿಕೆಗಾಗಿ ಸ್ಕ್ಯಾನ್ ಮಾಡಿ


| ಬೆಂಬಲಿತ ಕಲಿಕೆಯ ಹಂತ | | |
|---|---|---|
| **ಕ್ರ.ಸಂ.** | **ಅವಧಿ** | **ಪುಟ ಸಂಖ್ಯೆ** |
| 1 | ಅಭಿವ್ಯಕ್ತಿ | 38 |
| 2 | ಸರಳ ವಾಕ್ಯ ರಚನೆ | 39 |
| 3 | ಓದುವುದು – 1 | 41 |
| 4 | ಓದುವುದು – 2 | 43 |
| 5 | ಆಲಿಸುವುದು | 44 |
| 6 | ತಾರ್ಕಿಕ ಚಿಂತನೆ | 46 |
| 7 | ಕಥೆ ಕಟ್ಟೋಣ | 49 |
| 8 | ಕ್ರಿಯಾಪದ | 51 |
| 9 | ಕಾಲಗಳು | 53 |
| 10 | ಸಂಧಿಗಳು | 55 |
| 11 | ಸಮಾಸಗಳು –1 | 57 |
| 12 | ಸಮಾಸಗಳು – 2 | 58 |
| 13 | ವಿಭಕ್ತಿ ಪ್ರತ್ಯಯಗಳು | 69 |
| 14 | ಲೇಖನ ಚಿಹ್ನೆಗಳು – 1 | 61 |
| 15 | ಲೇಖನ ಚಿಹ್ನೆಗಳು – 2 | 62 |
| 16 | ದ್ವಿರುಕ್ತಿ – ಜೋಡು ನುಡಿ | 64 |
| 17 | ಅರ್ಥವ್ಯತ್ಯಾಸ – ಧ್ವನಿ ಸಾಮ್ಯತೆ – 1 | 66 |
| 18 | ಅರ್ಥವ್ಯತ್ಯಾಸ – ಧ್ವನಿ ಸಾಮ್ಯತೆ – 2 | 68 |
| 19 | ತತ್ಸಮ – ತದ್ಭವ | 69 |
| 20 | ಗಾದೆಗಳು | 72 |
| 21 | ಪತ್ರಲೇಖನ – 1 | 75 |
| 22 | ಪತ್ರಲೇಖನ –2 | 78 |
| 23 | ಛಂದಸ್ಸು –1 | 80 |
| 24 | ಛಂದಸ್ಸು –2 | 83 |
| 25 | ಅಲಂಕಾರ –1 | 86 |
| 26 | ಅಲಂಕಾರ –2 | 89 |
| 27 | ಪ್ರಬಂಧ –1 | 91 |
| 28 | ಪ್ರಬಂಧ –2 | 94 |


© @KTBS NOT TO BE REPUBLISHED

ಬುನಾದಿ ಹಂತ – ಚಟುವಟಿಕೆ ಹಾಳೆ 1

# ಅಂತ್ಯಾಕ್ಷರಿ ಆಡೋಣ

B1A7L5

ಹೆಚ್ಚಿನ ಕಲಿಕೆಗಾಗಿ ಸ್ಕ್ಯಾನ್ ಮಾಡಿ

**ಕಲಿಕಾ ಫಲ :** ಓದಿದ, ಕೇಳಿದ, ನೋಡಿದ ಪರಿಚಿತ ಸನ್ನಿವೇಶ ಘಟನೆ ಮತ್ತು ದೃಶ್ಯಗಳನ್ನು ಕುರಿತು ಸ್ವ ಚಿಂತನೆ ಮೂಲಕ ಹಾಗೂ ಕಲ್ಪನೆಗಳ ಮೂಲಕ ಮಾಡಿದ ವಿಚಾರಗಳನ್ನು ಮೌಖಿಕವಾಗಿ ಅಭಿವ್ಯಕ್ತಿಸುವರು.

**ಚಟುವಟಿಕೆ 1 : ಶಿಕ್ಷಕರು ಹೇಳಿದ ಪದದಲ್ಲಿನ ಅಂತ್ಯದ ಅಕ್ಷರದಿಂದ ಪ್ರಾರಂಭವಾಗುವ ಪದಗಳನ್ನು ಹೇಳಿರಿ.**

**ಮಾದರಿ :** ಶಾಲೆ– ಲಲಿತ– ತರಕಾರಿ– ರಮೇಶ– ಶಾರದಾ,,,,,

**ಚಟುವಟಿಕೆ 2 : ಕೊಟ್ಟಿರುವ ಪದ್ಯ ಭಾಗವನ್ನು ತಪ್ಪಿಲ್ಲದಂತೆ ಹಾಡಿರಿ.**

@KTBS NOT TO BE REPUBLISHED

ಪುಟ್ಟ ಪುಟ್ಟ ನವಿಲೇ,
ಚಿಕ್ಕ ಚಿಕ್ಕ ನವಿಲೇ,
ಎಲ್ಲಿಗೆ ಹೊರಟಿರುವೆ ?
ಓ ನವಿಲೇ, ಎಲ್ಲಿಗೆ ಹೊರಟಿರುವೆ ?
ಅಂದ ಚಂದ ತೋರಿಸುತ್ತಾ,
ಬಳ್ಳಿ ಹಾಗೆ ಬಳುಕುತ್ತಾ,
ಎಲ್ಲಿಗೆ ಹೊರಟಿರುವೆ ?
ಓ ನವಿಲೇ, ಎಲ್ಲಿಗೆ ಹೊರಟಿರುವೆ?



**ಸೂಚನೆ :** ಅಂತ್ಯದಲ್ಲಿ ಬರುವ ಅಕ್ಷರದಿಂದ ಯಾವುದೇ ಗುಣಿತಾಕ್ಷರಗಳನ್ನು ಬಳಸಿ ಪದ ರಚಿಸಿ. ಹೇಳಿರಿ.

ಬುನಾದಿ ಹಂತ – ಚಟುವಟಿಕೆ ಹಾಳೆ 2

# ನೋಡಿ - ಮಾತನಾಡಿ

N4F517

ಹೆಚ್ಚಿನ ಕಲಿಕೆಗಾಗಿ ಸ್ಕ್ಯಾನ್ ಮಾಡಿ


**ಕಲಿಕಾ ಫಲ:** ಓದಿದ, ಕೇಳಿದ, ನೋಡಿದ ಅಪರಿಚಿತ ಸನ್ನಿವೇಶ, ಘಟನೆ ಮತ್ತು ದೃಶ್ಯಗಳನ್ನು ಕುರಿತು ಸ್ವಚಿಂತನೆ ಹಾಗೂ ಕಲ್ಪನೆಗಳ ಮೂಲಕ ಮೂಡಿದ ವಿಚಾರಗಳನ್ನು ಮೌಖಿಕವಾಗಿ ಅಭಿವ್ಯಕ್ತಿಸುವರು.

**ಚಟುವಟಿಕೆ 1 : ಕೊಟ್ಟಿರುವ ಚಿತ್ರಗಳಲ್ಲಿ ಯಾವುದಾದರೂ ಒಂದು ಚಿತ್ರವನ್ನು ಕುರಿತು ಅಭಿಪ್ರಾಯವನ್ನು ಶಿಕ್ಷಕರೊಂದಿಗೆ ಹಂಚಿಕೊಳ್ಳಿ.**












@KTBS NOT TO BE REPUBLISHED

ಬುನಾದಿ ಹಂತ – ಚಟುವಟಿಕೆ ಹಾಳೆ 3

# ಕಥೆ ಕೇಳಿ–ಉತ್ತರ ಹೇಳಿ

D3E9Z7

ಹೆಚ್ಚಿನ ಕಲಿಕೆಗಾಗಿ ಸ್ಕ್ಯಾನ್ ಮಾಡಿ

**ಕಲಿಕಾ ಫಲ:** ಆಲಿಸಿದ ವಿಷಯ, ವಸ್ತು (ಕಥೆ, ಕವಿತೆ, ಪ್ರಾಸ)ಗಳನ್ನು ಕುರಿತು ಮಾತನಾಡುವರು ಹಾಗೂ ಪ್ರಶ್ನೆ ಕೇಳುವರು, ತಮ್ಮ ಅನಿಸಿಕೆ, ಅಭಿಪ್ರಾಯ ಹೇಳುವರು. ಸಂವಾದದಲ್ಲಿ ಪಾಲ್ಗೊಳ್ಳುವರು.

**ಚಟುವಟಿಕೆ 1 : ಕೊಟ್ಟಿರುವ ಕಥೆಯನ್ನು ಓದಿಕೊಂಡು ಪ್ರಶ್ನೆಗಳಿಗೆ ಉತ್ತರಿಸಿ.**

ಸಮುದ್ರ ತೀರದಲ್ಲಿದ್ದ ಒಂದು ಮರದಲ್ಲಿ ಬಕ ಪಕ್ಷಿ ದಂಪತಿಗಳಿದ್ದವು. ಅವುಗಳ ಮೊಟ್ಟೆಗಳನ್ನು ಆ ಮರದ ಪಕ್ಕದ ಹುತ್ತದಲ್ಲಿ ವಾಸ ಮಾಡುತ್ತಿದ್ದ ಒಂದು ಸರ್ಪ ಮರವನ್ನು ಹತ್ತಿ, ಮೊಟ್ಟೆಗಳನ್ನು ತಿನ್ನುತ್ತಿತ್ತು. ಇದರಿಂದ ದುಃಖಿಗೊಂಡ ಬಕ,ಏನೂ ಮಾಡಲು ತೋಚದಂತಾಯಿತು. ಒಂದು ದಿನ ಸಮುದ್ರ ತೀರದಲ್ಲಿ ನಿಂತು, ಬಕ ಇದೇ ಯೋಚನೆ ಮಾಡುತ್ತಿತ್ತು. ಅದನ್ನು ಕಂಡ ಒಂದು ಏಡಿ"ಏನು ಬಾವಾ, ನೀನು ಈ ದಿನ ಆಹಾರದ ಯೋಚನೆಯನ್ನು ಮಾಡದೆ ವ್ಯಾಪಾರ ಮಾಡುವವರಂತೆ ಕಣ್ಣನ್ನು ಭದ್ರವಾಗಿ ಮುಚ್ಚಿಕೊಂಡಿರುವುದಕ್ಕೆ ಕಾರಣವೇನು?"ಎಂದು ಕೇಳಿತು.

"ನನಗೆ ಮನಸ್ಸಿನ ದುಃಖವೇ ಹೆಚ್ಚಾಗಿರುವುದರಿಂದ ಆಹಾರಕ್ಕಾಗಿ ಹೇಗೆ ಚಿಂತೆ ಮಾಡಲಿ?" ಎಂದು ಬಕ ಹೇಳಿತು."ಅದೇನು ಕಾರಣ?" ಎಂದು ಏಡಿ ಕೇಳಿದಾಗ,ಬಕಸಂಗತಿಯನ್ನೆಲ್ಲಾ ತಿಳಿಸಿತು. ಅದನ್ನೆಲ್ಲ ಕೇಳಿಸಿಕೊಂಡ ಏಡಿ ಹೀಗೆ ಹೇಳಿತು."ಹಾಗಾದರೆ ಸರ್ಪವನ್ನು ಕೊಲ್ಲುವಂತ ಉಪಾಯವೊಂದನ್ನು ನಾನು ಹೇಳುತ್ತೇನೆ, ಅದು ಏನೆಂದರೆ "ನೀನು ಮಾಂಸದ ತುಂಡುಗಳನ್ನು ತಂದು ಮುಂಗುಸಿಗಳು ಓಡಾಡುವ ಸ್ಥಳದಿಂದ ಹುತ್ತದವರೆಗೆ ಸಾಲಾಗಿ ಹಾಕು. ಮುಂಗುಸಿಗಳು ಮಾಂಸದ ಆಸೆಯಿಂದ ಹುತ್ತದ ಬಳಿಗೆ ಹೋಗಿ ಸರ್ಪವನ್ನು ತಿನ್ನುತ್ತವೆ" ಎಂದು ಹೇಳಿತು.

ಅದಕ್ಕೆ ಒಪ್ಪಿದ ಆ ಬಕ ಆ ಕೂಡಲೇ ಹೋಗಿ ಮೀನುಗಳನ್ನು ಕೊಂದು ಏಡಿ ಹೇಳಿದಂತೆ ಸಾಲಾಗಿ ಹಾಕಿತು. ಅದನ್ನು ಕಂಡ ಮುಂಗುಸಿಗಳು ಮೀನಿನ ಮಾಂಸವನ್ನು ತಿನ್ನುತ್ತಾ ಬಂದು ಹುತ್ತವನ್ನು ಸೇರಿದವು. ಅದೇ ವೇಳೆಗೆ ಹುತ್ತದಿಂದ ಹೊರಗೆ ಬಂದ ಸರ್ಪ ಮರ ಹತ್ತುವುದನ್ನು ಕಂಡ ಮುಂಗುಸಿಗಳು ಅದನ್ನು ತುಂಡು ತುಂಡು ಮಾಡಿ ತಿಂದು ಹಾಕಿದವು. ಬಕದಂಪತಿಗಳು ತಮ್ಮ ಮರಿಗಳೊಡನೆ ಸುಖವಾಗಿ ಬಾಳಿದವು.

@KTBS NOT TO BE REPUBLISHED

**ಮೌಖಿಕ ಪ್ರಶ್ನೆಗಳು:**

1. ಬಕ ದಂಪತಿಗಳು ಎಲ್ಲಿ ವಾಸವಾಗಿದ್ದವು?
2. ಬಕ ಪಕ್ಷಿಯ ದುಃಖಕ್ಕೆ ಕಾರಣವೇನು?
3. ಬಕ ಪಕ್ಷಿಗೆ ಸಲಹೆ ನೀಡಿದವರಾರು?
4. ಸರ್ಪವನ್ನು ಕೊಲ್ಲುವ ಉಪಾಯವೇನು?
5. ಸರ್ಪವನ್ನು ಕೊಂದು ತಿಂದವರು ಯಾರು?
6. ಈ ಕಥೆಯಿಂದ ತಿಳಿದು ಬರುವ ನೀತಿ ಏನು?

ಬುನಾದಿ ಹಂತ – ಚಟುವಟಿಕೆ ಹಾಳೆ 4

# ಕಥೆ ಕೇಳಿ – ಉತ್ತರ ಹೇಳಿ

E4Z3A1

ಹೆಚ್ಚಿನ ಕಲಿಕೆಗಾಗಿ ಸ್ಕ್ಯಾನ್ ಮಾಡಿ

**ಕಲಿಕಾ ಫಲ:** ಹೇಳುತ್ತಿರುವ ಮಾತು, ವಿಚಾರ, ಕತೆ, ಕವಿತೆ ಮುಂತಾದವುಗಳನ್ನು ಗಮನವಿರಿಸಿಕೊಂಡು ಆಲಿಸಿ ತಮ್ಮದೇ ಆದ ಭಾಷೆಯಲ್ಲಿ ಹೇಳುವರು/ಕೇಳುವರು. ಆಲಿಸಿದ ಕಥೆ, ಮಾತು, ಕವಿತೆ ಇತ್ಯಾದಿಗಳನ್ನು ಆಲಿಸಿ ತಮ್ಮದೇ ಮಾತುಗಳಲ್ಲಿ ಹೇಳುವರು.

**ಚಟುವಟಿಕೆ 1 : ಶಿಕ್ಷಕರು ಹೇಳಿದ ಕಥೆಯನ್ನು ಪುನರಾವರ್ತಿಸಿ ಬರೆಯಿರಿ.**

@KTBS
NOT TO BE REPUBLISHED

ಬುನಾದಿ ಹಂತ – ಚಟುವಟಿಕೆ ಹಾಳೆ 5

# ಚಿತ್ರ ನೋಡಿ – ಕಥೆ ಜೋಡಿಸಿ

X8K4M1

ಹೆಚ್ಚಿನ ಕಲಿಕೆಗಾಗಿ ಸ್ಕ್ಯಾನ್ ಮಾಡಿ

**ಕಲಿಕಾ ಫಲ:** ಚಿತ್ರಗಳನ್ನು ವೀಕ್ಷಿಸಿ, ಅವುಗಳ ಮಧ್ಯೆ ಸಮ್ಮತಸಂಬಂಧವನ್ನು ಕಂಡುಹಿಡಿದು ಕಥೆ ರಚಿಸಲು ಸಾಮರ್ಥ್ಯ ಗಳಿಸುವರು.

**ಚಟುವಟಿಕೆ 1 : ಕೊಟ್ಟಿರುವ ಚಿತ್ರವನ್ನು ಗಮನಿಸಿ ವಾಕ್ಯಗಳನ್ನು ಸರಿಯಾದ ಕ್ರಮದಲ್ಲಿ ಬರೆದು, ಸೂಕ್ತವಾದ ಶೀರ್ಷಿಕೆಯನ್ನು ನೀಡಿ.**









1. ಮೊಲ ಸಿಂಹಕ್ಕೆ ಬಾವಿಯೊಳಗಿನ ಪ್ರತಿಬಿಂಬ ತೋರಿಸಿತು.
2. ಕಾಡಿನ ರಾಜ ಸಿಂಹ ತನಗೆ ಇಷ್ಟ ಬಂದ ಪ್ರಾಣಿಗಳನ್ನು ತಿನ್ನುತ್ತಿತ್ತು.
3. ಸಿಂಹ ಹಸಿವಿನಿಂದ ಗರ್ಜಿಸಿ ಕಾರಣ ಕೇಳಿತು.
4. ಸರದಿಯಂತೆ ಒಂದು ದಿನ ಮೊಲ ಹೋಗಬೇಕಾಯಿತು.
5. ಸಿಂಹಕ್ಕೆ ಅದು ತನ್ನ ಪ್ರತಿಬಿಂಬ ಎಂದು ತಿಳಿಯದೆ ಶತ್ರುವೆಂದು ತಿಳಿದು ಬಾವಿಯೊಳಗೆ ಹಾರಿತು.
6. 'ನಿನಗಿಂತ ಬಲಶಾಲಿ ಸಿಂಹದಿಂದ ಬಿಡಿಸಿಕೊಂಡು ಬರುವುದರಲ್ಲಿ ತಡವಾಯಿತು' ಎಂದು ಮೊಲ ಬೇಡಿಕೊಂಡಿತು.
7. ಇದರಿಂದ ಬೇರೆ ಪ್ರಾಣಿಗಳಿಗೆ ಬೇಸರವಾಗಿ ಸಭೆ ನಡೆಸಿದವು.
8. ಮೊಲದ ಚಾತುರ್ಯದಿಂದ ಸಿಂಹ ಪ್ರಾಣ ಕಳೆದುಕೊಂಡಿತು.
9. ಪ್ರತಿದಿನ ಒಂದೊಂದು ಪ್ರಾಣಿಯನ್ನು ಆಹಾರವಾಗಿ ಕಳಿಸುವುದಾಗಿ ತೀರ್ಮಾನಿಸಿತು. ಇದಕ್ಕೆ ಸಿಂಹವೂ ಒಪ್ಪಿತು.
10. ಮೊಲ ಬೇಕೆಂದು ತಡವಾಗಿ ಸಿಂಹದ ಬಳಿ ಹೋಯಿತು.
11. ಇದರಿಂದ ಸಿಂಹ ಹಸಿವು, ಕೋಪದಿಂದ "ಎಲ್ಲಿ ತೋರಿಸು" ಎಂದು ಕೇಳಿತು.
12. ಅಂದಿನಿಂದ ಕಾಡಿನಲ್ಲಿ ಪ್ರಾಣಿಗಳು ನೆಮ್ಮದಿಯಿಂದ ಬದುಕಿದವು.

© DSERT DO NOT COPY OR REPUBLISH

ಶೀರ್ಷಿಕೆ :

@KTBS
NOT TO BE REPUBLISHED

## ಬುನಾದಿ ಹಂತ – ಚಟುವಟಿಕೆ ಹಾಳೆ 6
## ಕೇಳಿ–ಹೇಳಿ

Q6J7W9
ಹೆಚ್ಚಿನ ಕಲಿಕೆಗಾಗಿ ಸ್ಕ್ಯಾನ್ ಮಾಡಿ

**ಕಲಿಕಾ ಫಲ:** ಹೇಳುತ್ತಿರುವ ಕತೆ, ಕಥನ, ಕವಿತೆ ವಿವರಣೆ ಮತ್ತು ಒಗಟುಗಳು ಮುಂತಾದವುಗಳನ್ನು ಆಸಕ್ತಿಯಿಂದ ಕೇಳಿ ತಿಳಿಯುವರು ಮತ್ತು ಅರ್ಥಮಾಡಿಕೊಂಡು ಪ್ರತಿಕ್ರಿಯಿಸುವರು.

**ಚಟುವಟಿಕೆ 1 : ಶಿಕ್ಷಕರು ನಿಮಗೆ ಹೇಳುವ ಘಟನೆಯನ್ನು ಗಮನವಿಟ್ಟು ಕೇಳಿರಿ, ಕೇಳಿದ ನಂತರ ನಿಮ್ಮ ಅನಿಸಿಕೆಗಳನ್ನು ನಿಮ್ಮ ತರಗತಿಯಲ್ಲಿ ಹಂಚಿಕೊಳ್ಳಿ, ನಂತರ ನಿಮ್ಮ ಸ್ನೇಹಿತರ ಅನಿಸಿಕೆಗಳನ್ನು ಆಲಿಸಿರಿ.**

ಚಟುವಟಿಕೆ 2 : ಕೊಟ್ಟಿರುವ ಖಾಲಿ ಜಾಗದಲ್ಲಿ ಶಿಕ್ಷಕರು ಹೇಳುವ ಪದಗಳನ್ನು ಬರೆಯಿರಿ.
**ನೀವು ಬರೆದಿರುವ ಪದಗಳನ್ನು ಪುನರ್ ಉಚ್ಚರಿಸಿ, ಅರ್ಥ ತಿಳಿಯಿರಿ.**

@KTBS
NOT TO BE REPUBLISHED

ಬುನಾದಿ ಹಂತ – ಚಟುವಟಿಕೆ ಹಾಳೆ 7


# ಚಿತ್ರ ನೋಡಿ–ಅಭಿಪ್ರಾಯ ಹೇಳಿ

S5U6G1

ಹೆಚ್ಚಿನ ಕಲಿಕೆಗಾಗಿ ಸ್ಕ್ಯಾನ್ ಮಾಡಿ

**ಕಲಿಕಾ ಫಲ:** ವಿವಿಧ ರೀತಿಯ ರಚನೆಗಳು/ವಿಷಯ ಸಾಮಗ್ರಿಗಳನ್ನು (ಸಮಾಚಾರ ಪತ್ರಿಕೆ, ಬಾಲ ಪತ್ರಿಕೆ, ಚಿತ್ರಗಳು ಮುಂತಾದವು) ನೋಡಿ/ಓದಿ ತಿಳಿದು, ಅನಂತರ ಅವುಗಳನ್ನು ಆಧರಿಸಿ ಪ್ರಶ್ನಿಸುವರು. ತಮ್ಮ ಅನಿಸಿಕೆ ನೀಡುವರು. ಶಿಕ್ಷಕರು ಮತ್ತು ತಮ್ಮ ಸಹಪಾಠಿಗಳೊಂದಿಗೆ ಚರ್ಚಿಸುವರು. ಕೇಳಿದ ಪ್ರಶ್ನೆಗಳಿಗೆ ಉತ್ತರವನ್ನು ಮೌಖಿಕವಾಗಿ ನೀಡುವರು.

**ಚಟುವಟಿಕೆ 1 : ಕೊಟ್ಟಿರುವ ಚಿತ್ರವನ್ನು ಗಮನಿಸಿ, ಚಿತ್ರದ ಕುರಿತಾಗಿ ನಿಮ್ಮ ಅಭಿಪ್ರಾಯ ಹೇಳಿರಿ.**





ಬುನಾದಿ ಹಂತ – ಚಟುವಟಿಕೆ ಹಾಳೆ 8

# ಓದೋಣ–ಬರೆಯೋಣ

U8M9B4

ಹೆಚ್ಚಿನ ಕಲಿಕೆಗಾಗಿ ಸ್ಕ್ಯಾನ್ ಮಾಡಿ

**ಕಲಿಕಾ ಫಲ:** ಅಕ್ಷರ, ಪದಗಳನ್ನು ಸರಿಯಾದ ಗಾತ್ರ, ಅಂತರದೊಂದಿಗೆ ಬರೆಯುವರು ಮತ್ತು ಓದುವರು.

**ಚಟುವಟಿಕೆ 1 : ಚೌಕದಲ್ಲಿ ಕೊಟ್ಟಿರುವ ಪದಗಳನ್ನು ಗಟ್ಟಿಯಾಗಿ ಓದಿ, ನಂತರ ಪಕ್ಕದಲ್ಲಿ ನೀಡಿರುವ ಚೌಕದಲ್ಲಿ ಬರೆಯಿರಿ.**

| | | | | | | | |
|---|---|---|---|---|---|---|---|
| ಬಳಪ | | ಗುರು | | ದೇಹ | | ದೈವ | |
| ಔತಣ | | ನಾಡು | | ಕೇಳು | | ಪೈರು | |
| ಪಾದ | | ಗೂಳಿ | | ಜೊತೆ | | ಇಂಗಾಲ | |
| ದಾರ | | ಭೂಮಿ | | ಹೊಳೆ | | ಅಂಟು | |
| ಮೃಗ | | ಕಿವಿ | | ಮೆದುಳು | | ರೋಗ | |
| ಕೃಷಿ | | ಗಿರಿ | | ವೈಶಾಖ | | ಲೋಟ | |
| ಜೀವನ | | ಬೆಳೆ | | ಸೌದೆ | | ಮೃದಂಗ | |

@KTBS NOT TO BE REPUBLISHED

**ಚಟುವಟಿಕೆ 2 : ಕೊಟ್ಟಿರುವ ಗುಣಿತಾಕ್ಷರಗಳನ್ನು ಮಾದರಿಯಂತೆ ಬಿಡಿಸಿ ಬರೆಯಿರಿ.**

**ಮಾದರಿ : ಕೈ = ಕ್ + ಐ**

| | | | | | | | |
|---|---|---|---|---|---|---|---|
| ಮಾ | | ಗೇ | | ನ್ನ | | ಪೊ | |
| ಭಿ | | ಜು | | ಯಿ | | ಣೀ | |
| ಡೌ | | ವೆ | | ಸೃ | | ರೈ | |

**ಚಟುವಟಿಕೆ 3 : ಕೊಟ್ಟಿರುವ ಅಕ್ಷರಗಳನ್ನು ಮಾದರಿಯಂತೆ ಕೂಡಿಸಿ ಬರೆಯಿರಿ**

**ಮಾದರಿ :** ಣ್+ಇ = ಣಿ

| | | | | | | | |
|---|---|---|---|---|---|---|---|
| ಜ್+ಇ | | ಹ್+ಓ | | ಯ್+ಉ | | ವ್+ಇ | |
| ಮ್+ಎ | | ತ್+ಖು | | ಕ್+ಔ | | ಷ್+ಈ | |
| ಗ್+ಏ | | ಟ್+ಅ | | ಯ್+ಒ | | ಗ್+ಊ | |

**ಚಟುವಟಿಕೆ 4 : ಕೊಟ್ಟಿರುವ ಪದಗಳಲ್ಲಿ ಮಹಾಪ್ರಾಣಾಕ್ಷರಗಳನ್ನು ಗುರುತಿಸಿ ಬರೆಯಿರಿ.**

| | | | | | | | |
|---|---|---|---|---|---|---|---|
| ಖಗ | | ರಥ | | ಮಠ | | ಫಲಕ | |
| ಭಾರತ | | ಅಭೀಷ್ಟ | | ಪ್ರಧಾನ | | ಛಲ | |
| ಘೀಳಿಡು | | ಮಹಾರಥಿ | | ಧರಣಿ | | ಭವನ | |

@KTBS NOT TO BE REPUBLISHED

ಬುನಾದಿ ಹಂತ – ಚಟುವಟಿಕೆ ಹಾಳೆ 9

# ಸಂಯುಕ್ತಾಕ್ಷರಗಳನ್ನು ತಿಳಿಯೋಣ

ಹೆಚ್ಚಿನ ಕಲಿಕೆಗಾಗಿ ಸ್ಕ್ಯಾನ್ ಮಾಡಿ

**ಕಲಿಕಾ ಫಲ:** ಅಕ್ಷರ, ಪದ, ಸರಳ ವಾಕ್ಯಗಳನ್ನು ಸರಿಯಾದ ಗಾತ್ರ, ಅಂತರದೊಂದಿಗೆ ಬರೆಯುವರು ಮತ್ತು ಓದುವರು.

ಎರಡು ಅಥವಾ ಎರಡಕ್ಕಿಂತ ಹೆಚ್ಚು ವ್ಯಂಜನಗಳಿಗೆ ಒಂದು ಸ್ವರ ಅಂತ್ಯದಲ್ಲಿ ಸೇರಿ ಆಗುವ ಅಕ್ಷರವನ್ನು ಒತ್ತಕ್ಷರ/ಸಂಯುಕ್ತಾಕ್ಷರ ಎನ್ನುವರು.

**ಕನ್ನಡ ವರ್ಣ ಮಾಲೆಯಲ್ಲಿನ ಸಂಯುಕ್ತಾಕ್ಷರಗಳು**

| ಮೂಲಾಕ್ಷರವನ್ನು ಹೋಲುವ ಒತ್ತಕ್ಷರಗಳು | ಮೂಲಾಕ್ಷರವನ್ನು ಹೋಲದ ಒತ್ತಕ್ಷರಗಳು |
|---|---|
| ಜ್ಜ ಟ್ಟ ಣ್ಣ ಬ್ಬ ಖ್ಖ ವ್ವ | ತ್ತ ನ್ನ ಮ್ಮ ಯ್ಯ ರ್ರ ಒ ಲ್ಲ |

@KTBS NOT TO BE REPUBLISHED

**ಮೂಲಾಕ್ಷರಗಳ ಹೋಲುವ ತಲೆಕಟ್ಟು ಇಲ್ಲದ ಒತ್ತಕ್ಷರಗಳು :**

**ಅಲ್ಪಪ್ರಾಣಾಕ್ಷರಗಳು –** ಕ್ಕ ಗ್ಗ ಚ್ಚ ಡ್ಡ ದ್ದ ಪ್ಪ

**ಮಹಾಪ್ರಾಣಾಕ್ಷರಗಳು –** ಖ್ಖ ಘ್ಘ ಝ್ಝ ಠ್ಠ ಢ್ಢ ಧ್ಧ ಫ್ಫ ಭ್ಭ

**ಅವರ್ಗೀಯ ವ್ಯಂಜನಗಳು –** ಶ್ಶ ಷ್ಷ ಸ್ಸ ಹ್ಹ ಳ್ಳ

ಒತ್ತಕ್ಷರಗಳಲ್ಲಿ ಎರಡು ವಿಧಗಳಿವೆ :

- ಸಜಾತಿ ಒತ್ತಕ್ಷರ
- ವಿಜಾತಿ ಒತ್ತಕ್ಷರ

ಸಜಾತಿ ಒತ್ತಕ್ಷರ– ಒಂದು ವ್ಯಂಜನಾಕ್ಷರಕ್ಕೆ ಅದೇ ವ್ಯಂಜನದ ಒತ್ತಕ್ಷರ ಬಂದರೆ ಅದು ಸಜಾತಿ ಒತ್ತಕ್ಷರ

ವಿಜಾತಿ ಒತ್ತಕ್ಷರ– ಒಂದು ವ್ಯಂಜನಾಕ್ಷರಕ್ಕೆ ಮತ್ತೊಂದು ವ್ಯಂಜನದ ಒತ್ತಕ್ಷರ ಬಂದರೆ ಅದು ವಿಜಾತಿ ಒತ್ತಕ್ಷರ

**ಚಟುವಟಿಕೆ 1 :** ಕೊಟ್ಟಿರುವಪದಗಳಲ್ಲಿಸಜಾತಿ ಮತ್ತು ವಿಜಾತಿ ಒತ್ತಕ್ಷರದಪದಗಳನ್ನುಗುರುತಿಸಿ, ನೀಡಲಾದ ಕೋಷ್ಟಕದಲ್ಲಿ ಬರೆಯಿರಿ.

ನಾಲ್ಕು, ಅಮ್ಮ, ರಾತ್ರಿ, ಕಡ್ಲೆ, ಕುಸ್ತಿ, ಒತ್ತು, ಕಣ್ಣೀರು, ಎಷ್ಟು, ಮುಳ್ಳು, ಪದ್ಮ, ಕಪ್ಪೆ, ಹಾಸ್ಯ, ಬೆನ್ನು, ಅಜ್ಜ, ರತ್ನ, ಅಕ್ಕಿ, ಖಡ್ಗ, ಸ್ವರ, ಹೆಬ್ಬಾವು, ಸ್ವೀಕಾರ, ಸುವ್ವಾಲಿ

| ಸಜಾತಿ ಒತ್ತಕ್ಷರ | ವಿಜಾತಿ ಒತ್ತಕ್ಷರ |
|---|---|
| | |

**ಚಟುವಟಿಕೆ 2 :** ಕೊಟ್ಟಿರುವ ಪದಗಳನ್ನು ಓದಿ, ಬರೆಯಿರಿ.

1. ಗಾಯನ = _____
2. ನವಿಲು = _____
3. ಸಮಯ = _____
4. ಗಮನ = _____
5. ತೋರಣ = _____
6. ಕೃತಕ = _____
7. ಕುದುರೆ = _____
8. ಗೆಳೆಯ = _____
9. ಸರಳ = _____
10. ಮಲಗು = _____
11. ಅಜ್ಜಿ = _____
12. ಹಣ್ಣು = _____
13. ಮಂತ್ರ = _____
14. ಪ್ರಶಂಸೆ = _____
15. ಸಂಗಡ = _____
16. ಪುನಃ = _____
17. ಮಾಣಿಕ್ಯ = _____
18. ಮಹಾತ್ಮ = _____
19. ಪ್ರಶಸ್ತಿ = _____
20. ಸಂಪ್ರದಾಯ = _____

@KTBS NOT TO BE REPUBLISHED

ಬುನಾದಿ ಹಂತ – ಚಟುವಟಿಕೆ ಹಾಳೆ 10

# ಅರ್ಥಪೂರ್ಣ ಪದ ರಚಿಸೋಣ

J7Q1G1

ಹೆಚ್ಚಿನ ಕಲಿಕೆಗಾಗಿ ಸ್ಕ್ಯಾನ್ ಮಾಡಿ

**ಕಲಿಕಾಫಲ:** ಅಕ್ಷರ, ಗುಣಿತಾಕ್ಷರ ಮತ್ತು ಸಂಯುಕ್ತಾಕ್ಷರಗಳನ್ನು ಗುರುತಿಸಿ ಓದುವರು, ಬರೆಯುವರು ಮತ್ತು ಅಕ್ಷರ – ಧ್ವನಿ ಸಂಬಂಧೀಕರಿಸಿ ಪ್ರಯೋಗ ಮಾಡಲು ಪ್ರಯತ್ನಿಸುವರು. ಅಕ್ಷರಮಾಲೆಯ ಅಕ್ಷರಗಳನ್ನು ಮತ್ತು ಅವುಗಳ ಧ್ವನಿಗಳನ್ನು ಗುರುತಿಸುವರು.

**ಚಟುವಟಿಕೆ 1 : ಕೊಟ್ಟಿರುವ ಅಕ್ಷರಗಳನ್ನು ಮಿಶ್ರಮಾಡಿ ನೀಡಿದೆ. ಅವುಗಳನ್ನು ಮಾದರಿಯಂತೆ ಅರ್ಥಪೂರ್ಣ ಪದಗಳ ರಚನೆ ಮಾಡಿರಿ.**

ಮಾದರಿ:– ಣಿ, ತ, ಗ = ಗಣಿತ

ವಿ, ನ, ಮ = ಮನವಿ

1. ನ, ಜೀ, ವ = _____
2. ಲು, ಮಾ, ರು = _____
3. ತಿ, ಣ, ವ, ಗು = _____
4. ಸಿ, ವಂ, ರಿ, ತ = _____
5. ಯ, ದೇ, ವಾ,ಲ = _____
6. ಗ, ಸಿ, ನ್ನ, ರಿ, ಡ = _____
7. ಸು, ನ, ಲು, ಗ, ಗ, ಹ = _____
8. ಜ್ಞಾ, ಅ, ಭಿ, ನ = _____
9. ತ, ಪಂ, ಮೃ, ಚಾ = _____
10. ರ್ವೇ, ಯು, ಆ, ದ = _____
11. ನಿ, ದ್ಯಾ, ವಿ, ರ್ಥಿ = _____
12. ತ್ರಾ, ರ್ಜಿ, ತ, ಪಿ = _____
13. ವಿ, ಭ್ಯಾ, ಸ, ದ್ಯಾ = _____
14. ಪಿ, ಳ, ನಂ ,ಗ, ನೆ, ನ = _____
15. ಲು, ಬೆ, ದ, ಟ್ಟ, ಪ್ಪ, ಲು = _____
16. ತ್ರ, ಕ, ಥೆ, ಚಿ = _____
17. ನಾ, ಭ, ಟ್ಯ, ರ, ತ = _____
18. ನಂ, ವಿ, ದ, ವೇ, ಕಾ = _____
19. ರ್ಯ, ಶಾ, ಧೈ, ಲಿ = _____
20. ಹ, ಣ್ಣು, ಳೆ, ನೇ, ರ = _____
21. ನಾ, ದಿ, ಣೆ, ರ, ಚ = _____
22. ದ್ರಿ, ಪಂ, ಗ, ಚೇಂ, ಯ, ಳು = _____
23. ವ, ರ್ಧ, ಹ, ರ್ಷ, ನ = _____
24. ವ, ಮಂ, ದೇ, ರ, ದಿ = _____
25. ಗ, ಬಾ, ಲ, ಟೆ, ಕೋ = _____
26. ದಿ, ಹಾ, ನ, ದ, ಜೀ, ವ = _____
27. ತ್ಮ, ಆ, ಸ, ಶ್ವಾ, ವಿ = _____
28. ನ್ನ ಡ, ಕ, ಡು, ನಾ = _____
29. ಬೆ, ಭಾ, ತಾಂ, ರ = _____
30. ನು, ಜ, ಮು, ತ, ಮ = _____

@KTBS NOT TO BE REPUBLISHED

ಬುನಾದಿ ಹಂತ – ಚಟುವಟಿಕೆ ಹಾಳೆ 11


## ಚಿತ್ರ ನೋಡಿ–ಘೋಷವಾಕ್ಯ ಮಾಡಿ

ಹೆಚ್ಚಿನ ಕಲಿಕೆಗಾಗಿ ಸ್ಕ್ಯಾನ್ ಮಾಡಿ

**ಕಲಿಕಾಫಲ:** ಸೂಚನಾ ಫಲಕಗಳನ್ನು ನೀಡಿದಾಗ ಅವುಗಳಲ್ಲಿರುವ ಸೂಚನೆಗಳನ್ನು ಓದಿ, ಗ್ರಹಿಸಿ ಅನ್ವಯಿಸಿಕೊಳ್ಳುವರು.

**ಚಟುವಟಿಕೆ 1 : ಮಾದರಿಯಂತೆ ನೋಡಿ ಬರೆಯಿರಿ.**

**ಮಾದರಿ:–**



ನಿಶ್ಶಬ್ಧವಾಗಿರಿ




_____



_____



_____



_____



_____




_____

© KTBS NOT TO BE REPUBLISHED














@KTBS NOT TO BE REPUBLISHED

ಬುನಾದಿ ಹಂತ – ಚಟುವಟಿಕೆ ಹಾಳೆ 12

# ಅರ್ಥಪೂರ್ಣ ವಾಕ್ಯ ರಚಿಸೋಣ–1

Y9W1V7

ಹೆಚ್ಚಿನ ಕಲಿಕೆಗಾಗಿ ಸ್ಕ್ಯಾನ್ ಮಾಡಿ

**ಕಲಿಕಾ ಫಲ :** ವಾಕ್ಯರಚನೆಯ ಮಹತ್ತ್ವವನ್ನು ಅರಿತು, ಕರ್ತೃಪದ, ಕರ್ಮಪದ, ಕ್ರಿಯಾಪದಗಳನ್ನು ಸೂಕ್ತ ಸ್ಥಳಗಳಲ್ಲಿ ಬಳಸುವರು.

**ಅರ್ಥಪೂರ್ಣವಾದ ವಾಕ್ಯದಲ್ಲಿ ಪ್ರಧಾನವಾಗಿ ಮೂರುಪದಗಳನ್ನು ಗುರುತಿಸುತ್ತೇವೆ. ಅವುಗಳೆಂದರೆ, ಕರ್ತೃಪದ, ಕರ್ಮಪದ ಮತ್ತು ಕ್ರಿಯಾಪದಗಳು.**

**ಚಟುವಟಿಕೆ 1 : ಕೊಟ್ಟಿರುವ ಕೋಷ್ಟಕವನ್ನು ಗಮನಿಸಿ ವಾಕ್ಯಗಳನ್ನು ಓದಿಕೊಂಡು, ಅದರ ಮುಂದಿನ ಜಾಗದಲ್ಲಿ ಸಂಬಂಧಿಸಿದ ಪದ ಬರೆಯಿರಿ.**

@KTBS NOT TO BE REPUBLISHED

| ಕ್ರ.ಸಂ. | ವಾಕ್ಯಗಳು | ಕರ್ತೃಪದ | ಕರ್ಮಪದ | ಕ್ರಿಯಾಪದ |
|---|---|---|---|---|
| ಮಾದರಿ | ರಮ್ಯಾ ಭಾವಗೀತೆಯನ್ನು ಹಾಡಿದಳು | ರಮ್ಯಾ | ಭಾವಗೀತೆ | ಹಾಡಿದಳು |

| ಕ್ರ.ಸಂ. | ವಾಕ್ಯಗಳು | ಕರ್ತೃಪದ | ಕರ್ಮಪದ | ಕ್ರಿಯಾಪದ |
|---|---|---|---|---|
| 1 | ನಾನು ಗೋಲಿ ಆಟವನ್ನು ಆಡುತ್ತೇನೆ | | | |
| 2 | ಸಂತೋಷನು ಕವಿತೆಗಳನ್ನು ಬರೆಯುತ್ತಾನೆ | | | |
| 3 | ರೈತರು ಬೆಳೆಯನ್ನು ಬೆಳೆಯುತ್ತಾರೆ | | | |
| 4 | ಅಜ್ಜ ಕಥೆಯನ್ನು ಹೇಳುತ್ತಾರೆ | | | |
| 5 | ವಿದ್ಯಾರ್ಥಿಯು ಪಾಠವನ್ನು ಕಲಿಯುತ್ತಾನೆ | | | |

ಬುನಾದಿ ಹಂತ – ಚಟುವಟಿಕೆ ಹಾಳೆ 13

# ಅರ್ಥಪೂರ್ಣ ವಾಕ್ಯ ರಚಿಸೋಣ–2

ಹೆಚ್ಚಿನ ಕಲಿಕೆಗಾಗಿ ಸ್ಕ್ಯಾನ್ ಮಾಡಿ

**ಕಲಿಕಾ ಫಲ:** ವಾಕ್ಯರಚನೆಯ ಮಹತ್ತ್ವವನ್ನು ಅರಿತು, ಕರ್ತೃಪದ, ಕರ್ಮಪದ, ಕ್ರಿಯಾಪದಗಳನ್ನು ಸೂಕ್ತ ಸ್ಥಳಗಳಲ್ಲಿ ಬಳಸುವರು.

**ಚಟುವಟಿಕೆ 1 :** ಕ್ರಿಯೆಯನ್ನು ಸೂಚಿಸುವ 10 ಕ್ರಿಯಾಪದಗಳನ್ನು ಬರೆಯಿರಿ

**ಮಾದರಿ–** ಓದುತ್ತಿದ್ದಾನೆ

1. _____ 2. _____

3. _____ 4. _____

5. _____ 6. _____

7. _____ 8. _____

9. _____ 10. _____

@KTBS NOT TO BE REPUBLISHED

**ಚಟುವಟಿಕೆ 2 :** ನೀವು ಬರೆದಿರುವ ಮೇಲಿನ ಯಾವುದಾದರೂ ಐದು ಕ್ರಿಯಾಪದಗಳಿಗೆ ಸೂಕ್ತ ಕರ್ತೃಪದ ಹಾಗೂ ಕರ್ಮಪದ ಸೇರಿಸಿ, ವಾಕ್ಯಗಳನ್ನು ರಚಿಸಿರಿ.

**ಮಾದರಿ:–** ರಮೇಶ ಪುಸ್ತಕವನ್ನು ಓದುತ್ತಿದ್ದಾನೆ.

1. _____

2. _____

3. _____

4. _____

5. _____

ಬುನಾದಿ ಹಂತ – ಚಟುವಟಿಕೆ ಹಾಳೆ 14

# ಕೇಳಿ ಬರೆ

R8T1N4

ಹೆಚ್ಚಿನ ಕಲಿಕೆಗಾಗಿ ಸ್ಕ್ಯಾನ್ ಮಾಡಿ

**ಕಲಿಕಾ ಫಲ:** ವಾಕ್ಯರಚನೆಯ ಮಹತ್ತ್ವವನ್ನು ಅರಿತು, ಕರ್ತೃಪದ, ಕರ್ಮಪದ, ಕ್ರಿಯಾಪದಗಳನ್ನು ಸೂಕ್ತ ಸ್ಥಳಗಳಲ್ಲಿ ಬಳಸುವರು.

**ಚಟುವಟಿಕೆ 1 : ಉಕ್ತಲೇಖನದ ಮೂಲಕ ಅಪರಿಚಿತ ಪದಗಳನ್ನು ಬರೆಯುವುದು.**

**ಮಾದರಿ– ಶಿಕ್ಷಕರು ಹೇಳಿದ ಪದ / ವಾಕ್ಯಗಳನ್ನು (ಉಕ್ತಲೇಖನ) ಬರೆಯಿರಿ.**

1. _____
2. _____
3. _____
4. _____
5. _____
6. _____
7. _____
8. 
9. 
10 
11. 
12. 
13. 
14. 
15. 

@KTBS
NOT TO BE REPUBLISHED

**ಚಟುವಟಿಕೆ 2 : ಕೊಟ್ಟಿರುವ ಪಠ್ಯಭಾಗವನ್ನು ಓದಿ, ಗದ್ಯಭಾಗದಲ್ಲಿರುವ ಹೊಸಪದಗಳನ್ನು ಪಟ್ಟಿ ಮಾಡಿ ಅವುಗಳ ಅರ್ಥವನ್ನು ಬರೆಯಿರಿ.**

ಡಾ. ರಾಜೇಂದ್ರಪ್ರಸಾದ್ ಅವರು ಭಾರತದ ಪ್ರಥಮ ರಾಷ್ಟ್ರಪತಿಗಳು. ಅತ್ಯಂತ ಉನ್ನತ ಸ್ಥಾನಕ್ಕೇರಿದರೂ ಸರಳ ಜೀವನ ನಡೆಸಿದವರು. ಜನಕ ಮಹಾರಾಜನಂತೆ ಅವರದು ಋಷಿಸದೃಶ ಜೀವನ. ಅವರು ಕೋಪವನ್ನು ಹತ್ತಿಕ್ಕಬಲ್ಲವರಾಗಿದ್ದರು. ಬಾಳಿನಲ್ಲಿ ಶಿಸ್ತು–ಸಂಯಮ, ಸಮಯಪಾಲನೆ ಇವುಗಳಿಗೆ ಭಾರಿ ಮಹತ್ವ ನೀಡುತ್ತಿದ್ದರು. ತಾವು ಜನರ ಸೇವಕ ಎಂದು ಹೇಳಿಕೊಳ್ಳುತ್ತಿದ್ದರು.

ಒಂದು ದಿನ ಕಛೇರಿಯ ಕೆಲಸ ಮುಗಿಸಿ ರಾಜೇಂದ್ರಪ್ರಸಾದರು ಮನೆಗೆ ಬಂದಾಗ ಅವರ ಒಂದು ಪುಸ್ತಕದ ಹಲವು ಪುಟಗಳು ಅಲ್ಲಲ್ಲಿ ಚೆಲ್ಲಾಪಿಲ್ಲಿಯಾಗಿ ಹರಿದು ಬಿದ್ದಿರುವುದನ್ನು ನೋಡಿದರು. ಇದೆಲ್ಲ ಮಕ್ಕಳ ಕೆಲಸ ಎಂಬುದು ಅವರಿಗೆ ಹೊಳೆಯಲು ಹೆಚ್ಚು ವೇಳೆ ಬೇಕಾಗಲಿಲ್ಲ. ಮಕ್ಕಳಿಗೆ ತಮ್ಮ ತಪ್ಪಿನ ಅರಿವಾಗಬೇಕು ಎಂದೆನಿಸಿತು. ಆದರೆ ಆ ಮಕ್ಕಳನ್ನು ಅಪರಾಧಿಗಳಾಗಿಸಲು ಅವರ ಮನ ಒಪ್ಪಲಿಲ್ಲ. ಒಂದು ಉಪಾಯ ಹೂಡಿದರು.

ಪ್ರಸಾದರು ಮುಖ, ಕೈಕಾಲು ತೊಳೆದು ಬಂದರು. ನಿಧಾನವಾಗಿ ಕೋಣೆಯಲ್ಲಿ ಹರಿದು ಬಿದ್ದಿದ್ದ ಪುಸ್ತಕದ ಪುಟಗಳನ್ನು ಒಂದೊಂದಾಗಿ ಎತ್ತಿ ಮೇಜಿನ ಮೇಲಿಟ್ಟರು. ಬಳಿಕ ಮಕ್ಕಳನ್ನೆಲ್ಲ ಬಳಿಗೆ ಕರೆದರು. ಮಕ್ಕಳು ಓಡೋಡಿ ಬಂದರು. ರಾಜೇಂದ್ರಪ್ರಸಾದರು "ಮಕ್ಕಳೇ, ನೋಡಿ ಇಲ್ಲಿ ಎಷ್ಟೊಂದು ಕಾಗದಗಳು ಹರಿದು ಹೋಗಿವೆ. ಇವೆಲ್ಲ ಪುಸ್ತಕದ ಪುಟಗಳು. ನಿಮ್ಮಲ್ಲಿ ಯಾರು ಯಾರು ಎಷ್ಟೆಷ್ಟು ಪುಟಗಳನ್ನು ಹರಿದಿದ್ದೀರೋ ಅವರಿಗೆ ಆ ಪುಟಗಳ

©KTBS NOT TO BE REPUBLISHED

**ಹೊಸ ಪದಗಳ ಪಟ್ಟಿ ಮಾಡಿ, ಅರ್ಥ ಬರೆಯಿರಿ.**

1. _____
2. _____
3. _____
4. _____
5. _____
6. _____
7. _____
8. _____
9. _____
10. _____


ಬುನಾದಿ ಹಂತ – ಚಟುವಟಿಕೆ ಹಾಳೆ 15

# ನೋಡಿ ಬರೆ

ಹೆಚ್ಚಿನ ಕಲಿಕೆಗಾಗಿ ಸ್ಕ್ಯಾನ್ ಮಾಡಿ

**ಕಲಿಕಾ ಫಲ:** ಪರಿಚಿತ ಮತ್ತು ಅಪರಿಚಿತ ಬರಹಗಳಲ್ಲಿ ಆಸಕ್ತಿ ತೋರುವರು. ಅವುಗಳ ಅರ್ಥವನ್ನು ಕಂಡುಹಿಡಿಯುವುದಕ್ಕೆ ವಿವಿಧ ಉಪಾಯಗಳನ್ನು ಕಂಡುಕೊಳ್ಳುವರು. (ಚಿತ್ರದ ಸಹಾಯದಿಂದ ಬರಹವನ್ನು ಊಹಿಸುವುದು, ಅಕ್ಷರ ಮತ್ತು ಧ್ವನಿಯನ್ನು ಸಂಬಂಧೀಕರಿಸುವುದು, ಶಬ್ದಗಳನ್ನು ಗುರುತಿಸುವುದು, ತನ್ನ ಪೂರ್ವಾನುಭವ ಮತ್ತು ನೆನಪಿನ ಸಹಾಯದಿಂದ ಅರ್ಥವನ್ನು ಊಹಿಸುವುದು, ಇತ್ಯಾದಿ ಮಾಡುತ್ತದೆ.)

**ಚಟುವಟಿಕೆ 1 : ಕೊಟ್ಟಿರುವ ಪ್ರತಿದಿನದ ಚಟುವಟಿಕೆಗಳನ್ನು ಕ್ರಮಾನುಗತವಾಗಿ ಜೋಡಿಸಿ ಬರೆಯಿರಿ.**

| | |
|---|---|
| 1  | 2  |
| 3  | 4  |
| 5  | 6  |
| 7  | 8  |

1.

2.

3.

4.

5.


6.

7.

8.

© KTBS NOT TO BE REPUBLISHED

**ಚಟುವಟಿಕೆ 1 :** ಕೊಟ್ಟಿರುವ ಮನುಷ್ಯನ ಚಿತ್ರದ ಶಾರೀರಿಕ ಬದಲಾವಣೆಯ ಚಿತ್ರಗಳನ್ನು, ಜೋಡಿಸಿ, ಸಂಖ್ಯೆಗಳ ಮೂಲಕ ಅವುಗಳನ್ನು ಸೂಚಿಸಿ ಬರೆಯಿರಿ.




@KTBS NOT TO BE REPUBLISHED

ಬುನಾದಿ ಹಂತ – ಚಟುವಟಿಕೆ ಹಾಳೆ 16

# ಸಂಭಾಷಣೆ ಬರೆಯೋಣ–1

R1C1X9

ಹೆಚ್ಚಿನ ಕಲಿಕೆಗಾಗಿ ಸ್ಕ್ಯಾನ್ ಮಾಡಿ

**ಕಲಿಕಾ ಫಲ:** ಸಾಹಿತ್ಯ ಪ್ರಕಾರಗಳನ್ನು ಸ್ವತಃ ಓದಿ, ಅರ್ಥಮಾಡಿಕೊಂಡು ಅವುಗಳ ವಿವಿಧ ಶೈಲಿ ಪ್ರಕಾರಗಳ ಬಗೆಗೆ ತಿಳಿಯುವರು. ಓದಿದ ಅಪರಿಚಿತ ಪರಿಸ್ಥಿತಿ ಮತ್ತು ಘಟನೆಗಳ ಬಗೆಗೆ ಕಲ್ಪನೆ ಮಾಡಿಕೊಳ್ಳುವರು ಮತ್ತು ಅವುಗಳ ಬಗೆಗೆ ತಮ್ಮ ಮನಸ್ಸಿನಲ್ಲಿ ಮೂಡಿದ ಭಾವನೆ ಮತ್ತು ಅನುಭವಗಳನ್ನು ಬರೆವಣಿಗೆಯಲ್ಲಿ ಅಭಿವ್ಯಕ್ತಪಡಿಸುವರು.

**ಚಟುವಟಿಕೆ 1 : ಕೊಟ್ಟಿರುವ ಸಂಭಾಷಣೆ ಸಹಿತ ಚಿತ್ರವನ್ನು ಗಮನಿಸಿ, ಅದರಲ್ಲಿರುವ ಸಂಭಾಷಣೆಗಳನ್ನು ಬರೆಯಿರಿ.**




ಚಿತ್ರ ಕೃಪೆ ತರಂಗ ವಾರ ಪತ್ರಿಕೆ

© NCERT NOT TO BE REPUBLISHED

**ವಿದ್ವಾಂಸ :** ಸಲಾಂಪ್ರಭು, ನಾನು ಉತ್ತರ ಭಾರತದ ಸುಲ್ತಾನರ ಆಸ್ಥಾನದಿಂದ ಇಲ್ಲಿಗೆ ಬಂದಿರುವೆ.

**ರಾಜ :** .....

**ವಿದ್ವಾಂಸ :** .....

**ರಾಜ :** .....

**ವಿದ್ವಾಂಸ :**.....

**ಇನ್ನೊಬ್ಬ ಮಂತ್ರಿ :**.....

**ತೆನಾಲಿರಾಮ :** .....

**ವಿದ್ವಾಂಸ :** .....

**ತೆನಾಲಿರಾಮ :** .....

@KTBS
NOT TO BE REPUBLISHED

ಬುನಾದಿ ಹಂತ – ಚಟುವಟಿಕೆ ಹಾಳೆ 17

## ಸಂಭಾಷಣೆ ಬರೆಯೋಣ–2

ಹೆಚ್ಚಿನ ಕಲಿಕೆಗಾಗಿ ಸ್ಕ್ಯಾನ್ ಮಾಡಿ

**ಕಲಿಕಾ ಫಲ:** ಓದಿದ ಅಪರಿಚಿತ ಪರಿಸ್ಥಿತಿ ಮತ್ತು ಘಟನೆಗಳ ಬಗೆಗೆ ಕಲ್ಪನೆ ಮಾಡಿಕೊಳ್ಳುವರು ಮತ್ತು ಅವುಗಳ ಬಗೆಗೆ ತಮ್ಮ ಮನಸ್ಸಿನಲ್ಲಿ ಮೂಡಿದ ಭಾವನೆ ಮತ್ತು ಅನುಭವಗಳನ್ನು ಬರೆವಣಿಗೆಯಲ್ಲಿ ಅಭಿವ್ಯಕ್ತಪಡಿಸುವರು.

**ಚಟುವಟಿಕೆ 1 :** ಕೊಟ್ಟಿರುವ ಎರಡು ಚಿತ್ರಗಳನ್ನು ನೋಡಿ ತಾಯಿ ಮತ್ತು ಮಕ್ಕಳ ನಡುವಿನ ಸಂಭಾಷಣೆಯನ್ನು ಬರೆಯಿರಿ.



ತಾಯಿ : .....

ಮಗ : .....

ಮಗಳು : .....

ತಾಯಿ : .....

ಮಗ : .....

(ಇದೇ ರೀತಿ ನಿಮ್ಮ ಮನೆಯಲ್ಲಿ ಊಟದ ಸಮಯದಲ್ಲಿ ನಡೆಯುವ ಮಾತುಕತೆ ಸಂಭಾಷಣೆಗಳನ್ನು ಗಮನಿಸಿ ಬರೆಯಿರಿ.)

.....

.....

.....

.....

.....

.....

@KTBS NOT TO BE REPUBLISHED

**ಚಟುವಟಿಕೆ 2 : ಕೊಟ್ಟಿರುವ ಚಿತ್ರಗಳನ್ನು ಗಮನಿಸಿ ನೀಡಿರುವ ಪಾತ್ರಗಳಿಗೆ ಅನುಗುಣವಾಗಿ ನಿಮ್ಮದೇ ಕಲ್ಪನೆಯ ಸಂಭಾಷಣೆಗಳನ್ನು ಬರೆಯಿರಿ.**




ತರಕಾರಿ ಮಾರುವವಳು .....

.....

ಹಣ್ಣು ಮಾರುವವನು.....

.....

ಮಡಕೆ ಮಾರುವವಳು.....

.....

ಐಸ್ ಕ್ರೀಮ್ ಮಾರುವವನು .....

.....

ಬಲೂನ್ ಮಾರುವವನು : .....

ಹಸು ಮಾರುವವನು : .....

.....

ಹಸು ಖರೀದಿಸುವವನು : .....

.....

(ಪಾತ್ರಗಳನ್ನು ನೋಡಿ ಸಂಭಾಷಣೆಯನ್ನು ಮುಂದುವರೆಸಿ ಬರೆಯಿರಿ.)

.....

.....

@KTBS NOT TO BE REPUBLISHED

ಬುನಾದಿ ಹಂತ – ಚಟುವಟಿಕೆ ಹಾಳೆ 18

# ಶಬ್ದಕೋಶ ಬಳಸೋಣ

S2T7J6

ಹೆಚ್ಚಿನ ಕಲಿಕೆಗಾಗಿ ಸ್ಕ್ಯಾನ್ ಮಾಡಿ

**ಕಲಿಕಾ ಫಲ:** ಹೊಸ ಪದಗಳನ್ನು ಶಬ್ದ ಕೋಶದಲ್ಲಿ ಹುಡುಕಿ ಅರ್ಥ ತಿಳಿದುಕೊಳ್ಳುವರು, ಪದಗಳನ್ನು ಅಕಾರಾದಿಯಾಗಿ ಜೋಡಿಸುವರು. ಶಬ್ದಕೋಶದ ಪ್ರಾಮುಖ್ಯತೆಯನ್ನು ತಿಳಿದುಕೊಳ್ಳುವರು.

**ಚಟುವಟಿಕೆ 3 :** ಕೊಟ್ಟಿರುವ ಪಟ್ಟಿಯಲ್ಲಿರುವ ಪದಗಳನ್ನು 'ಅ'ಕಾರಾಂತವಾಗಿ ಪಟ್ಟಿ ಮಾಡಿಬರೆಯಿರಿ.

| | | | | | | | |
|---|---|---|---|---|---|---|---|
| ಯಮ | ಮೃಗಾಲಯ | ಟೊಳ್ಳು | ರೇವು | ತ್ಯಾಗ | ಕಮಲಜ | ಸರೀಸೃಪ | ಶೋಕ |
| ಗೃಹಿಣಿ | ಐರಾವತ | ಹುಲ್ಲುಗಾವಲು | ಔಷಧಿ | ಬಳೆ | ಸೂಚಕ | ಟಗರು | ಆನಂದ |
| ಅಪ್ಪ | ಷರಾಯಿ | ಚಿನ್ನ | ಕೋಕಿಲ | ಅಂಗಡಿ | ಪಚ್ಚೆ | ಗಿಡಮರ | ಹೊತ್ತಿಗೆ |
| ದೈನಂದಿನ | ವಿಜೇತ | ಕ್ಷಾಮ | ಉದಯ | ಜಂಜಾಟ | ಲೋಗರ | ಮನ್ನಣೆ | ಜೈಕಾರ |
| ಪ್ರಯೋಗ | ಪತ್ರ | ಈಶ್ವರ | ಮೊಸರು | ಬರವಣಿಗೆ | ಪೊಗರು | ವೀಳ್ಯದೆಲೆ | ಲೇಖನ |

@KTBS NOT TO BE REPUBLISHED

ಮಾದರಿ :

1. ಅಂಗಡಿ
2. ಅಪ್ಪ
3. ಆನಂದ
4. .....
5. .....
6. .....
7. .....
8. .....
9. .....
10. .....
11. .....
12. .....
13. .....
14. .....
15. .....
16. .....
17. .....
18. .....
19. .....
20. .....
21. .....
22. .....
23. .....
24. .....
25. .....
26. .....
27. .....
28. .....
29. .....
30. .....
31. .....
32. .....
33. .....
34. .....
35. .....
36. .....
37. .....
38. .....
39. .....
40. .....

## ಬುನಾದಿ ಹಂತ – ಚಟುವಟಿಕೆ ಹಾಳೆ 19

# ಓದಿ–ಚಿಂತಿಸಿ–ಹೇಳಿ– 1

ಹೆಚ್ಚಿನ ಕಲಿಕೆಗಾಗಿ ಸ್ಕ್ಯಾನ್ ಮಾಡಿ

**ಕಲಿಕಾ ಫಲ:** ಪಠ್ಯ ಅಥವಾ ಪಠ್ಯೇತರ ವಿಷಯಗಳನ್ನು ಓದಿ, ಅವರಲ್ಲಿರುವ ಸಾಮಾಜಿಕ ಮೌಲ್ಯಗಳನ್ನು ಉದಾತ್ತಗುಣ, ಸ್ವಭಾವ ಸನ್ನಡತೆಗಳನ್ನು ಕುರಿತು ಚರ್ಚಿಸುವರು ಮತ್ತು ಲಿಖಿತವಾಗಿ ಅಭಿವ್ಯಕ್ತಪಡಿಸುವರು. ವಿಭಿನ್ನ ಓದುವ ಸಾಮಾಗ್ರಿಗಳನ್ನು ಓದುತ್ತಾ ಅವುಗಳ ರಚನೆಯನ್ನು ಮೆಚ್ಚಿಕೊಳ್ಳುವರು ಮತ್ತು ಅವುಗಳ ಬಗೆಗೆ ತಮ್ಮ ಮಟ್ಟಕ್ಕೆ ಅನುಗುಣವಾಗಿ ಮೌಖಿಕವಾಗಿ ಇಲ್ಲದೆ ಬರೆವಣಿಗೆ ಮೂಲಕ ತಮ್ಮ ವಿಚಾರಗಳನ್ನು ಅಭಿವ್ಯಕ್ತಿಸುವರು.

**ಚಟುವಟಿಕೆ 1 :** ಶಿಕ್ಷಕರು ಹೇಳುವ ಕಥೆಯನ್ನು ಸುಳಿವು ಬಳಸಿಕೊಂಡು, ಸರಳ ವಾಕ್ಯಗಳಲ್ಲಿ ಬರೆಯಿರಿ.

**ಸುಳಿವು**

@KTBS NOT TO BE REPUBLISHED

ಕಥೆ

@KTBS
NOT TO BE REPUBLISHED

**ಚಟುವಟಿಕೆ 2 : ಮೇಲೆ ನೀವು ಬರೆದಿರುವ ಕಥೆಗೆ ಸಂಬಂಧಿಸಿದ ಹಾಗೆ 5 ಪ್ರಶ್ನೆಗಳನ್ನು ರಚಿಸಿ, ಅವುಗಳಿಗೆ ಉತ್ತರ ಬರೆಯಿರಿ.**

## ಬುನಾದಿ ಹಂತ – ಚಟುವಟಿಕೆ ಹಾಳೆ 20

## ಓದಿ–ಚಿಂತಿಸಿ–ಹೇಳಿ– 2

ಹೆಚ್ಚಿನ ಕಲಿಕೆಗಾಗಿ ಸ್ಕ್ಯಾನ್ ಮಾಡಿ

**ಕಲಿಕಾ ಫಲ:** ಪಠ್ಯ ಅಥವಾ ಪಠ್ಯೇತರ ವಿಷಯಗಳನ್ನು ಓದಿ, ಅವರಲ್ಲಿರುವ ಸಾಮಾಜಿಕ ಮೌಲ್ಯಗಳನ್ನು ಉದಾತ್ತಗುಣ, ಸ್ವಭಾವ ಸನ್ನಡತೆಗಳನ್ನು ಕುರಿತು ಚರ್ಚಿಸುವರು ಮತ್ತು ಲಿಖಿತವಾಗಿ ಅಭಿವ್ಯಕ್ತಪಡಿಸುವರು. ವಿಭಿನ್ನ ಓದುವ ಸಾಮಗ್ರಿಗಳನ್ನು ಓದುತ್ತಾ ಅವುಗಳ ರಚನೆಯನ್ನು ಮೆಚ್ಚಿಕೊಳ್ಳುವರು ಮತ್ತು ಅವುಗಳ ಬಗೆಗೆ ತಮ್ಮ ಮಟ್ಟಕ್ಕೆ ಅನುಗುಣವಾಗಿ ಮೌಖಿಕವಾಗಿ ಇಲ್ಲದೆ ಬರೆವಣಿಗೆ ಮೂಲಕ ತಮ್ಮ ವಿಚಾರಗಳನ್ನು ಅಭಿವ್ಯಕ್ತಿಸುವರು.

**ಚಟುವಟಿಕೆ 1 :** ಕೊಟ್ಟಿರುವ ವಾಕ್ಯಗಳನ್ನು ಓದಿರಿ. ನಂತರ ಕಥೆಯನ್ನು ಚಿಂತಿಸಿ, ಕೊಟ್ಟಿರುವ ಖಾಲಿ ಜಾಗದಲ್ಲಿ

**ಕಥೆಯನ್ನು ಕ್ರಮಾನುಗತವಾಗಿ ಬರೆಯಿರಿ.**

1. ಬಾವಿಯಿಂದ ಹೊರಬರಲು ತುಂಬಾ ಪ್ರಯತ್ನ ಪಟ್ಟಿತು ನರಿ.
2. ಆ ರುಚಿಯಾದ ನೀರನ್ನು ಕುಡಿಯಲು ನರಿ ಅಲ್ಲಿಗೆ ಹೋಗಿತ್ತು' ಎಂದು ಮುಗ್ದ ಮೇಕೆ ಅಂದುಕೊಡಿತು.
3. ನರಿಯನ್ನು ನಂಬಿದ ಮೇಕೆ ಬಾವಿಗೆ ನೆಗೆಯಿತು.
4. ಒಂದು ದಿನ ನರಿಯೊಂದು ಕಾಡಿನ ಬಾವಿಯಲ್ಲಿ ಬಿತ್ತು.
5. ಯಾವುದೇ ಕೆಲಸ ಮಾಡುವ ಮುಂಚೆ ಯೋಚಿಸಬೇಕು ಎಂದು ಮೇಕೆ ಅಂದುಕೊಂಡಿತು.
6. ಈ ರುಚಿಯಾದ ನೀರನ್ನು ನಾನು ನೋಡಿಯೇ ಇರಲಿಲ್ಲ ಇದನ್ನು ಕುಡಿಯಬೇಕೆಂದರೆ ಇಲ್ಲಿಗೆ ಬರಬೇಕು ಎಂದಿತು ನರಿ.
7. ಕೆಲ ಸಮಯದ ನಂತರ ನೀರುಕುಡಿಯಲು ಬಾವಿಯ ಹತ್ತಿರ ಮೇಕೆ ಬಂದಿತು.
8. ಮೇಕೆಯ ಬೆನ್ನಿನ ಮೇಲೆ ನೆಗೆದು ನಿಂತ ನರಿ ಬಾವಿಯಿಂದ ಹತ್ತಿ ಹೊರ ಬಂದಿತು.
9. ನರಿಯೆ ನನಗೆ ಕುಡಿಯಲು ಸ್ವಲ್ಪ ನೀರು ಕೊಡುತ್ತೀಯ ಎಂದು ಕೇಳಿತು ಮೇಕೆ.
10. ಬಾವಿಯಲ್ಲಿ ಬಿದ್ದ ಮೇಕೆಯುಮೇಲೆಬರಲು ಯಾರು ಸಹಾಯಮಾಡಲಿಲ್ಲ. ಆದ್ದರಿಂದ ಅದು ಅಲ್ಲೇ ಉಳಿಯಿತು

**ಕ್ರಮಾನುಗತ ರೂಪ**

**1.** _____

**2.** _____

**3.** _____

**4.** _____

**5.** _____

**6.** _____

**7.** _____

**8.** _____

**9.** _____

**10.** _____

©KTBS NOT TO BE REPUBLISHED

ಬುನಾದಿ ಹಂತ – ಚಟುವಟಿಕೆ ಹಾಳೆ 21

# ವಚನಗಳು, ನಾಮಪದಗಳನ್ನು ತಿಳಿಯೋಣ

N8V6C7

ಹೆಚ್ಚಿನ ಕಲಿಕೆಗಾಗಿ ಸ್ಕ್ಯಾನ್ ಮಾಡಿ

**ಕಲಿಕಾ ಫಲ:** ವಚನಗಳು, ನಾಮಪದದ ವಿಧಗಳು ಇವುಗಳನ್ನು ತರಗತಿಯಲ್ಲಿ ಉದಾಹರಣೆಗಳ ಸಹಿತ ವಿವರಿಸಿ ಅರ್ಥೈಸುವರು.

**ಒಂದು ವಸ್ತು ಅಥವಾ ಒಬ್ಬ ವ್ಯಕ್ತಿಯನ್ನು ಸೂಚಿಸುವ ಪದಗಳನ್ನು ಏಕವಚನ ಎನ್ನುವರು.**

**ಒಂದಕ್ಕಿಂತ ಹೆಚ್ಚು ವಸ್ತು ಅಥವಾ ವ್ಯಕ್ತಿಗಳನ್ನು ಸೂಚಿಸುವ ಪದಗಳು ಬಹುವಚನ ಎನ್ನುವರು.**

ಏಕವಚನದ ನಾಮಪ್ರಕೃತಿಗಳಿಗೆ ಅರು, ಗಳು, ಉ , ಅಂದಿರು ಇತ್ಯಾದಿ ಬಹುವಚನ ಸೂಚಕಗಳು ಸೇರಿ ಬಹುವಚನ ಪದಗಳಾಗುತ್ತವೆ.

**ಉದಾಹರಣೆ:–** ಮನುಷ್ಯ + ಅರು = **ಮನುಷ್ಯರು**

ಹೂವು + ಗಳು = **ಹೂವುಗಳು**

ಅಕ್ಕ + ಅಂದಿರು = **ಅಕ್ಕಂದಿರು**

**ನಾಮಪದ :** ವ್ಯಕ್ತಿಯ, ಸ್ಥಳದ, ಪ್ರಾಣಿ, ಪಕ್ಷಿ ಹಾಗೂ ಘಟನೆಯ ಹೆಸರನ್ನು ಸೂಚಿಸುವ ಪದಗಳೇ ನಾಮಪದಗಳು. ನಾಮಪ್ರಕೃತಿಗಳಿಗೆ ವಿಭಕ್ತಿ ಪ್ರತ್ಯಯಗಳು ಸೇರಿ ಆಗುವ ಪದವೇ ನಾಮಪದ.

ನಾಮಪದದ ವಿಧಗಳಲ್ಲಿ ವಸ್ತುವಾಚಕವು ಒಂದು ವಿಭಾಗವಾಗಿದೆ. ಇಂತಹ ವಸ್ತು ವಾಚಕಗಳನ್ನು ರೂಢನಾಮ, ಅಂಕಿತನಾಮ, ಅನ್ವರ್ಥನಾಮಗಳೆಂಬ ಮೂರು ವಿಭಾಗಗಳಾಗಿ ಮಾಡಲಾಗಿದೆ.

**ರೂಢನಾಮ :** ರೂಢಿಯಿಂದ ಬಂದಿರುವ ನಾಮಪದಗಳನ್ನು ರೂಢನಾಮ ಎನ್ನುವರು.

ಉದಾಹರಣೆ :– ನದಿ, ಪರ್ವತ, ಕೆರೆ, ಬಾವಿ ಇತ್ಯಾದಿ

**ಅಂಕಿತನಾಮ :** ವ್ಯವಹಾರಕ್ಕಾಗಿ ಅಥವಾ ಗುರುತಿಸಲು ಇಟ್ಟ ಹೆಸರನ್ನು ಅಂಕಿತನಾಮ ಎನ್ನುವರು.

ಉದಾಹರಣೆ :– ಕಾವೇರಿ, ಹಿಮಾಲಯ, ಶಂಕರ, ಪದ್ಮಾವತಿ ಇತ್ಯಾದಿ

**ಅನ್ವರ್ಥನಾಮ :** ಅರ್ಥಕ್ಕೆ ಅನುಗುಣವಾಗಿ ಬಳಸುವಂತಹ ನಾಮಪದಗಳನ್ನು ಅನ್ವರ್ಥನಾಮ ಎನ್ನುವರು.

**ಚಟುವಟಿಕೆ 1 :** ಕೊಟ್ಟಿರುವ ಪದಗಳನ್ನು ಮಾದರಿಯಂತೆಕೂಡಿಸಿ ಬರೆಯಿರಿ

**ಮಾದರಿ :** ತಾಯಿ + ಅಂದಿರು = ತಾಯಂದಿರು.

1. ತಂಗಿ + ಅರು =
2. ಮರ + ಗಳು =
3. ಅಣ್ಣ + ಅಂದಿರು =

© KTBS NOT TO BE REPUBLISHED

**ಚಟುವಟಿಕೆ 2 : ಕೊಟ್ಟಿರುವ ಪದಗಳನ್ನು ರೂಢನಾಮ, ಅಂಕಿತನಾಮ, ಅನ್ವರ್ಥನಾಮ ಪದಗಳಾಗಿ ವಿಂಗಡಿಸಿ ಬರೆಯಿರಿ.**

| ಬೆಟ್ಟ | ರಮೇಶ | ವಿಜ್ಞಾನಿ | ಶಿಲ್ಪ | ನದಿ | ಶಿಕ್ಷಕ |
|---|---|---|---|---|---|
| ಮರ | ಮಹೇಶ | ವೈದ್ಯ | ಕಲ್ಲು | ಬಸಮ್ಮ | ವ್ಯಾಪಾರಿ |

| ರೂಢನಾಮ | ಅಂಕಿತನಾಮ | ಅನ್ವರ್ಥನಾಮ |
|---|---|---|
| | | |
| | | |
| | | |

**ಚಟುವಟಿಕೆ 3 : ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸಿ.**

1. ಅಂಕಿತನಾಮ ಎಂದರೇನು?

ಉತ್ತರ:–

2. ರೂಢನಾಮ ಎಂದರೇನು?

ಉತ್ತರ:–

3. ಅನ್ವರ್ಥನಾಮ ಎಚಿದರೇನು?

ಉತ್ತರ:–

**ಚಟುವಟಿಕೆ 4 : ಕೊಟ್ಟಿರುವ ಲೇಖನವನ್ನು ಓದಿ, ಅದರಲ್ಲಿರುವ ರೂಢನಾಮ, ಅಂಕಿತನಾಮ, ಅನ್ವರ್ಥನಾಮ ಪದಗಳನ್ನು ಪಟ್ಟಿ ಮಾಡಿರಿ.**

ನಮಸ್ಕಾರ ಸ್ನೇಹಿತರೆ,

ನನ್ನ ಹೆಸರು ಚೈತನ್ಯ. ನನಗೆ ಪ್ರಕೃತಿ ಎಂದರೆ ಬಹಳ ಇಷ್ಟ. ಗಿಡಮರಗಳನ್ನು ಬೆಳೆಸುವುದು. ನನ್ನ ಖುಷಿಯ ಅಭ್ಯಾಸ ಕಾಡು ಸುತ್ತುವುದು. ಪರಿಸರಕ್ಕೆ ಸಂಬಂಧಿಸಿದ ಪುಸ್ತಕಗಳನ್ನು ಸದಾ ಓದುತ್ತಿರುತ್ತೇನೆ. ಮುಂದೆ ಪರಿಸರ ವಿಜ್ಞಾನಿ ಆಗಬೇಕೆಂದುಕೊಂಡಿದ್ದೇನೆ. ಅದಕ್ಕಾಗಿ ಈಗಿನಿಂದಲೇ ನನ್ನ ಸ್ನೇಹಿತರಾದ ಮಿಂಚು, ರಕ್ಷಿತಾ ಅವರ ಬಳಿ ಇರುವ ಮತ್ತಷ್ಟು ಪರಿಸರಕ್ಕೆ ಸಂಬಂಧಿಸಿದ ಪುಸ್ತಕಗಳನ್ನು ತೆಗೆದುಕೊಂಡು ಓದುತ್ತಿದ್ದೇನೆ. ರಸ್ತೆಯ ಬದಿಯಲ್ಲಿರುವ ಗಿಡಮರಗಳಿಗೆ ಬೇಸಿಗೆಯಲ್ಲಿ ನೆರೆಹೊರೆಯವರೊಡನೆ ನೀರು ಹಾಕುತ್ತೇನೆ ಮನೆಯಲ್ಲಿ ಸಣ್ಣ ಕೈತೋಟವನ್ನು ತಂದೆ ತಾಯಿಯ ಜೊತೆ ಸೇರಿ ಬೆಳೆಸಿದ್ದೇನೆ.

| ರೂಢನಾಮ | ಅಂಕಿತನಾಮ | ಅನ್ವರ್ಥನಾವ |
|---|---|---|
| | | |
| | | |
| | | |

@KTBS NOT TO BE REPUBLISHED

**ಚಟುವಟಿಕೆ 4 : ಕೊಟ್ಟಿರುವ ಲೇಖನವನ್ನು ಓದಿ, ಅದರಲ್ಲಿರುವ ರೂಢನಾಮ, ಅಂಕಿತನಾಮ, ಅನ್ವರ್ಥನಾಮ ಪದಗಳನ್ನು ಪಟ್ಟಿ ಮಾಡಿರಿ.**

ನಮಸ್ಕಾರ ಸ್ನೇಹಿತರೆ,

ನನ್ನ ಹೆಸರು ಚೈತನ್ಯ. ನನಗೆ ಪ್ರಕೃತಿ ಎಂದರೆ ಬಹಳ ಇಷ್ಟ. ಗಿಡಮರಗಳನ್ನು ಬೆಳೆಸುವುದು. ನನ್ನ ಖುಷಿಯ ಅಭ್ಯಾಸ ಕಾಡು ಸುತ್ತುವುದು. ಪರಿಸರಕ್ಕೆ ಸಂಬಂಧಿಸಿದ ಪುಸ್ತಕಗಳನ್ನು ಸದಾ ಓದುತ್ತಿರುತ್ತೇನೆ. ಮುಂದೆ ಪರಿಸರ ವಿಜ್ಞಾನಿ ಆಗಬೇಕೆಂದುಕೊಂಡಿದ್ದೇನೆ. ಅದಕ್ಕಾಗಿ ಈಗಿನಿಂದಲೇ ನನ್ನ ಸ್ನೇಹಿತರಾದ ಮಿಂಚು, ರಕ್ಷಿತಾ ಅವರ ಬಳಿ ಇರುವ ಮತ್ತಷ್ಟು ಪರಿಸರಕ್ಕೆ ಸಂಬಂಧಿಸಿದ ಪುಸ್ತಕಗಳನ್ನು ತೆಗೆದುಕೊಂಡು ಓದುತ್ತಿದ್ದೇನೆ. ರಸ್ತೆಯ ಬದಿಯಲ್ಲಿರುವ ಗಿಡಮರಗಳಿಗೆ ಬೇಸಿಗೆಯಲ್ಲಿ ನೆರೆಹೊರೆಯವರೊಡನೆ ನೀರು ಹಾಕುತ್ತೇನೆ ಮನೆಯಲ್ಲಿ ಸಣ್ಣ ಕೈತೋಟವನ್ನು ತಂದೆ ತಾಯಿಯ ಜೊತೆ ಸೇರಿ ಬೆಳೆಸಿದ್ದೇನೆ.

| ರೂಢನಾಮ | ಅಂಕಿತನಾಮ | ಅನ್ವರ್ಥನಾಮ |
|---|---|---|
| | | |
| | | |
| | | |
| | | |
| | | |
| | | |
| | | |

@KTBS NOT TO BE REPUBLISHED

ಬುನಾದಿ ಹಂತ – ಚಟುವಟಿಕೆ ಹಾಳೆ 22

# ಸರ್ವನಾಮಗಳನ್ನು ತಿಳಿಯೋಣ

F7N1G9

ಹೆಚ್ಚಿನ ಕಲಿಕೆಗಾಗಿ ಸ್ಕ್ಯಾನ್ ಮಾಡಿ

**ಕಲಿಕಾ ಫಲ :** ಸರ್ವನಾಮದ ವಿಧಗಳನ್ನು ತರಗತಿಯಲ್ಲಿ ಉದಾಹರಣೆಗಳ ಸಹಿತ ವಿವರಿಸಿ ಅರ್ಥೈಸುವರು.

**ಸರ್ವನಾಮ :** ನಾಮಪದಗಳ ಬದಲಾಗಿ ಬಳಸುವ ಪದಗಳನ್ನು ಸರ್ವನಾಮಗಳು ಎನ್ನುವರು.

ಉದಾಹರಣೆ– ನಾನು, ಅವರು. ಅವಳು, ನೀವು, ತಾವು

ಸರ್ವನಾಮಗಳನ್ನು ಮೂರು ವಿಧಗಳಾಗಿ ವಿಂಗಡಿಸಲಾಗಿದೆ.

1. ಪುರುಷಾರ್ಥಕ ಸರ್ವನಾಮ
2. ಪ್ರಶ್ನಾರ್ಥಕ ಸರ್ವನಾಮ
3. ಆತ್ಮಾರ್ಥಕ ಸರ್ವನಾಮ

@KTBS NOT TO BE REPUBLISHED

**1. ಪುರುಷಾರ್ಥಕ ಸರ್ವನಾಮಗಳಲ್ಲಿ ಮೂರು ವಿಧ.** ಅವುಗಳೆಂದರೆ,

ಉತ್ತಮ, ಪುರುಷ – **ನಾನು, ನಾವು**

ಮಧ್ಯಮ ಪುರುಷ – **ನೀನು, ನೀವು**

ಪ್ರಥಮ ಪುರುಷ – **ಅವನು, ಅವಳು, ಇವರು, ಇದು, ಅದು** ಇತ್ಯಾದಿ

**2. ಪ್ರಶ್ನಾರ್ಥಕ ಸರ್ವನಾಮ :** ಪ್ರಶ್ನೆಗೆ ಸಂಬಂಧಿಸಿದ ಸರ್ವನಾಮಗಳೇ ಪ್ರಶ್ನಾರ್ಥಕ ಸರ್ವನಾಮಗಳು

ಉದಾಹರಣೆ– ಯಾರು? ಎಲ್ಲಿ? ಎಷ್ಟು? ಯಾವುದು? ಇತ್ಯಾದಿ

**3. ಆತ್ಮಾರ್ಥಕ ಸರ್ವನಾಮ :** ಮಾತನಾಡುವವನು ತನಗೂ ಹಾಗೂ ಇತರರಿಗೂ ಗೌರವ ಸೂಚಕವಾಗಿ ಬಳಸುವ ಸರ್ವನಾಮಗಳನ್ನು ಆತ್ಮಾರ್ಥಕ ಸರ್ವನಾಮ ಎನ್ನುತ್ತಾರೆ. ಇವು ಸಾಮಾನ್ಯವಾಗಿ ಪ್ರಥಮ ಹಾಗೂ ಮಧ್ಯಮ ಪುರುಷದ ಅರ್ಥವನ್ನು ನೀಡುತ್ತವೆ.

ಉದಾಹರಣೆ– ತಾನು, ತಾವು, ತನ್ನ, ತಮ್ಮ ಇತ್ಯಾದಿ

**ಚಟುವಟಿಕೆ 1 :** ಕೊಟ್ಟಿರುವ ಮಾದರಿ ವಾಕ್ಯದಂತೆ ಸರ್ವನಾಮಗಳನ್ನು ಬಳಸಿ, ವಾಕ್ಯಗಳನ್ನು ಬರೆಯಿರಿ.

ಮಾದರಿ : ಶಾಮನು ನನಗೆ ಒಳ್ಳೆಯ ಗೆಳೆಯ. ಅವನೊಂದಿಗೆ ನಾನು ಓದಿದ ವಿಷಯಗಳನ್ನು ಚರ್ಚಿಸುತ್ತೇನೆ.

1. _____

2. _____

3. _____

4. _____

**ಚಟುವಟಿಕೆ 2 :** **ಖಾಲಿ ಇರುವ ಜಾಗದಲ್ಲಿ ಸರ್ವನಾಮವನ್ನು ತುಂಬಿರಿ ನಂತರ ವಾಕ್ಯವನ್ನು ಓದಿರಿ.**

1. _____ದಿನವೂ ಪ್ರಾರ್ಥನೆ ಮಾಡುತ್ತೇನೆ.

2. ಚೇತನ,_____ಸಾಲಿನಲ್ಲಿ ನಿಲ್ಲು.

3. ನಮ್ಮ ಜೊತೆ ಆಟ ಆಡಲು_____ ಬರುತ್ತಾರೆ.

**ಚಟುವಟಿಕೆ 3 :** **ಆವರಣದಲ್ಲಿ ನೀಡಿರುವ ಪದಗಳಲ್ಲಿ ಸೂಕ್ತವಾದದ್ದನ್ನು ಆರಿಸಿ ಬಿಟ್ಟ ಸ್ಥಳದಲ್ಲಿ ಬರೆಯಿರಿ.**

1. ಸ್ವಾಮೀಜಿ, _____ ಮನೆಗೆ ಬಂದಿದ್ದು ಬಹಳ ಸಂತೋಷವಾಯಿತು. (ನಾವು, ತಾವು,ನೀನು, ನಾನು)

2. ರವಿಯು _____ ಮನೆಯಿಂದ ಸಿಹಿ ತಿಂಡಿಗಳನ್ನು ತಂದಿದ್ದನು. (ನನ್ನ, ತನ್ನ, ನೀನು, ನಿನ್ನ)

3. ಜ್ಞಾನಿಗಳು_____ ಜ್ಞಾನದ ಬಗ್ಗೆ ಎಂದು ಅಹಂಕಾರ ಪಡುವುದಿಲ್ಲ. (ತಮ್ಮ, ತನ್ನ, ತಮಗೆ, ನಿಮ್ಮ)

4. ನನ್ನ ತಂಗಿಯು, ನನ್ನ ಜೊತೆ _____ ಪುಸ್ತಕದ ಅಂಗಡಿಗೆ ಬರುತ್ತೇನೆ ಎಂದಳು. (ತನ್ನ, ತಾನೂ, ತಮ್ಮ, ತಾವು)

@KTBS NOT TO BE REPUBLISHED

ಬುನಾದಿ ಹಂತ – ಚಟುವಟಿಕೆ ಹಾಳೆ 23

# ಪತ್ರ ಬರೆಯೋಣ–1

ಹೆಚ್ಚಿನ ಕಲಿಕೆಗಾಗಿ ಸ್ಕ್ಯಾನ್ ಮಾಡಿ

**ಕಲಿಕಾ ಫಲ:** ಪತ್ರಲೇಖನ ಬರೆಯುವ ಕ್ರಮವನ್ನು ಕಲಿಯುವ ಮೂಲಕ ದೈನಂದಿನ ವ್ಯಾವಹಾರಿಕ ಸಂದರ್ಭಗಳಲ್ಲಿ ಲಿಖಿತ ಅಭಿವ್ಯಕ್ತಿ ಕೌಶಲ್ಯ ಬೆಳೆಸಿಕೊಳ್ಳುವರು.

ಪತ್ರವು ಸಾಮಾನ್ಯ ಕಾಳಜಿಯ ನಿರ್ದಿಷ್ಟ ವಿಷಯಕ್ಕೆ ಸಂಬಂಧಿಸಿದಂತೆ ಒಬ್ಬ ವ್ಯಕ್ತಿಯು ಮತ್ತೊಬ್ಬ ವ್ಯಕ್ತಿಗೆ ಬರೆದ ಸಂದೇಶವಾಗಿರುತ್ತದೆ.

ಎರಡು ರೀತಿಯ ಪತ್ರ ಲೇಖನಗಳನ್ನು ಕಾಣಬಹುದು.

**1. ವ್ಯಾವಹಾರಿಕ ಪತ್ರ ಲೇಖನ. 2. ಖಾಸಗಿ/ಕೌಟುಂಬಿಕ/ವೈಯಕ್ತಿಕ ಪತ್ರ ಲೇಖನ.**

ವ್ಯಾವಹಾರಿಕ ಪತ್ರಲೇಖನ :– ಒಂದು ವಿಷಯಕ್ಕೆ ಸಂಬಂಧಿಸಿದಂತೆ ನಿರ್ದಿಷ್ಟ ಅಧಿಕಾರಿಗೆ, ಆಡಳಿತದ ವಿಷಯ, ಜಾಹೀರಾತು, ಪ್ರಕಟಣೆ ಹಾಗೂ ಇತರೆ ವಿಷಯಗಳಿಗೆ ಸಂಬಂಧಿಸಿದಂತೆ ಬರೆಯುವ ಮನವಿ ಪತ್ರಗಳು.

ಖಾಸಗಿ / ಕೌಟುಂಬಿಕ / ವೈಯಕ್ತಿಕ ಪತ್ರ ಲೇಖನ :– ಖಾಸಗಿ, ಕೌಟುಂಬಿಕ, ವೈಯಕ್ತಿಕ ವಿಷಯಗಳನ್ನು ಕುರಿತು ತಂದೆ, ತಾಯಿ, ಅಣ್ಣ, ತಮ್ಮ, ಅಕ್ಕ, ತಂಗಿ, ಸ್ನೇಹಿತರು ಹಾಗೂ ಇತರೆ ರಕ್ತ ಸಂಬಂಧಿಕರಿಗೆ ಬರೆಯುವ ಪತ್ರಗಳು.

**ಖಾಸಗಿ ಪತ್ರ ಲೇಖನಗಳಲ್ಲಿ ಅನುಸರಿಸುವ ಹಂತಗಳು :**

* ಕ್ಷೇಮ, ಶ್ರೀ, ದಿನಾಂಕ, ಸ್ಥಳ, ಕ್ಷೇಮ ವಿಚಾರ.
* ಪತ್ರದ ಒಡಲು, ವಿಷಯ ನಿರೂಪಣೆ.
* ಮುಕ್ತಾಯ, ಇಂತಿ, ಸಂಬೋಧನೆ, ಸಹಿ, ಹೊರವಿಳಾಸ.
* ಭಾಷಾ ಶೈಲಿ, ಪದಬಳಕೆ, ವಿನ್ಯಾಸ.
* ಕೌಟುಂಬಿಕ ಪತ್ರಲೇಖನದಲ್ಲಿ ನಿರ್ದಿಷ್ಟ ಸಂಬೋಧನಾ ವಾಕ್ಯಗಳನ್ನು ಬಳಸುತ್ತೇವೆ.

ಚಟುವಟಿಕೆ 1 : **ಕೊಟ್ಟಿರುವ ಸಂಬೋಧನೆಗಳನ್ನು ಹೊಂದಿಸಿ ಬರೆಯೋಣ.**

| ಕ್ರ.ಸಂ. | 'ಅ' ಸಂಬೋಧನೆ | 'ಬ' ಇವರಿಗೆ | ಉತ್ತರಗಳು |
|---|---|---|---|
| 1. | ಮಾತೃಶ್ರೀಯವರಿಗೆ | ತಮ್ಮ/ತಂಗಿ/ಸ್ನೇಹಿತ/ಸ್ನೇಹಿತೆ | |
| 2. | ತೀರ್ಥರೂಪು ಸಮಾನರಾದ | ಅಕ್ಕ/ಚಿಕ್ಕಮ್ಮ/ದೊಡ್ಡಮ್ಮ/ಅತ್ತೆ | |
| 3. | ನನ್ನ ಪ್ರೀತಿಯ | ತಂದೆಗೆ | |
| 4. | ಮಾತೃಶ್ರೀ ಸಮಾನರಾದ | ಅಣ್ಣ/ಚಿಕ್ಕಪ್ಪ/ದೊಡ್ಡಪ್ಪ/ಮಾವ | |
| 5. | ತೀರ್ಥರೂಪುರವರಿಗೆ | ತಾಯಿಗೆ | |

@KTBS NOT TO BE REPUBLISHED

ಬುನಾದಿ ಹಂತ – ಚಟುವಟಿಕೆ ಹಾಳೆ 24

# ಪತ್ರ ಬರೆಯೋಣ - 2

ಹೆಚ್ಚಿನ ಕಲಿಕೆಗಾಗಿ ಸ್ಕ್ಯಾನ್ ಮಾಡಿ

**ಕಲಿಕಾ ಫಲ:** ಪತ್ರಲೇಖನ ಬರೆಯುವ ಕ್ರಮವನ್ನು ಕಲಿಯುವ ಮೂಲಕ ದೈನಂದಿನ ವ್ಯಾವಹಾರಿಕ ಸಂದರ್ಭಗಳಲ್ಲಿ ಲಿಖಿತ ಅಭಿವ್ಯಕ್ತಿ ಕೌಶಲ್ಯ ಬೆಳೆಸಿಕೊಳ್ಳುವರು.

**ಚಟುವಟಿಕೆ 1 : ಕೊಟ್ಟಿರುವ ಮಾದರಿ ಪತ್ರವನ್ನು ಗಮನಿಸಿ, ಪತ್ರಬರೆಯಿರಿ.**

**ಮಾದರಿಪತ್ರ :** ನಿಮ್ಮನ್ನು ಮೈಸೂರು ಜಿಲ್ಲೆಯ ಟಿ. ನರಸೀಪುರದ ವಿದ್ಯಾವಾಹಿನಿ ಪ್ರೌಢಶಾಲೆಯಲ್ಲಿ ಓದುತ್ತಿರುವ ವಿಜಯ ಎಂದು ಭಾವಿಸಿಕೊಂಡು ನಿಮ್ಮ ಶಾಲೆಯಲ್ಲಿ ನಡೆದ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮ ಕುರಿತು ಮಂಗಳೂರಿನ ಶ್ರೀ ಮಂಜುನಾಥ ಪ್ರೌಢಶಾಲೆಯಲ್ಲಿ 8ನೇ ತರಗತಿ ಓದುತ್ತಿರುವ ನಿಮ್ಮ ಗೆಳತಿ ವಸಂತಳಿಗೆ ಒಂದು ಪತ್ರ ಬರೆಯಿರಿ.

ಕ್ಷೇಮ ಶ್ರೀ ದಿನಾಂಕ :

ಸ್ಥಳ :

**ನನ್ನ ಪ್ರೀತಿಯ ಸ್ನೇಹಿತೆ ವಸಂತಳಿಗೆ,**

ಗೆಳತಿ, ನಾನು ಇಲ್ಲಿ ಆರೋಗ್ಯವಾಗಿದ್ದೇನೆ. ಅಲ್ಲಿ ನೀನು ಕ್ಷೇಮವಾಗಿದ್ದೀಯ ಎಂದು ಭಾವಿಸಿರುತ್ತೇನೆ. ನಿನ್ನ ವಿದ್ಯಾಭ್ಯಾಸ ಚೆನ್ನಾಗಿ ನಡೆಯುತ್ತಿದೆ ಎಂದು ನಂಬಿರುತ್ತೇನೆ. ನನ್ನ ವಿದ್ಯಾಭ್ಯಾಸವು ಕೂಡ ಉತ್ತಮವಾಗಿ ನಡೆಯುತ್ತಿದೆ.

ನಮ್ಮ ಶಾಲೆಯಲ್ಲಿ ದಿನಾಂಕ–01–11–2023ರಂದು ಕನ್ನಡ ರಾಜ್ಯೋತ್ಸವವನ್ನು ಆಚರಿಸಲಾಯಿತು. ನಾನು ಕನ್ನಡ ನಾಡ ಹಬ್ಬದ ಬಗ್ಗೆ ಭಾಷಣ ಮಾಡಿದೆ. ನನ್ನ ಭಾಷಣದ ಬಗ್ಗೆ ಎಲ್ಲಾ ಶಿಕ್ಷಕರೂ ಮೆಚ್ಚುಗೆ ವ್ಯಕ್ತಪಡಿಸಿದರು. ಕಾರ್ಯಕ್ರಮದಲ್ಲಿ ಸ್ಥಳೀಯ ಕನ್ನಡ ಕಲಾ ಪ್ರತಿಭೆಗಳನ್ನು ಸನ್ಮಾನಿಸಲಾಯಿತು. ಕನ್ನಡ ಹಬ್ಬದ ಮಹತ್ವವನ್ನು ನಮ್ಮ ಮುಖ್ಯಶಿಕ್ಷಕರು ತಮ್ಮ ಅಧ್ಯಕ್ಷೀಯ ಭಾಷಣದಲ್ಲಿ ತಿಳಿಸಿಕೊಟ್ಟರು. ನಿಮ್ಮ ಶಾಲೆಯಲ್ಲಿ ಆಚರಿಸಿದ ಕನ್ನಡ ರಾಜ್ಯೋತ್ಸವವನ್ನು ಕುರಿತು ಪತ್ರ ಬರೆ. ನಿಮ್ಮ ತಂದೆತಾಯಿಗೆ ನನ್ನ ನಮಸ್ಕಾರಗಳನ್ನು ತಿಳಿಸು. ನಿನ್ನ ಪತ್ರವನ್ನು ನಿರೀಕ್ಷಿಸುತ್ತೇನೆ.

ಇಂತಿ ನಿನ್ನ ಪ್ರೀತಿಯ ಗೆಳತಿ,

(ಸಹಿ/–)

ವಿಜಯ

© KTBS NOT TO BE REPUBLISHED

| ಹೊರ ವಿಳಾಸ | |
|---|---|
| ಇವರಿಂದ,<br>ವಿಜಯ<br>8 ನೇ ತರಗತಿ,<br>ವಿದ್ಯಾವಾಹಿನಿ ಪ್ರೌಢಶಾಲೆ, | ಇವರಿಗೆ,<br>ವಸಂತ,<br>8 ನೇ ತರಗತಿ,<br>ಶ್ರೀ ಮಂಜುನಾಥ ಪ್ರೌಢಶಾಲೆ, |

**ಚಟುವಟಿಕೆ 1 :** ಕೊಟ್ಟಿರುವ ಮಾದರಿ ಪತ್ರವನ್ನು ಗಮನಿಸಿ, ಪತ್ರ ಬರೆಯಿರಿ.

**1. ನಿಮ್ಮನ್ನು ಬೆಂಗಳೂರಿನ ಬಸವೇಶ್ವರನಗರದಲ್ಲಿರುವ ವಿವೇಕಾನಂದ ಪ್ರೌಢಶಾಲೆಯಲ್ಲಿ ಓದುತ್ತಿರುವ ರಂಗರಾಜು ಎಂದು ಭಾವಿಸಿಕೊಂಡು, ನಿಮ್ಮ ಶಾಲೆಯಲ್ಲಿ ನಡೆದ ಪ್ರತಿಭಾ ಕಾರಂಜಿಯನ್ನು ಕುರಿತು ರಾಯಚೂರಿನ ಭೀಮನಗರದ ಸರ್ಕಾರಿ ಪ್ರೌಢಶಾಲೆಯಲ್ಲಿ ಓದುತ್ತಿರುವ ಸುರೇಶನಿಗೆ ಒಂದು ಪತ್ರ ಬರೆಯಿರಿ.**

ಕ್ಷೇಮ ಶ್ರೀ ದಿನಾಂಕ :

ಸ್ಥಳ :

ನನ್ನ ಪ್ರೀತಿಯ ಸ್ನೇಹಿತ .....

ಗೆಳೆಯ, ನಾನು ಇಲ್ಲಿ ಆರೋಗ್ಯವಾಗಿದ್ದೇನೆ. ಅಲ್ಲಿ ನೀನು ಕ್ಷೇಮವಾಗಿದ್ದೀಯೆ ಎಂದು ಭಾವಿಸಿರುತ್ತೇನೆ. ನಿನ್ನ ವಿದ್ಯಾಭ್ಯಾಸ ಚೆನ್ನಾಗಿ ನಡೆಯುತ್ತಿದೆ ಎಂದು ಭಾವಿಸಿದ್ದೇನೆ. ನನ್ನ ವಿದ್ಯಾಭ್ಯಾಸವು ಕೂಡ ಉತ್ತಮವಾಗಿ ನಡೆಯುತ್ತಿದೆ.

.....

.....

.....

.....

.....

.....

ಇಂತಿ ನಿನ್ನ ಪ್ರೀತಿಯ ಸ್ನೇಹಿತ

(ಸಹಿ/–)

.....

@KTBS NOT TO BE REPUBLISHED

| ಹೊರ ವಿಳಾಸ | |
|---|---|
| **ಇವರಿಂದ,** | **ಇವರಿಗೆ,** |
| ..... | ..... |
| ..... | ..... |
| ..... | ..... |
| ..... | ..... |

ಬೆಂಬಲಿತ ಕಲಿಕೆಯ ಹಂತ – ಚಟುವಟಿಕೆ ಹಾಳೆ 1

# ಅಭಿವ್ಯಕ್ತಿ


J8E1X2

ಹೆಚ್ಚಿನ ಕಲಿಕೆಗಾಗಿ ಸ್ಕ್ಯಾನ್ ಮಾಡಿ

**ಕಲಿಕಾ ಫಲ** : ತಾವು ಕಂಡ ಚಿತ್ರ ಘಟನೆ ಸನ್ನಿವೇಶ, ಚಿತ್ರಸರಣಿ ಅಥವಾ ದೃಶ್ಯವನ್ನು ಕುರಿತು ಪಡೆದ ಅನುಭವಗಳನ್ನು ತಮ್ಮ ಸೃಜನಾತ್ಮಕತೆಯೊಂದಿಗೆ ಮೌಖಿಕ, ಲಿಖಿತವಾಗಿ ವ್ಯಕ್ತಪಡಿಸುವರು.

**ಚಟುವಟಿಕೆ 1 :** ಕೊಟ್ಟಿರುವ ಗ್ರಂಥಾಲಯಕ್ಕೆ ಸಂಬಂಧಿಸಿದ ಚಿತ್ರವನ್ನು ಗಮನಿಸಿ, ಗ್ರಂಥಾಲಯ ಮತ್ತು ಉದ್ಯಾನವನದಲ್ಲಿ ಪಾಲಿಸಬೇಕಾದ ನಿಯಮಗಳನ್ನು ಪಟ್ಟಿ ಮಾಡಿರಿ.





@KTBS NOT TO BE REPUBLISHED

ಬೆಂಬಲಿತ ಕಲಿಕೆಯ ಹಂತ – ಚಟುವಟಿಕೆ ಹಾಳೆ 2

# ಸರಳವಾಕ್ಯ ರಚನೆ

ಹೆಚ್ಚಿನ ಕಲಿಕೆಗಾಗಿ ಸ್ಕ್ಯಾನ್ ಮಾಡಿ

**ಕಲಿಕಾ ಫಲ** : ಭಾಷೆಯ ಸೂಕ್ಷ್ಮ ಅಂಶಗಳಾದ ಸ್ವರಭಾರ, ಲಯ, ಲೇಖನ ಚಿಹ್ನೆಗಳು ಬರೆವಣಿಗೆಯ ಅಂತರ, ಗಾತ್ರಗಳ ಬಗ್ಗೆ ಗಮನ ಹರಿಸುತ್ತಾ ಸರಳ ವಾಕ್ಯಗಳ ರಚನೆ ಕಲಿತು, ವಾಕ್ಯ ರಚಿಸುವರು.

**ಚಟುವಟಿಕೆ 1 :** ಮಾದರಿಯಂತೆ ಪದಗಳನ್ನು ಕರ್ತೃ, ಕರ್ಮ, ಕ್ರಿಯಾ ಪದಗಳ ಮೂಲಕ ಅರ್ಥಪೂರ್ಣ ವಾಕ್ಯರಚನೆ ಮಾಡಿರಿ ಹಾಗೂ ಕರ್ತೃ, ಕರ್ಮ, ಕ್ರಿಯಾ ಪದಗಳನ್ನು ಆರಿಸಿ ಬರೆಯಿರಿ.

**ಮಾದರಿ:–** ಹೊಲವನ್ನು, ರೈತನು, ಉಳುತ್ತಾನೆ.
ರೈತನು ಹೊಲವನ್ನು ಉಳುತ್ತಾನೆ.

| ಕರ್ತೃ ಪದ | ಕರ್ಮ ಪದ | ಕ್ರಿಯಾ ಪದ |
|---|---|---|
| ರೈತನು | ಹೊಲವನ್ನು | ಉಳುತ್ತಾನೆ |

1. ಅಡುಗೆಯನ್ನು ತಾಯಿಯು ಮಾಡಿದಳು.

| ಕರ್ತೃ ಪದ | ಕರ್ಮ ಪದ | ಕ್ರಿಯಾ ಪದ |
|---|---|---|
| | | |

2.ಕಟ್ಟಿದರು ಗುಡಿಯನ್ನು ಶಿಲ್ಪಿಗಳು.

| ಕರ್ತೃ ಪದ | ಕರ್ಮ ಪದ | ಕ್ರಿಯಾ ಪದ |
|---|---|---|
| | | |

3.ಭೀಮನು ಮುರಿದನು ದುರ್ಯೋಧನನ ತೊಡೆಯನ್ನು

| ಕರ್ತೃ ಪದ | ಕರ್ಮ ಪದ | ಕ್ರಿಯಾ ಪದ |
|---|---|---|
| | | |

4.'ವಿಕ್ರಮಾರ್ಜುನ ವಿಜಯ' ಬರೆದನು ಕಾವ್ಯವನ್ನು ಪಂಪನು

| ಕರ್ತೃ ಪದ | ಕರ್ಮ ಪದ | ಕ್ರಿಯಾ ಪದ |
|---|---|---|
| | | |

@KTBS NOT TO BE REPUBLISHED

5. ಹರ್ಷವರ್ಧನನನ್ನು ಇಮ್ಮಡಿ ಪುಲಕೇಶಿಯು ಸೋಲಿಸಿದನು

| ಕರ್ತೃ ಪದ | ಕರ್ಮ ಪದ | ಕ್ರಿಯಾ ಪದ |
|---|---|---|
| | | |

6. ಪುಸ್ತಕವನ್ನು ವಿದ್ಯಾರ್ಥಿಗಳು ಓದಿದರು.

| ಕರ್ತೃ ಪದ | ಕರ್ಮ ಪದ | ಕ್ರಿಯಾ ಪದ |
|---|---|---|
| | | |

7. ನೋಡಿದನು ನಾಟಕವನ್ನು ರಮೇಶನು

| ಕರ್ತೃ ಪದ | ಕರ್ಮ ಪದ | ಕ್ರಿಯಾ ಪದ |
|---|---|---|
| | | |

8. ದೇಶದ ರಕ್ಷಣೆಗೆ ಸೈನಿಕರು ಹೋರಾಡಿದರು

| ಕರ್ತೃ ಪದ | ಕರ್ಮ ಪದ | ಕ್ರಿಯಾ ಪದ |
|---|---|---|
| | | |

9. ನಮ್ಮೂರಿನ ವೈಭವದಿಂದ ಜಾತ್ರೆಯು ನಡೆಯಿತು.

| ಕರ್ತೃ ಪದ | ಕರ್ಮ ಪದ | ಕ್ರಿಯಾ ಪದ |
|---|---|---|
| | | |

10. ಸ್ವಾತಂತ್ರ್ಯ ದಿನಾಚರಣೆಯನ್ನು ನಮ್ಮ ಶಾಲೆಯಲ್ಲಿ ಆಚರಿಸಿದೆವು.

| ಕರ್ತೃ ಪದ | ಕರ್ಮ ಪದ | ಕ್ರಿಯಾ ಪದ |
|---|---|---|
| | | |

@KTBS NOT TO BE REPUBLISHED

## ಓದುವುದು–1

ಹೆಚ್ಚಿನ ಕಲಿಕೆಗಾಗಿ ಸ್ಕ್ಯಾನ್ ಮಾಡಿ

**ಕಲಿಕಾ ಫಲ :** ಭಾಷೆಯ ಸೂಕ್ಷ್ಮ ಅಂಶಗಳಾದ ಸ್ವರಭಾರ, ಲಯ, ಲೇಖನ ಚಿಹ್ನೆಗಳು ಬರೆವಣಿಗೆಯ ಅಂತರ, ಗಾತ್ರಗಳ ಬಗ್ಗೆ ಗಮನಹರಿಸುತ್ತಾ ತಮ್ಮ ಭಾಷೆಯನ್ನು ವಾಕ್ಯಗಳನ್ನು ತಾವೇ ರಚಿಸಿ ನಿರರ್ಗಳವಾಗಿ ಓದುವರು.

**ಚಟುವಟಿಕೆ 1 :** ಕೊಟ್ಟಿರುವ ನಾಟಕವನ್ನು ಉತ್ತಮ ಸ್ವರಭಾರದೊಂದಿಗೆ ಓದಿರಿ.

# ೪. ಭೂಕೈಲಾಸ

**(ಪೌರಾಣಿಕ ನಾಟಕ)**

**ರಚನೆ: ಪಾರಂಪಳ್ಳಿ. ನರಸಿಂಹ ಐತಾಳ**

**ದೃಶ್ಯ – ಸಮುದ್ರತೀರ**

(ರಾವಣನ ಕೈಯಲ್ಲಿ ಶಿವನ ಆತ್ಮಲಿಂಗ)

**ರಾವಣ :** ಆಹಾ! ಪಶುಪತಿ! ಇದೇನು ನಿನ್ನ ಲೀಲೆ? ಈ ತಾಣ ಅದೆಷ್ಟು ಸೊಗಸಾಗಿದೆ! ಚಿಲಿಪಿಲಿಗುಟ್ಟುವ ಪಕ್ಷಿಗಳ ಗುಂಪು, ತಣ್ಣನೆ ತೀಡಿಬರುವ ತಂಗಾಳಿ. ಪಶ್ಚಿಮ ಸಮುದ್ರದಲ್ಲಿ ಮುಳುಗುತ್ತಿರುವ ಸೂರ್ಯ. ಓಹ್! ಸಂಧ್ಯಾಕಾಲ ಬರುತ್ತಿದೆ. ನನ್ನ ಅನುಷ್ಠಾನಕ್ಕೆ ಸಮಯ ಮೀರುವುದಲ್ಲ.! ಏನು ಮಾಡಲಿ! ಈ ಆತ್ಮಲಿಂಗವನ್ನು ಯಾರ ಕೈಗೆ ಒಪ್ಪಿಸಲಿ? ಓ, ವಟುವೊಬ್ಬ ಇತ್ತಲೇ ಬರುತ್ತಿರುವನು. ಆತನನ್ನೇ ಕರೆಯುವೆ. ಅಯ್ಯಾ ಕುಮಾರ! ಇತ್ತ ಬಾ.

**ವಟು :** (ಪ್ರವೇಶಿಸಿ) ಏನಯ್ಯಾ, ನನ್ನನ್ನೇಕೆ ಕರೆದೆ?

**ರಾವಣ :** ನಿನ್ನ ಹೆಸರೇನು ಪುಟ್ಟ?

**ವಟು :** ನನ್ನ ಹೆಸರು ಗಣಪ ಎಂದು.

**ರಾವಣ :** ನಿನ್ನ ತಂದೆ–ತಾಯಿ ಯಾರು?

**ವಟು :** ತಂದೆ ಪರಮೇಶ್ವರ, ತಾಯಿ ಶಾಂಭವಿ.

**ರಾವಣ :** ನನಗೊಂದು ಕೆಲಸ ಆಗಬೇಕಾಗಿದೆ; ಮಾಡಿಕೊಡುವೆಯಾ?

**ವಟು :** ನನ್ನಿಂದ ಆಗುವುದಾದರೆ ಮಾಡುತ್ತೇನೆ.

**ರಾವಣ :** ನೋಡು ಗಣಪ! ನಾನು ಸಂಧ್ಯಾವಂದನೆ ಮಾಡಬೇಕಾಗಿದೆ. ನನ್ನ ಕೈಯಲ್ಲಿ ಇರುವ ಈ ಲಿಂಗವನ್ನು ನೆಲದಲ್ಲಿ ಇಡುವಂತಿಲ್ಲ. ಸಂಧ್ಯಾವಂದನೆ ಮುಗಿಯುವವರೆಗೆ ಇದನ್ನು ಹಿಡಿದುಕೊಂಡಿರುವಿಯಾ?

**ವಟು :** ಆಗಲಿ, ಇತ್ತ ಕೊಡಿ (ತೆಗೆದುಕೊಳ್ಳುವನು) ಅಯ್ಯೋ! ಇದು ಬಹಳ ಭಾರವಾಗಿದೆ. ನನ್ನಿಂದಾಗದು.

**ರಾವಣ :** ಹೆದರಬೇಡ! ನನ್ನ ಜಪ ಮುಗಿಯುವವರೆಗೆ ಇದನ್ನು ಹಿಡಿದಿರು.

**ವಟು :** ಆದರೆ ಒಂದು ಮಾತು. ನನ್ನ ಕೈಲಾಗದಿದ್ದರೆ ನಿನ್ನನ್ನು ಕರೆಯುತ್ತೇನೆ. ಮೂರು ಬಾರಿ ಕರೆದಾಗಲೂ ಬಾರದಿದ್ದರೆ ನೆಲದ ಮೇಲೆ ಇಟ್ಟು ಬಿಡುತ್ತೇನೆ.

© KTBS NOT TO BE REPUBLISHED

**ರಾವಣ** : ಬೇಡ ಬೇಡ ಹಾಗೆ ಮಾಡಬೇಡ. ನಾನು ಆದಷ್ಟು ಬೇಗ ಬಂದು ಬಿಡುವೆ. (ರಾವಣ ಹೋಗುವನು, ನಾರದ ಬರುವನು)

**ನಾರದ** : ಸದ್ಯ ಶಿವನ ಆತ್ಮಲಿಂಗವನ್ನು ರಾವಣ ನಿನ್ನ ಕೈಗೊಪ್ಪಿಸಿದ್ದಾನೆ. ಆದಷ್ಟು ಬೇಗ ನೆಲದಲ್ಲಿ ಇಟ್ಟುಬಿಡು.

**ವಟು** : ಅದು ಹೇಗೆ ಸಾಧ್ಯ ನಾರದರೆ. ಇದನ್ನು ಹಿಡಿದುಕೊಂಡಿರುತ್ತೇನೆಂದು ಮಾತು ಕೊಟ್ಟಿರುವೆ. ವಚನಭಂಗ ಮಾಡಲೇ?

**ನಾರದ** : ವಚನಭಂಗ ಮಾಡಬಾರದು. ಆದರೆ ನೀನೇ ಅವನೊಡನೆ ಹೇಳಿದಂತೆ ಮೂರುಬಾರಿ ಕರೆದು ಕೆಳಗಿಡು.

**ವಟು** : ಆಗಲಿ ಹಾಗೆಯೇ ಮಾಡುತ್ತೇನೆ. ರಾವಣಾss (ನೇಪಥ್ಯದಲ್ಲಿ ರಾವಣ–ಅರ್ಘ್ಯ ಕೊಡುತ್ತಿದ್ದೇನೆ.....)

**ನಾರದ** : ಅಂಬಾತನಯ! ಇನ್ನೊಮ್ಮೆ ಕೂಗಿಬಿಡು.

**ವಟು** : ರಾವಣಾss ಭಾರ ತಡೆಯಲಾರೆ ಬೇಗ ಬಾsss (ನೇಪಥ್ಯದಲ್ಲಿ "ಸಂಧ್ಯಾವಂದನೆ ಮುಗಿಯುತ್ತಾ ಬಂತು. ಇದೋ ಬಂದೆ")

**ನಾರದ** : ಗಣೇಶ! ಇದು ಅಂತಿಮ ಕ್ಷಣ. ನಮ್ಮನ್ನು ಹಾಲಿನಲ್ಲಾದರೂ ಹಾಕು ನೀರಲ್ಲಾದರೂ ಹಾಕು....ನಿನ್ನಿಷ್ಟ ನಾನಿನ್ನು ಬರುತ್ತೇನೆ.....ನಾರಾಯಣ.... (ನಿರ್ಗಮನ)

**ವಟು** : ಒಳ್ಳೆಯ ನಾರದರು ! ಪಾಪ ಅವರಿಗೂ ಭಯ. ಈ ರಾವಣನ ಅರಮನೆ ಕಾಯುವುದು ಯಾರಿಗಾದರೂ ಕಷ್ಟವೇ. ! ಓ! ಅನುಷ್ಠಾನ ಮುಗಿಯುವಂತಿದೆ. ರಾವಣಾss ಭಾರ ತಡೆಯಲಾರೆ. ನೀನು ಬರಲಿಲ್ಲ. ಇದೋ ಲಿಂಗವನ್ನು ಇಡುತ್ತೇನೆ. ಇಟ್ಟೇಬಿಟ್ಟೆ (ಕೆಳಗಿರಿಸುವನು)

**ರಾವಣ** : ಬಂದೆ....ಬಂದೆ....ಗಣಪ! ಇಡಬೇಡ ಇಡಬೇಡ (ಪ್ರವೇಶಿಸಿ) ಅಯ್ಯೋ ಎಂತಹ ಅಚಾತುರ್ಯ ಮಾಡಿದೆ. ಘೋರ ತಪವನ್ನಾಚರಿಸಿ ಸಾಧಿಸಿದ ನನ್ನ ಎಲ್ಲಾ ಶ್ರಮ ವ್ಯರ್ಥವಾಯಿತು. ಮಾತೆಗೆ ಏನು ಹೇಳಲಿ (ದು:ಖಿಸುವನು)

**ನಾರದ** : (ಪ್ರವೇಶಿಸಿ) ಇದೇನು ಲಂಕೇಶ್ವರ! ಅತುಲ ಪರಾಕ್ರಮಿಯಾದ ನೀನು ಇದೇಕೆ ದು:ಖಿಪಡುತ್ತಿರುವೆ?

**ರಾವಣ** : (ಕೋಪದಿಂದ) ನಾನು ಅತ್ಯಂತ ಪರಿಶ್ರಮದಿಂದ ಪಡೆದ ಶಿವನ ಆತ್ಮಲಿಂಗವನ್ನು ಈ ಪೋರ ನೆಲದ ಮೇಲೆ ಇಟ್ಟು ನನ್ನಾಸೆಯನ್ನು ಮಣ್ಣು ಮಾಡಿದ (ಬಾಲಕನ ನೆತ್ತಿಗೆ ಗುದ್ದುವನು. ಗಣಪನ ಕುತ್ತಿಗೆ ಕುಗ್ಗಿ ಹೋಗುವುದು)

**ನಾರದ** : ಸಾವಧಾನ ರಾವಣೇಶ್ವರ! ತಪ್ಪು ಮಾಡಿದವ ನೀನು. ಇವನಾರು ಗೊತ್ತೇ?

**ರಾವಣ** : ಯಾರಾದರೆ ನನಗೇನು?

**ನಾರದ** : ಹಾಗಲ್ಲ ಲಂಕೇಶ! ಇವನು ಶಿವಪಾರ್ವತಿಯರ ಮಗ, ಪ್ರಮಥ ಗಣಗಳಿಗೊಡೆಯ, ಗಣಪತಿ.

**ರಾವಣ** : ಗಣಪತಿಯೇ? ಇವನೇಕೆ ನನ್ನ ಕಾರ್ಯಕ್ಕೆ ತಡೆಯೊಡ್ಡಿದ?

**ನಾರದ** : ಯಾವುದೇ ಕಾರ್ಯ ಆರಂಭಿಸುವ ಮೊದಲು ಈತನನ್ನು ಪೂಜಿಸಬೇಕೆಂಬುದು ಶಿವ ಪಾರ್ವತಿಯರ ಆಜ್ಞೆ. ಪೂಜಿಸದಿದ್ದರೆ ಈತ ವಿಘ್ನಕಾರಕನಾಗುತ್ತಾನೆ. ಕಾರ್ಯ ಫಲಿಸುವುದಿಲ್ಲ. ನೀನು ತಪವನ್ನಾಚರಿಸುವ ಮೊದಲು ಇವನನ್ನು ಪೂಜಿಸಲಿಲ್ಲ. ಅದಕ್ಕೆ ಹೀಗಾಯ್ತು.

**ರಾವಣ** : ಹೌದೇ? ಅಯ್ಯಾ ಗಣೇಶ! ಕ್ಷಮಿಸು ಸ್ವಾಮೀ! (ನಮಿಸುವನು)

**ವಟು** : ಶುಭಮಸ್ತು!

© KTBS NOT TO BE REPUBLISHED

ಬೆಂಬಲಿತ ಕಲಿಕೆಯ ಹಂತ – ಚಟುವಟಿಕೆ ಹಾಳೆ 4

# ಓದುವುದು–2

A8P3M8

ಹೆಚ್ಚಿನ ಕಲಿಕೆಗಾಗಿ ಸ್ಕ್ಯಾನ್ ಮಾಡಿ

**ಕಲಿಕಾ ಫಲ** : ಪದಗಳು, ಅಕ್ಷರಗಳ ಧ್ವನಿಸಾಮ್ಯತೆ, ವ್ಯತ್ಯಾಸ ಗಮನಿಸಿ ಓದುವರು. ಸರಳ ವಾಕ್ಯಗಳ ರಚನೆ ಕಲಿತು, ವಾಕ್ಯಗಳನ್ನು ರಚಿಸುವರು.

**ಚಟುವಟಿಕೆ 1 :** ಕೊಟ್ಟಿರುವ ಪುಣ್ಯಕೋಟಿ ಪದ್ಯವನ್ನು ನಾಟಕ ರೂಪದಲ್ಲಿ ಬರೆಯಿರಿ.

| 1 | 2 | 3 |
|---|---|---|
| ಕೊಂದು ತಿನ್ನುವೆನೆಂಬ ಹುಲಿಗೆ<br>ಚಂದದಿಂದಲಿ ಭಾಷೆಯಿತ್ತು<br>ಕಂದ ನಿನ್ನನು ನೋಡಿ<br>ಹೋಗುವನೆಂದು ಬಂದೆನು<br>ದೊಡ್ಡಿಗೆ// | ಅಮ್ಮ ನೀನು ಸಾಯಲೇಕೆ<br>ನನ್ನ ತಬ್ಬಲಿ ಮಾಡಲೇಕೆ<br>ಸುಮ್ಮನಿಲ್ಲಿಯೆ ನಿಲ್ಲೆನುತ್ತ<br>ಅಮ್ಮನಿಗೆ ಕರು ಹೇಳಿತು// | ಕೊಟ್ಟ ಭಾಷೆಗೆ ತಪ್ಪಲಾರೆ<br>ಕೆಟ್ಟ ಯೋಚನೆ ಮಾಡಲಾರೆ<br>ನಿಷ್ಠೆಯಿಂದಲಿ ಪೋಪೆನಲ್ಲಿಗೆ<br>ಕಟ್ಟಕಡೆಗಿದು ಖಂಡಿತ// |

| 4 | 5 | 6 |
|---|---|---|
| ಆರ ಮೊಲೆಯನು<br>ಕುಡಿಯಲಮ್ಮ<br>ಆರ ಸೇರಿ ಬದುಕಲಮ್ಮ<br>ಆರ ಬಳಿಯಲಿ ಮಲಗಲಮ್ಮ<br>ಆರು ನನಗೆ ಹಿತವರು// | ಮುಂದೆ ಬಂದರೆ ಹಾಯಬೇಡಿ<br>ಹಿಂದೆ ಬಂದರೆ ಒದೆಯಬೇಡಿ<br>ಕಂದ ನಿಮ್ಮವನೆಂದು ಕಾಣಿರಿ<br>ತಬ್ಬಲಿಯನೀ ಕರುವನು// | ತಬ್ಬಲಿಯು ನೀನಾದೆ ಮಗನೆ<br>ಹೆಬ್ಬುಲಿಯ ಬಾಯನ್ನು<br>ಹೊಗುವೆನು<br>ಇಬ್ಬರಾ ಋಣ ತೀರಿತೆಂದು<br>ತಬ್ಬಿಕೊಂಡಿತು ಕಂದನ// |

© KLES NOT TO BE REPUBLISHED

**ಪಾತ್ರಗಳು : ಪುಣ್ಯಕೋಟಿ ಎಂಬ ಹಸು ಮತ್ತು ಅದರ ಕರು.**

ಪುಣ್ಯಕೋಟಿ :

ಕರು :

ಕರು :

ಪುಣ್ಯಕೋಟಿ :

ಕರು :

ಪುಣ್ಯಕೋಟಿ :

ಕರು :

@KTBS
NOT TO BE REPUBLISHED

ಬೆಂಬಲಿತ ಕಲಿಕೆಯ ಹಂತ – ಚಟುವಟಿಕೆ ಹಾಳೆ 5

# ಆಲಿಸುವುದು

EZM4U7

ಹೆಚ್ಚಿನ ಕಲಿಕೆಗಾಗಿ ಸ್ಕ್ಯಾನ್ ಮಾಡಿ

**ಕಲಿಕಾ ಫಲ** : ವಿವಿಧ ಸನ್ನಿವೇಶ ಇಲ್ಲದೇ ಸಂದರ್ಭದಲ್ಲಿ ಹೇಳಲ್ಪಟ್ಟ ಬೇರೆಯವರ ಮಾತುಗಳನ್ನು ತಮ್ಮದೇ ಶೈಲಿಯಲ್ಲಿ ತಮ್ಮ ಬರೆವಣಿಗೆಗಳಲ್ಲಿ ಬಳಕೆ ಮಾಡುವರು.


**ಚಟುವಟಿಕೆ 1 :** ಶಿಕ್ಷಕರಿಂದ ಕೇಳಿದ ಘಟನೆಯನ್ನು ನಿಮ್ಮದೇ ಮಾತುಗಳಲ್ಲಿ ಬರೆಯಿರಿ.

@KTBS NOT TO BE REPUBLISHED

**ಚಟುವಟಿಕೆ 2 :** ನಿಮ್ಮ ಜೀವನದಲ್ಲಿನ ಅನುಭವಗಳಲ್ಲಿ ಯಾವುದಾದರೂ ಒಂದು ಘಟನೆಯನ್ನು ಸಂಕ್ಷಿಪ್ತವಾಗಿ ಬರೆಯಿರಿ.

ಚಟುವಟಿಕೆ 3 : **ಕೊಟ್ಟಿರುವ 'ದ. ರಾ.ಬೇಂದ್ರೆ' ಅವರ ಜೀವನಾನುಭವದ ಘಟನೆಯನ್ನು ಓದಿ ತಿಳಿಯಿರಿ.**

## "ಬೆಂದರೆ ಬೇಂದ್ರೆ"



ಧಾರವಾಡದಿಂದ ಪಶ್ಚಿಮಕ್ಕೆ ಐದಾರು ಮೈಲಿ ದೂರದ ಮುಗದ ಎಂಬ ಊರಿನಲ್ಲಿದ್ದ ಮನೆಯ ಜಗಲಿಯ ಮೇಲೆ ಬೇಂದ್ರೆ ಕುಳಿತಿದ್ದಾರೆ. ಊರ ಹಿರಿಯರೊಬ್ಬರು ಮಧ್ಯಾಹ್ನದ ಹೊತ್ತಿಗೆ ಅವರಿದ್ದಲ್ಲಿಗೆ ಬಂದು: "ಮಾಸ್ತರ, ನಮ್ಮ ಮನ್ಯಾಗ ರೊಟ್ಟಿ ಕೊಟ್ಟು ಬಾ ಅಂದ್ರಿ. ತಗೋರಿ" ಎಂದರು. "ಛೆ,. ಛೆ,. ನೀವ್ಯಾಕ ತ್ರಾಸ ತಗೋತೀರಿ. ನಮ್ಮ ಒಬ್ಬ ಮಿತ್ರ ದಿನಾ ರೊಟ್ಟಿ ಬುತ್ತಿ ಕೊಟ್ಟು ಹೋಗ್ತಾನ" ಎಂದರು ಬೇಂದ್ರೆ.

ಅದಕ್ಕೆ ಆ ಹಿರಿಯರು, "ಈಗ ಬಿಸಿ ರೊಟ್ಟಿ ತಗೋರಿ. ನಿಮ್ಮ ಗೆಳ್ಯಾ ತಂದದ್ದು ಚಂಜಿ ಕಡಸೇಕ್ಕ ಆಕ್ಕೈತಿ . ಅದರಾಗ ನೀವು ಮಾಸ್ತರ ಇದ್ದೀರಿ ಅಂತ ಕೇಳಿದ ಮ್ಯಾಗಂತೂ ಜೀವ ಹಾತೊರಿತಿರಿ, ತಮ್ಮನ್ನ ಕಾಣಬೇಕು ಅಂತ. ನಾನೂ ಇದ ಮುಗದದ ಕನ್ನಡ ಸಾಲ್ಯಾಗ ನನ್ನ ನೌಕರಿ ಮುಗಿಸೀನ್ರೀ" ಎಚಿದರು.

"ನಾನೂ ನನ್ನ ಮಾಸ್ತರಿಕೀ ಮುಗಿಸೇ ಈ ಮುಗದಕ್ಕೆ ಬಂದೀನಿ. ರ್ರೀ ಕೂಡ್ರಿ" ಎಂದರು ಬೇಂದ್ರೆ. ಆಗ ಆ ಹಿರಿಯರು ಬಹಳ ಸಂಕೋಚದಿಂದ, "ಮತ್ತ ನಮ್ಮ ಕೈಯಾಗಿನ ರೊಟ್ಟಿ ತಿನ್ನಾಕ ಶೀಲಾ ಏನೂ ಮಾಡೋದಿಲ್ಲ ಹೌದಲ್ರಿ?" ಎಂದು ಕೇಳಿದರು.

ಅದಕ್ಕೆ ಬೇಂದ್ರೆಯವರು ಉತ್ತರ ಕೊಟ್ಟಿದ್ದು ಹೀಗೆ: "ಸುಶೀಲರಿದ್ದವರ ಜೊತೆಗೆ ಮತ್ತೆಂಥಾ ಶೀಲಾ? ಶೀಲಾ–ಕುಲಾ ಅಂತದರಾಗ ನನಗ ನಂಬಿಗಿ ಇಲ್ಲಾ. ನೀವು ಬಂದಿರಿ, ಹಸಿದವಗ ರೊಟ್ಟಿ ತಂದ್ರಿ. ಇದ ಖರೇ ಮಾನವೀಯ ಶೀಲಾ." ಕನ್ನಡ ನವೋದಯದ ನಾದಬ್ರಹ್ಮ ಕವಿ ಬೇಂದ್ರೆಯವರ ಜೀವನದಲ್ಲಿ ನಡೆದ ಈ ಘಟನೆಯು ಎರಡು ರೀತಿಯಲ್ಲಿ ಬಹಳ ಮಹತ್ವವಿದೆ. ಒಂದು ಅವರಲ್ಲಿದ್ದ ಮಾನವೀಯ ಭಾವನೆ. ಇನ್ನೊಂದು, ಆ ಊರಿಗೆ ಬಂದ ಕಾರಣ. ಅವರು 'ನನ್ನ ಮಾಸ್ತರಿಕಿ ಮುಗಿಸೇ ಬಂದೀನಿ' ಎಂದ ಮಾತಿನ ಗೂಡಾರ್ಥ ಬೇರೆ ಇದೆ. ಬೇಂದ್ರೆಯವರು ಬರೆದ 'ನರಬಲಿ' ಕವನವು ಬ್ರಿಟಿಷ್ ಸಾಮ್ರಾಜ್ಯದ ವಿರುದ್ಧ ದಂಗೆಯೇಳಲು, ಬಲಿದಾನ ಮಾಡಲು ಪ್ರೇರೇಪಣೆ ನೀಡುವಂತಿತ್ತು. ಸಹಜವಾಗಿಯೇ ಬ್ರಿಟಿಷ್ ಸಾಮ್ರಾಜ್ಯಶಾಹಿಗಳ ಕೆಂಗಣ್ಣಿಗೆ ಗುರಿಯಾದ ಬೇಂದ್ರೆ ತಮ್ಮ ಮಾಸ್ತರಿಕಿಯನ್ನು ಕಳೆದುಕೊಳ್ಳಬೇಕಾಯಿತು. ಮೊದಲೇ ಸಂಸಾರ ಬಡತನದಲ್ಲಿ ಬೇಯುತ್ತಿದ್ದೆ; ಅಂತಹುದರಲ್ಲಿ ಬಹಳ



ಪ್ರಯಾಸದಿಂದ ಪಡೆದಿದ್ದ ಮಾಸ್ತರಿಕಿ, ಸಂಸಾರದ ಊರುಗೋಲು ಹೋಗುತ್ತಿದೆ. ಆದರೆ ಇದ್ಯಾವುದೂ ಬೇಂದ್ರೆಯನ್ನು ಬ್ರಿಟಿಷರಲ್ಲಿ ಕ್ಷಮಾಪಣೆ ಕೇಳುವುದಕ್ಕಾಗಲೀ, ವಿನಾಯಿತಿ ಪಡೆಯುವುದಕ್ಕಾಗಲೀ ತಳ್ಳಲಿಲ್ಲ. ಬದಲಿಗೆ ಕೆಲಸವನ್ನೂ ಕಳೆದುಕೊಂಡರು, ಬಂಧೀಖಾನೆಯ ಶಿಕ್ಷೆಯನ್ನೂ ಅನುಭವಿಸಿದರು. ಬಡತನದ ಕಾರಣದಿಂದಾಗಿಯೇ ಮಗುವನ್ನು ಕಳೆದುಕೊಳ್ಳಬೇಕಾದ ಪರಿಸ್ಥಿತಿ ಬಂದಾಗಲೂ ಬೇಂದ್ರೆ ಪಶ್ಚಾತ್ತಾಪ ಪಡಲಿಲ್ಲ. ತಮ್ಮ ನೋವು, ಸಂಕಟ, ನಲಿವುಗಳನ್ನು ಕಾವ್ಯದಲ್ಲಿ ಸಾರ್ವತ್ರಿಕಗೊಳಿಸುತ್ತಾ,ಸಮಾಜದ ನೋವು, ನಲಿವುಗಳ ಒಂದು ಭಾಗವನ್ನಾಗಿ ಮಾಡಿದರು. ಅದಕ್ಕೆ **'ಬೆಂದರೆ ಬೇಂದ್ರೆ'ಯಾಗಬಹುದು ಎಂಬ ಮಾತು ಜನಜನಿತವಾಗಿದೆ.**

©KTBS NOT TO BE REPUBLISHED

ಬೆಂಬಲಿತ ಕಲಿಕೆಯ ಹಂತ – ಚಟುವಟಿಕೆ ಹಾಳೆ 6

# ತಾರ್ಕಿಕ ಚಿಂತನೆ


D1B7L1

ಹೆಚ್ಚಿನ ಕಲಿಕೆಗಾಗಿ ಸ್ಕ್ಯಾನ್ ಮಾಡಿ

**ಕಲಿಕಾ ಫಲ :** ಸ್ಥಳೀಯ ಸಾಮಾಜಿಕ ಮತ್ತು ಪ್ರಾಕೃತಿಕ ಸನ್ನಿವೇಶದಲ್ಲಿನ ಅಂಶಗಳನ್ನು ವಿಶ್ಲೇಷಿಸಿ ತಾರ್ಕಿಕವಾಗಿ ಉತ್ತರಿಸುವರು.

**ಚಟುವಟಿಕೆ 1 : ಕೊಟ್ಟಿರುವ ಪ್ರಶ್ನೆಗಳಿಗೆ ಮೌಖಿಕವಾಗಿ ಉತ್ತರಿಸಿ.**

* ನಿಮ್ಮೊಡನೆ ಓದುತ್ತಿದ್ದವರಲ್ಲಿ ಶಾಲೆ ಬಿಟ್ಟವರು ಯಾರು?
* ಅವರು ಶಾಲೆಯನ್ನು ಏಕೆ ಬಿಟ್ಟರು?
* ಸಾಮಾನ್ಯವಾಗಿ ಯಾವ ಯಾವ ಅಂಗಡಿಗಳಲ್ಲಿ ಚಿಕ್ಕಚಿಕ್ಕ ಮಕ್ಕಳು ಕೆಲಸ ಮಾಡುತ್ತಾರೆ?
* ಶಾಲೆಗೆ ಹೋಗದೆ ಅಂಗಡಿಗಳಲ್ಲಿ ಮಕ್ಕಳು ಕೆಲಸ ಮಾಡುವುದನ್ನು ಕಂಡಾಗ ನೀವೇನು ಮಾಡುವಿರಿ?
* ನಿಮ್ಮ ಮನೆಯ ಸುತ್ತಮುತ್ತ ಬಾಲ್ಯ ವಿವಾಹ ನಡೆಯುವ ವಿಷಯ ಅಥವಾ ನಿಮ್ಮ ಗೆಳೆಯ ಅಥವಾ ಗೆಳತಿಯ ವಿವಾಹವು ಬಾಲ್ಯ ವಿವಾಹ ಎಂದು ತಿಳಿದಾಗ ನೀವೇನು ಮಾಡುವಿರಿ?
* ನಿಮ್ಮ ಕುಟುಂಬದಲ್ಲಿ ಯಾರಿಗಾದರೂ ಬಾಲ್ಯ ವಿವಾಹ ನಡೆದಿದೆಯೆ?
* ಬಾಲ್ಯ ವಿವಾಹದಿಂದ ಆಗುವ ದುಷ್ಪರಿಣಾಮಗಳು ಯಾವುವು?



**ಚಟುವಟಿಕೆ 2 : ಕೊಟ್ಟಿರುವ ಕಥೆಯನ್ನು ಓದಿ ಪ್ರಶ್ನೆಗಳಿಗೆ ಉತ್ತರಿಸಿ.**

## ಬಾಲ್ಯ ವಿವಾಹವನ್ನು ತಡೆದ ಭಾಂವ್ರಿದೇವಿ

ಭಾಂವ್ರಿದೇವಿ ರಾಜಸ್ಥಾನದ ಓರ್ವ ಮಹಿಳೆ. ಬಡ ಕುಟುಂಬದಲ್ಲಿ ಜನಿಸಿದ ಇವಳು ಶಾಲೆಯನ್ನು ಕಂಡವಳಲ್ಲ. ಇವಳ ತಂದೆಯು ಮಡಕೆಗಳನ್ನು ತಯಾರಿಸಿ, ವ್ಯಾಪಾರ ಮಾಡಿ, ಕಷ್ಟದ ಜೀವನವನ್ನು ನಡೆಸುತ್ತಿದ್ದರು. ಇವಳ ಮನೆಯವರು ಗಾಳಿ, ಬೆಳಕು, ವಿದ್ಯುತ್, ನೀರು, ಯಾವುದೂ ಇಲ್ಲದ ಸಣ್ಣ ಜೋಪಡಿಯಲ್ಲಿ ವಾಸವಾಗಿದ್ದರು.

ಭಾಂವ್ರಿದೇವಿ ನಾಲ್ಕು ವರ್ಷದವಳಿದ್ದಾಗಲೇ ಅವಳ ಮದುವೆ ನಡೆದುಹೋಯಿತು. ತನ್ನ ವಿವಾಹದ ನೆನಪು ಕೂಡ ಇಲ್ಲದ ಆಕೆ ಇದು "ನನ್ನ ಬದುಕಿನ ಸರ್ವನಾಶದ ದಿನ" ಎನ್ನುತ್ತಿದ್ದಳು. ಎಳೆಯ ವಯಸ್ಸಿನಲ್ಲಿಯೇ ಭಾಂವ್ರಿಯ ಒಡಲು ತುಂಬಿತ್ತು. ಮೂರು ಹೆಣ್ಣು ಮಕ್ಕಳಿಗೆ ಜನ್ಮ ನೀಡಿದಳು. ಗಂಡುಮಗು ಹೆರಲಿಲ್ಲವೆಂದು ಅತ್ತೆ, ಮಾವ ತಕರಾರು ತೆಗೆದರು. ನಂತರ ಒಂದು ಗಂಡುಮಗು ಜನಿಸಿತು. ಮನೆಯವರ ವಿರೋಧವಿದ್ದರೂ ಪ್ರಬುದ್ಧಳಾಗಿದ್ದ ಆಕೆಯು "ಇನ್ನು ಮಕ್ಕಳು ಬೇಡ" ಎಂದು ನಿರ್ಧರಿಸಿದಳು.

ಭಾಂವ್ರಿ ಸೇರಿದ ಕುಟುಂಬ ಬಹಳ ದೊಡ್ಡದು. ದಿನವೂ ಜೋಳ ಬೀಸಿ, ಎಂಟು–ಹತ್ತು ಜನರಿಗೆ ರೊಟ್ಟಿಗಳನ್ನು ತಯಾರಿಸಬೇಕಿತ್ತು. ಈ ಬಡತನದ ಜೀವನದ ನಡುವೆಯೂ ಮಾವನ ಒತ್ತಾಯದಂತೆ ಅವಳ ಮೊದಲನೆಯ ಮಗಳಿಗೆ ಆರೇಳು ವರ್ಷದವಳಾಗಿದ್ದಾಗ ಮದುವೆಯು ನಡೆದು ಹೋಯಿತು. ಆದರೂ ಭಾಂವ್ರಿಯು "21 ವರ್ಷ ಆಗುವವರೆವಿಗೂ ಗಂಡನ ಮನೆಗೆ ಮಗಳನ್ನು ಕಳುಹಿಸುವುದಿಲ್ಲ" ಎಂದು ನಿರ್ಧರಿಸಿ, ಬಾಲ್ಯ ವಿವಾಹದ ವಿರುದ್ಧ ದೊಡ್ಡ ಹೋರಾಟವನ್ನು ನಡೆಸಿದಳು.

© KTBS NOT TO BE REPUBLISHED

ಭಾಂವ್ರಿದೇವಿಯು ದಿನಗೂಲಿಯ ಮೇಲೆ ಕೆಲಸ ಮಾಡುವಾಗ ಕೂಲಿಯನ್ನು ಪಡೆಯುವಲ್ಲಿ ಅನ್ಯಾಯವಾಗುತ್ತಿತ್ತು. ಆಗ ರಾಜಸ್ಥಾನ ಸರ್ಕಾರದ 'ಮಹಿಳಾ ಅಭಿವೃದ್ಧಿ ಇಲಾಖೆ'ಯ ಮೂಲಕ ಅವಳು ಹೋರಾಟ ಮಾಡಿ ಯಶಸ್ಸು ಗಳಿಸಿದಳು. ಅದರಿಂದಾಗಿ ಅವಳಿಗೆ ಮಹಿಳಾ ಅಭಿವೃದ್ಧಿ ಯೋಜನೆಯ ಬಗ್ಗೆ ಆಸಕ್ತಿ ಮೂಡಿತು. ಈ ಮೂಲಕ ಗ್ರಾಮೀಣ ಮಹಿಳಾ ಅಭಿವೃದ್ಧಿಯ ವಿವಿಧ ಯೋಜನೆಗಳಲ್ಲಿ ಭಾಗವಹಿಸುವ ಅವಕಾಶ ದೊರೆಯಿತು. ಈ ಯೋಜನೆಯಲ್ಲಿ 'ಬಾಲ್ಯ ವಿವಾಹ'ವನ್ನು ತಡೆಗಟ್ಟುವ ಜವಾಬ್ದಾರಿ ಇವಳಿಗೆ ಒದಗಿಬಂದಿತು.

ಡಾ. ಪ್ರೀತಿಂ ಪಾಲ್ ಅವರ ಮಾರ್ಗದರ್ಶನದಲ್ಲಿ 'ಸಾಥಿನ್' ಆಗಿ 21 ದಿನಗಳ ತರಬೇತಿ ಪಡೆದಳು. ಇದರಲ್ಲಿ ಆಹಾರ, ಪೌಷ್ಟಿಕಾಂಶ, ಬಸಿರು, ಶಿಶುಜನನ, ಬಾಲ್ಯವಿವಾಹದ ಕೆಡಕುಗಳು, ಹೆಣ್ಣುಮಕ್ಕಳ ಅನಾರೋಗ್ಯ, ಹೆಣ್ಣುಮಕ್ಕಳ ಶಿಕ್ಷಣದ ಅವಶ್ಯಕತೆ ಮೊದಲಾದವುಗಳ ಬಗ್ಗೆ ತಿಳಿದುಕೊಂಡಳು. ನಂತರ ಮನೆಮನೆಗೆ ಹೋಗಿ ಹೆಂಗಸರಲ್ಲಿ ಈ ಬಗ್ಗೆ ಜಾಗೃತಿ ಮೂಡಿಸಿ, ಮನೆಯಿಂದ ಹೊರಬರುವಂತೆ ಮಾಡಿದಳು. ಮನೆಯ ಗಂಡಸರು ಇವಳ ಕಾರ್ಯವನ್ನು ವಿರೋಧಿಸಿ ಹಿಡಿಶಾಪವನ್ನು ಹಾಕಿದರು. ತೆಗೆದರು. ನಂತರ ಒಂದು ಗಂಡುಮಗು ಜನಿಸಿತು. ಮನೆಯವರ ವಿರೋಧವಿದ್ದರೂ ಪ್ರಬುದ್ಧಳಾಗಿದ್ದ ಆಕೆಯು "ಇನ್ನು ಮಕ್ಕಳು ಬೇಡ" ಎಂದು ನಿರ್ಧರಿಸಿದಳು.

ಭಾಂವ್ರಿ ಸೇರಿದ ಕುಟುಂಬ ಬಹಳ ದೊಡ್ಡದು. ದಿನವೂ ಜೋಳ ಬೀಸಿ, ಎಂಟು–ಹತ್ತು ಜನರಿಗೆ ರೊಟ್ಟಿಗಳನ್ನು ತಯಾರಿಸಬೇಕಿತ್ತು. ಈ ಬಡತನದ ಜೀವನದ ನಡುವೆಯೂ ಮಾವನ ಒತ್ತಾಯದಂತೆ ಅವಳ ಮೊದಲನೆಯ ಮಗಳಿಗೆ ಆರೇಳು ವರ್ಷದವಳಾಗಿದ್ದಾಗ ಮದುವೆಯು ನಡೆದು ಹೋಯಿತು. ಆದರೂ ಭಾಂವ್ರಿಯು "21 ವರ್ಷ ಆಗುವವರೆವಿಗೂ ಗಂಡನ ಮನೆಗೆ ಮಗಳನ್ನು ಕಳುಹಿಸುವುದಿಲ್ಲ" ಎಂದು ನಿರ್ಧರಿಸಿ, ಬಾಲ್ಯ ವಿವಾಹದ ವಿರುದ್ಧ ದೊಡ್ಡ ಹೋರಾಟವನ್ನು ನಡೆಸಿದಳು.

© KTBS NOT TO BE REPUBLISHED

ಭಾಂವ್ರಿದೇವಿಯು ದಿನಗೂಲಿಯ ಮೇಲೆ ಕೆಲಸ ಮಾಡುವಾಗ ಕೂಲಿಯನ್ನು ಪಡೆಯುವಲ್ಲಿ ಅನ್ಯಾಯವಾಗುತ್ತಿತ್ತು. ಆಗ ರಾಜಸ್ಥಾನ ಸರ್ಕಾರದ 'ಮಹಿಳಾ ಅಭಿವೃದ್ಧಿ ಇಲಾಖೆ'ಯ ಮೂಲಕ ಅವಳು ಹೋರಾಟ ಮಾಡಿ ಯಶಸ್ಸು ಗಳಿಸಿದಳು. ಅದರಿಂದಾಗಿ ಅವಳಿಗೆ ಮಹಿಳಾ ಅಭಿವೃದ್ಧಿ ಯೋಜನೆಯ ಬಗ್ಗೆ ಆಸಕ್ತಿ ಮೂಡಿತು. ಈ ಮೂಲಕ ಗ್ರಾಮೀಣ ಮಹಿಳಾ ಅಭಿವೃದ್ಧಿಯ ವಿವಿಧ ಯೋಜನೆಗಳಲ್ಲಿ ಭಾಗವಹಿಸುವ ಅವಕಾಶ ದೊರೆಯಿತು. ಈ ಯೋಜನೆಯಲ್ಲಿ 'ಬಾಲ್ಯ ವಿವಾಹ'ವನ್ನು ತಡೆಗಟ್ಟುವ ಜವಾಬ್ದಾರಿ ಇವಳಿಗೆ ಒದಗಿಬಂದಿತು.

ಡಾ. ಪ್ರೀತಿಂ ಪಾಲ್ ಅವರ ಮಾರ್ಗದರ್ಶನದಲ್ಲಿ 'ಸಾಥಿನ್' ಆಗಿ 21 ದಿನಗಳ ತರಬೇತಿ ಪಡೆದಳು. ಇದರಲ್ಲಿ ಆಹಾರ, ಪೌಷ್ಟಿಕಾಂಶ, ಬಸಿರು, ಶಿಶುಜನನ, ಬಾಲ್ಯವಿವಾಹದ ಕೆಡಕುಗಳು, ಹೆಣ್ಣುಮಕ್ಕಳ ಅನಾರೋಗ್ಯ, ಹೆಣ್ಣುಮಕ್ಕಳ ಶಿಕ್ಷಣದ ಅವಶ್ಯಕತೆ ಮೊದಲಾದವುಗಳ ಬಗ್ಗೆ ತಿಳಿದುಕೊಂಡಳು. ನಂತರ ಮನೆಮನೆಗೆ ಹೋಗಿ ಹೆಂಗಸರಲ್ಲಿ ಈ ಬಗ್ಗೆ ಜಾಗೃತಿ ಮೂಡಿಸಿ, ಮನೆಯಿಂದ ಹೊರಬರುವಂತೆ ಮಾಡಿದಳು. ಮನೆಯ ಗಂಡಸರು ಇವಳ ಕಾರ್ಯವನ್ನು ವಿರೋಧಿಸಿ ಹಿಡಿಶಾಪವನ್ನು ಹಾಕಿದರು.

ಕ್ರಿ. ಶ. 1992ರಲ್ಲಿ ರಾಜಸ್ಥಾನ ಸರ್ಕಾರ ಬಾಲ್ಯ ವಿವಾಹ ಜರುಗಬಾರದೆಂಬ ಆಜ್ಞೆಯನ್ನು ಹೊರಡಿಸಿತು. ಈ ಸಮಯದಲ್ಲಿ ಊರಿನ ಪಂಚರೊಬ್ಬರ ಮನೆಯಲ್ಲಿ ಒಂದು ವರ್ಷದ ಹೆಣ್ಣುಮಗುವಿಗೆ ವಿವಾಹವಾಗುವುದನ್ನು ತಡೆಗಟ್ಟಿ, ಅತ್ತೆಮಾವನ ಕೋಪಕ್ಕೆ ಈಡಾದಳು. ಆದರೂ ಎದೆಗುಂದದೆ ತನ್ನ ಕಾರ್ಯವನ್ನು ಮುಂದುವರೆಸಿದಳು. ಹೀಗೆ ಭಾಂವ್ರಿದೇವಿಯ ಬದುಕು ನಿರಂತರ ಹೋರಾಟವಾಯಿತು. ಈ ಯೋಜನೆಯಲ್ಲಿ 'ಬಾಲ್ಯ ವಿವಾಹ'ವನ್ನು ತಡೆಗಟ್ಟುವ ಜವಾಬ್ದಾರಿ ಇವಳಿಗೆ ಒದಗಿಬಂದಿತು.

ಇವಳ ಹೋರಾಟವನ್ನು ಗುರುತಿಸಿ, ಕ್ರಿ.ಶ. 1994ರಲ್ಲಿ 'ನೀರ್ಜಾ ಭನೋಟ್' ಪುರಸ್ಕಾರವನ್ನು ನೀಡಿ ಗೌರವಿಸಲಾಯಿತು. ಈ ಪುರಸ್ಕಾರದಲ್ಲಿ ಬಂದ ಒಂದು ಲಕ್ಷ ರೂಪಾಯಿಗಳನ್ನು ಬಳಸಿಕೊಂಡು ತನ್ನ ಹಳ್ಳಿಯಲ್ಲಿ ಟ್ರಸ್ಟ್ ಒಂದನ್ನು ಆರಂಭಿಸಿದಳು. ಈ ಟ್ರಸ್ಟ್ ಮೂಲಕ ಅನ್ಯಾಯಕ್ಕೆ ಒಳಗಾಗಿ, ನೊಂದಮಹಿಳೆಯರಿಗೆ ಧನಸಹಾಯ ಮಾಡಿದಳು. ಹಳ್ಳಿಗಳ ಶಾಲೆಗಳಲ್ಲಿ ಹೆಣ್ಣುಮಕ್ಕಳಿಗಾಗಿ ಶೌಚಾಲಯಗಳನ್ನು ನಿರ್ಮಿಸಿದಳು. ಬದುಕಿನುದ್ದಕ್ಕೂ ಬಾಲ್ಯ ವಿವಾಹದ ವಿರುದ್ಧ ಹೋರಾಡಿ, "ತನಗಾದ ಅನ್ಯಾಯ ಬೇರೆ ಹೆಣ್ಣು ಮಕ್ಕಳಿಗೆ ಆಗಬಾರದು" ಎಂದು ನಿರಂತರವಾಗಿ ಹೋರಾಟವನ್ನು ಮಾಡಿದಳು. ಭಾಂವ್ರಿದೇವಿಯ ಹಳ್ಳಿಗಾಡಿನ ಮಹಿಳಾ ಸಬಲೀಕರಣ ಸೇವೆಯನ್ನು ಗುರುತಿಸಿ, ಹಲವಾರು ಸಂಘಸಂಸ್ಥೆಗಳು ಗೌರವಿಸಿ, ಪುರಸ್ಕರಿಸಿದವು. ಹೀಗೆ ಭಾಂವ್ರಿದೇವಿಯು ಹಳ್ಳಿಗಾಡಿನ ಹೆಣ್ಣುಮಕ್ಕಳ ದಿಟ್ಟತನಕ್ಕೆ ಉತ್ತಮ ಉದಾಹರಣೆಯಾಗಿ, ಮಾದರಿ ಮಹಿಳೆಯಾಗಿದ್ದಾಳೆ.

@KTBS NOT TO BE REPUBLISHED

**ಪ್ರಶ್ನೆಗಳು :–**

1) **ಭಾಂವ್ರಿದೇವಿಯ ಪ್ರಕಾರ ಅವಳ ಬದುಕಿನ ಸರ್ವನಾಶದ ದಿನ ಯಾವುದು?**

2) **ಭಾಂವ್ರಿದೇವಿಯು ತನ್ನ ಮಗಳನ್ನು ಎಷ್ಟು ವರ್ಷಗಳಾಗುವವರೆಗೆ ಗಂಡನ ಮನೆಗೆ ಕಳುಹಿಸುವುದಿಲ್ಲ ಎಂದು ನಿರ್ಧರಿಸಿದಳು ?**

3) **ಭಾಂವ್ರಿದೇವಿಗೆ ಗ್ರಾಮೀಣ ಮಹಿಳಾ ಅಭಿವೃದ್ಧಿ ಯೋಜನೆಯಲ್ಲಿ ಯಾವ ಜವಾಬ್ದಾರಿಯನ್ನು ವಹಿಸಲಾಯಿತು?**

4) **ಭ್ರಾಂವ್ರಿದೇವಿಯ ಯಾವ ಹೋರಾಟದ ಗುಣಗಳನ್ನು ನೀವು ಮೆಚ್ಚುವಿರಿ ? ಏಕೆ ?**

ಬೆಂಬಲಿತ ಕಲಿಕೆಯ ಹಂತ – ಚಟುವಟಿಕೆ ಹಾಳೆ 7

# ಕಥೆ ಕಟ್ಟೋಣ

X6J5Q6

ಹೆಚ್ಚಿನ ಕಲಿಕೆಗಾಗಿ ಸ್ಕ್ಯಾನ್ ಮಾಡಿ

**ಕಲಿಕಾ ಫಲ** : ತಮ್ಮ ಅನುಭವಗಳನ್ನು ತಮ್ಮದೇ ಭಾಷಾ ಶೈಲಿಯಲ್ಲಿ ಬರೆಯುವರು. ಲೇಖನದ ವಿವಿಧ ಪ್ರಕಾರಗಳ ಮತ್ತು ಶೈಲಿಗಳ ಪ್ರಯೋಗ ಮಾಡುವರು. ಉದಾಹರಣೆಗೆ ಕಥೆ, ಕವಿತೆ, ಪ್ರಬಂಧ ಇತ್ಯಾದಿ.

**ಚಟುವಟಿಕೆ 1 : ಶಿಕ್ಷಕರು ಮತ್ತು ಸಹಪಾಠಿಗಳ ಸಹಾಯದಿಂದ ಕಥೆಯನ್ನು ಕಟ್ಟಿರಿ.**

1ನೆಯ ವಿದ್ಯಾರ್ಥಿ : _____

2ನೆಯ ವಿದ್ಯಾರ್ಥಿ : _____

3ನೆಯ ವಿದ್ಯಾರ್ಥಿ : _____

4ನೆಯ ವಿದ್ಯಾರ್ಥಿ : _____

ಈ ಕಥೆಯ ನೀತಿ : _____

**ಚಟುವಟಿಕೆ 2 : ಕೊಟ್ಟಿರುವ ಸುಳಿವುಗಳನ್ನು ಆಧರಿಸಿ ಕಥೆಯನ್ನು ಬರೆದು, ಶೀರ್ಷಿಕೆಯನ್ನು ಮತ್ತು ನೀತಿಯನ್ನು ಬರೆಯಿರಿ.**

ಒಬ್ಬ ರೈತನು ವಾಸವಾಗಿದ್ದನು – ಕೋಳಿಯನ್ನು ಸಾಕಿದ್ದನು – ಮೊಟ್ಟೆಗಳನ್ನು ಮಾರಿ ಸಂತೋಷವಾಗಿದ್ದನು – ಚಿನ್ನದ ಮೊಟ್ಟೆಯನ್ನು ಇಟ್ಟಿತು – ತುಂಬಾ ಸಂತೋಷವಾಯಿತು – ಪೇಟೆಯಲ್ಲಿ ಮಾರಿದನು – ಬಡವನಾಗಿದ್ದ ರೈತನು ಶ್ರೀಮಂತನಾದನು – ಹೊಟ್ಟೆಯೊಳಗೆ ಜಾಸ್ತಿ ಮೊಟ್ಟೆಗಳಿವೆ ಎಂದುಕೊಂಡನು – ದುರಾಸೆ ಉಂಟಾಯಿತು – ಕೋಳಿಯ ಹೊಟ್ಟೆಯನ್ನು ಕತ್ತರಿಸಿ ನೋಡಿದನು – ಚಿನ್ನದ ಮೊಟ್ಟೆಗಳು ಇರಲಿಲ್ಲ – ನಿರಾಸೆಗೊಂಡನು– ಕೋಳಿಯನ್ನು ಕಳೆದುಕೊಂಡನು –ದುಃಖಿಸಿದನು.

**ಕಥೆ:**

ಒಂದು ಊರು. ಅಲ್ಲಿ ಒಬ್ಬ ರೈತನು ವಾಸವಾಗಿದ್ದನು. ಅವನು ತುಂಬಾ ಬಡವನಾಗಿದ್ದನು.

_____

_____

_____

_____

_____

_____

_____

© KTBS NOT TO BE REPUBLISHED

@KTBS
NOT TO BE REPUBLISHED

**ಈ ಕಥೆಯ ನೀತಿ :**

ಬೆಂಬಲಿತ ಕಲಿಕೆಯ ಹಂತ – ಚಟುವಟಿಕೆ ಹಾಳೆ 8

# ಕ್ರಿಯಾಪದ

Q4G513

ಹೆಚ್ಚಿನ ಕಲಿಕೆಗಾಗಿ ಸ್ಕ್ಯಾನ್ ಮಾಡಿ

**ಕಲಿಕಾ ಫಲ** : ಭಾಷಾ ವ್ಯಾಕರಣಾಂಶವಾದ ಕ್ರಿಯಾಪದಗಳ ಬಗ್ಗೆ ತಿಳಿಯುವರು. ಪದಸಂಪತ್ತನ್ನು ಹೆಚ್ಚಿಸಿಕೊಳ್ಳುವರು.

* **ಧಾತು : ಕ್ರಿಯಾಪದದ ಮೂಲರೂಪವನ್ನು ಧಾತು ಎನ್ನುವರು.**
* **ಧಾತುಗಳಲ್ಲಿ ಎರಡು ವಿಧ.** ಅವುಗಳೆಂದರೆ ಸಕರ್ಮಕ ಧಾತು ಮತ್ತು ಅಕರ್ಮಕ ಧಾತು.
* **ಸಕರ್ಮಕಧಾತು :** ಕರ್ಮಪದವನ್ನು ಬಯಸುವ ಧಾತುಗಳನ್ನು ಸಕರ್ಮಕ ಧಾತು ಎನ್ನುವರು.
  ಉದಾಹರಣೆ : ಬರೆ, ತಿನ್ನು, ಓದು, ನೋಡು ಇತ್ಯಾದಿ.
* **ಅಕರ್ಮಕಧಾತು :** ಕರ್ಮಪದವನ್ನು ಬಯಸದ ಧಾತುಗಳನ್ನು ಅಕರ್ಮಕ ಧಾತುಎನ್ನುವರು.
  ಉದಾಹರಣೆ : ಮಲಗು, ಹೊಳೆ, ಕುಣಿ, ಮುಳುಗು ಇತ್ಯಾದಿ
* **ಕ್ರಿಯಾಪದ :** ಕ್ರಿಯೆಯನ್ನು ಸೂಚಿಸುವ ಪದಗಳನ್ನು ಕ್ರಿಯಾಪದ ಎನ್ನುವರು.
  ಉದಾಹರಣೆ : ನೋಡುತ್ತಾನೆ, ಕುಣಿಯುವಳು, ತಿಂದನು ಇತ್ಯಾದಿ.
* ಧಾತುವಿಗೆ ಕಾಲಸೂಚಕ ಪ್ರತ್ಯಯ, ಆಖ್ಯಾತ ಪ್ರತ್ಯಯಗಳು ಸೇರಿ ಕ್ರಿಯಾ ಪದವಾಗುತ್ತದೆ.

**ಚಟುವಟಿಕೆ 1 : ಕೊಟ್ಟಿರುವ ಪದಗಳಲ್ಲಿರುವ ಧಾತು, ಕಾಲಸೂಚಕ ಪ್ರತ್ಯಯ ಹಾಗೂ ಆಖ್ಯಾತ ಪ್ರತ್ಯಯ ಹಾಗೂ ಕ್ರಿಯಾ ಪದಗಳನ್ನು ಮಾದರಿಯಂತೆ ಪಟ್ಟಿ ಮಾಡಿ ಬರೆಯಿರಿ.**

| ಕ್ರ.ಸಂ. | ಧಾತು | ಕಾಲಸೂಚಕ ಪ್ರತ್ಯಯ | ಆಖ್ಯಾತ ಪ್ರತ್ಯಯ | ಕ್ರಿಯಾಪದ |
|---|---|---|---|---|
| ಮಾದರಿ: | ಮಾಡು | ಉತ್ತ | ಆನೆ | ಮಾಡುತ್ತಾನೆ |
| 1 | ತಿನ್ನು | ವ | ಅನು | |
| 2 | ಬರೆ | ಉವ | ಅಳು | |
| 3 | ನಡೆ | ದ | ಅಳು | |
| 4 | ಹಾಡು | ಉತ್ತ | ಆಳೆ | |
| 5 | ನಲಿ | ದ | ಅರು | |
| 6 | ಹಾರು | ವ | ಅವು | |
| 7 | ಹೋಗು | ಉತ್ತ | ಅವೆ | |
| 8 | ನೋಡು | ವ | ಅರು | |
| 9 | ಕುಣಿ | ಉತ್ತ | ಅದೆ | |
| 10 | ಮಲಗು | ಉತ್ತ | ಆಳೆ | |

@KTBS NOT TO BE REPUBLISHED

**ಚಟುವಟಿಕೆ 2 : ಕೊಟ್ಟಿರುವ ಪರಿಚ್ಛೇದದಲ್ಲಿರುವ ಕ್ರಿಯಾ ಪದಗಳನ್ನು ಗುರುತಿಸಿ ಪಟ್ಟಿ ಮಾಡಿ.**

ಒಂದು ಊರಿನಲ್ಲಿ ಒಬ್ಬ ಶ್ರೀಮಂತ ಇದ್ದನು. ಅವನು ಒಮ್ಮೆ ತನ್ನ ಕಾರಿನಲ್ಲಿ ಹೋಗುತ್ತಿದ್ದನು. ರಸ್ತೆ ಬದಿಯಲ್ಲಿ ಒಬ್ಬ ಮುದುಕಿಯು ಕುಳಿತು ಭಿಕ್ಷೆ ಬೇಡುತ್ತಿದ್ದಳು. ಅವಳನ್ನು ನೋಡಿದ ಶ್ರೀಮಂತನು ಅವಳಿಗೆ ಸಹಾಯ ಮಾಡಲು ಅವಳ ಬಳಿಗೆ ಹೋದನು. ಹಣದ ಕಂತೆಯನ್ನು ತೆಗೆದು ಅವಳಿಗೆ ಕೊಡಲು ಹಣ ನೀಡಲು ಕೈ ನೀಡಿದನು. ಅದನ್ನು ಕಂಡು ಆ ಮುದುಕಿಗೆ ತುಂಬಾ ಖುಷಿಪಟ್ಟಳು. ಶ್ರೀಮಂತನು ಅವಳಿಗೆ ಹಣವನ್ನು ನೀಡುವಾಗ ಏನೋ ಯೋಚಿಸಿ ಹಣ ನೀಡದೆ ಬೇರೆಕಡೆ ಹೋದನು. ಆ ಮುದುಕಿಯು ನಿರಾಸೆಯಿಂದ ಅವನ ಕಡೆಗೇ ನೋಡುತ್ತಾ ನಿಂತಿದ್ದಳು. ತುಂಬಾ ಬೇಸರಗೊಂಡಳು.

ಸ್ವಲ್ಪ ಸಮಯದ ನಂತರ ಆ ಶ್ರೀಮಂತನು ಒಂದು ಪೆಟ್ಟಿಗೆಯನ್ನು ತಂದನು. ಅದನ್ನು ತೆಗೆದಾಗ ಅದರೊಳಗೆ ತೂಕದ ಯಂತ್ರವಿತ್ತು. ಅದನ್ನು ಶ್ರೀಮಂತನು ಆ ಮುದುಕಿಗೆ ನೀಡಿದನು. ನಂತರ ಆ ತೂಕದ ಯಂತ್ರದಲ್ಲಿ ನಿಂತು ತನ್ನ ತೂಕವನ್ನು ನೋಡಿಕೊಂಡು ಅದಕ್ಕೆ ಅವನು ಮುದುಕಿಗೆ ಒಂದು ನಾಣ್ಯವನ್ನು ಕೊಟ್ಟನು. ಆಗ ಮುದುಕಿಯು ಅದನ್ನು ಪಡೆದುಕೊಂಡಳು. ಆ ಶ್ರೀಮಂತನು ಮಾಡಿದ ಸಹಾಯವನ್ನು ಅರ್ಥಮಾಡಿಕೊಂಡಳು. ಅಂದಿನಿಂದ ಆ ತೂಕದ ಯಂತ್ರದ ಸಹಾಯದಿಂದು ದುಡಿದು ಹಣ ಸಂಪಾದಿಸಿದಳು. ಭಿಕ್ಷುಕಿಯಾಗಿದ್ದ ಆ ಮುದುಕಿಯು ದುಡಿದು ಬದುಕುತ್ತಾ ಸ್ವಾವಲಂಬಿಯಾದಳು. ಅಲ್ಲಿ ಭಿಕ್ಷೆ ಬೇಡುತ್ತಿದ್ದ ಇತರರಿಗೆ ಮಾದರಿಯಾದಳು. ಇದಲ್ಲವೇ ಸಹಾಯ? ಇದಲ್ಲವೇ ಮಾನವೀಯತೆ? ಇದಲ್ಲವೇ ಅನುಕರಣೀಯ?

**ಕ್ರಿಯಾಪದಗಳು :–**

| | |
|---|---|
| | |
| | |
| | |

NOT TO BE REPUBLISHED ©KTBS

**ಚಟುವಟಿಕೆ 3 :** ಕೊಟ್ಟಿರುವ ಸುಳಿವುಗಳನ್ನು ಆಧರಿಸಿ ಸೂಕ್ತ ಪ್ರತ್ಯಯಗಳನ್ನು ಬಳಸಿಕೊಂಡು ಅರ್ಥಪೂರ್ಣ ವಾಕ್ಯಗಳನ್ನು ಬರೆಯೋಣ.

| | | |
|---|---|---|
| **ಗಣೇಶನು** | **ವಿಮಾನವನ್ನು** | ನೋಡಿದಳು |
| | | ನೋಡಿತು |
| **ಗೌರಿಯು** | | ನೋಡುತ್ತಾನೆ |
| | | ನೋಡುವಳು |
| | | ನೋಡುತ್ತಿದೆ |
| | | ನೋಡುತ್ತಾಳೆ |
| **ಮಗುವು** | | ನೋಡಿದನು |
| | | ನೋಡುವುದು |
| | | ನೋಡುವನು |

**ಅರ್ಥಪೂರ್ಣ ವಾಕ್ಯಗಳನ್ನು ಬರೆಯಿರಿ.**

1 _____

2 _____

3 _____

4 _____

5 _____

6 _____

7 _____

8 _____

9 _____

10 _____

ಬೆಂಬಲಿತ ಕಲಿಕೆಯ ಹಂತ – ಚಟುವಟಿಕೆ ಹಾಳೆ 9

# ಕಾಲಗಳು

ಹೆಚ್ಚಿನ ಕಲಿಕೆಗಾಗಿ ಸ್ಕ್ಯಾನ್ ಮಾಡಿ

**ಕಲಿಕಾ ಫಲ :** ಭಾಷಾ ವ್ಯಾಕರಣಾಂಶವಾದ ಕಾಲಗಳ ಬಗ್ಗೆ ತಿಳಿಯುವರು. ಪದಸಂಪತ್ತನ್ನು ಹೆಚ್ಚಿಸಿಕೊಳ್ಳುವರು.

**ಕಾಲಗಳು : ಕ್ರಿಯೆಯು ನಡೆದ ಬೇರೆ ಬೇರೆ ಕಾಲವನ್ನು ತಿಳಿಸುವುದನ್ನು ಕಾಲಗಳು ಎನ್ನುವರು.**

ಕನ್ನಡ ಭಾಷೆಯಲ್ಲಿ ಮೂರು ರೀತಿಯ ಕಾಲಗಳನ್ನು ಕಾಣಬಹುದು. ಅವುಗಳೆಂದರೆ

1. **ಭೂತಕಾಲ**
2. **ವರ್ತಮಾನ ಕಾಲ**
3. **ಭವಿಷ್ಯತ್ ಕಾಲ**

**ಧಾತುಗಳ ಮೇಲೆ ಕಾಲಸೂಚಕ ಪ್ರತ್ಯಯ ಹಾಗೂ ಆಖ್ಯಾತಪ್ರತ್ಯಯ ಸೇರಿ ಪೂರ್ಣ ಕ್ರಿಯಾಪದವಾಗುವುದು.**

**1. ಭೂತಕಾಲ :–** ಕ್ರಿಯೆಯು ಪೂರ್ಣವಾಗಿ ಮುಗಿದಿರುವುದನ್ನು ತಿಳಿಸುವುದಕ್ಕೆ ಭೂತಕಾಲ ಎನ್ನುವರು. ಭೂತಕಾಲದ ಕಾಲಸೂಚಕ ಪ್ರತ್ಯಯ 'ದ'

| ಧಾತು | ಕಾಲಸೂಚಕಪ್ರತ್ಯಯ | ಆಖ್ಯಾತಪ್ರತ್ಯಯ | ಕ್ರಿಯಾಪದ |
|---|---|---|---|
| ಹೋಗು | ದ | ಅನು | ಹೋದನು |

**2. ವರ್ತಮಾನ ಕಾಲ :–** ಕ್ರಿಯೆಯು ಪ್ರಾರಂಭವಾಗಿ ನಡೆಯುತ್ತಿರುವುದನ್ನು ಸೂಚಿಸುವುದಕ್ಕೆ ವರ್ತಮಾನ ಕಾಲ ಎನ್ನುವರು. ವರ್ತಮಾನ ಕಾಲದ ಕಾಲಸೂಚಕ ಪ್ರತ್ಯಯ 'ಉತ್ತ'

| ಧಾತು | ಕಾಲಸೂಚಕಪ್ರತ್ಯಯ | ಆಖ್ಯಾತಪ್ರತ್ಯಯ | ಕ್ರಿಯಾಪದ |
|---|---|---|---|
| ಹೋಗು | ಉತ್ತ | ಇದ್ದಾನೆ | ಹೋಗುತ್ತಿದ್ದಾನೆ |

**3. ಭವಿಷ್ಯತ್ ಕಾಲ :–** ಕ್ರಿಯೆಯು ಮುಂದೆ ನಡೆಯುತ್ತದೆ ಎಂಬುದನ್ನು ಸೂಚಿಸುವುದಕ್ಕೆ ಭವಿಷ್ಯತ್ ಕಾಲ ಎನ್ನುವರು. ಭವಿಷ್ಯತ್ ಕಾಲದ ಕಾಲಸೂಚಕ ಪ್ರತ್ಯಯ 'ವ'

| ಧಾತು | ಕಾಲಸೂಚಕಪ್ರತ್ಯಯ | ಆಖ್ಯಾತಪ್ರತ್ಯಯ | ಕ್ರಿಯಾಪದ |
|---|---|---|---|
| ಹೋಗು | ವ | ಅನು | ಹೋಗುವನು |





@KTBS NOT TO BE REPUBLISHED

ಚಟುವಟಿಕೆ 4 : ಕೊಟ್ಟಿರುವ ಧಾತುಗಳಿಗೆ ಮಾದರಿಯಂತೆ ಕ್ರಿಯಾಪದಗಳನ್ನು ಬರೆಯಿರಿ.

| ಧಾತು | ಕಾಲಗಳು | ಪುಲ್ಲಿಂಗ | ಸ್ತ್ರೀಲಿಂಗ | ನಪುಂಸಕಲಿಂಗ | ಬಹುವಚನ |
|---|---|---|---|---|---|
| ಮಾದರಿ: | ಭೂತಕಾಲ | ಕೇಳಿದನು | ಕೇಳಿದಳು | ಕೇಳಿತು | ಕೇಳಿದರು |
| ಕೇಳು | ವರ್ತಮಾನ ಕಾಲ | ಕೇಳುತ್ತಿದ್ದಾನೆ | ಕೇಳುತ್ತಿದ್ದಾಳೆ | ಕೇಳುತ್ತಿದೆ | ಕೇಳುತ್ತಿದ್ದಾರೆ |
| | ಭವಿಷ್ಯತ್ ಕಾಲ | ಕೇಳುವನು | ಕೇಳುವಳು | ಕೇಳುವುದು | ಕೇಳಿದರು |
| ನೋಡು | ಭೂತಕಾಲ | | | | |
| | ವರ್ತಮಾನ ಕಾಲ | | | | |
| | ಭವಿಷ್ಯತ್ ಕಾಲ | | | | |
| ಮಾಡು | ಭೂತಕಾಲ | | | | |
| | ವರ್ತಮಾನ ಕಾಲ | | | | |
| | ಭವಿಷ್ಯತ್ ಕಾಲ | | | | |
| ಓದು | ಭೂತಕಾಲ | | | | |
| | ವರ್ತಮಾನ ಕಾಲ | | | | |
| | ಭವಿಷ್ಯತ್ ಕಾಲ | | | | |
| ತಿನ್ನು | ಭೂತಕಾಲ | | | | |
| | ವರ್ತಮಾನ ಕಾಲ | | | | |
| | ಭವಿಷ್ಯತ್ ಕಾಲ | | | | |
| ಮಲಗು | ಭೂತಕಾಲ | | | | |
| | ವರ್ತಮಾನ ಕಾಲ | | | | |
| | ಭವಿಷ್ಯತ್ ಕಾಲ | | | | |

@KTBS NOT TO BE REPUBLISHED

ಬೆಂಬಲಿತ ಕಲಿಕೆಯ ಹಂತ – ಚಟುವಟಿಕೆ ಹಾಳೆ 10

# ಸಂಧಿಗಳು

KZE7T4

ಹೆಚ್ಚಿನ ಕಲಿಕೆಗಾಗಿ ಸ್ಕ್ಯಾನ್ ಮಾಡಿ

**ಕಲಿಕಾ ಫಲ :** ಸಂಧಿಯ ವ್ಯಾಕರಣ ನಿಯಮಗಳನ್ನು ತಿಳಿಯುವರು ಮತ್ತು ಪ್ರಾಯೋಗಿಕ ವ್ಯಾಕರಣಾಂಶಗಳನ್ನು ಬಳಸುವರು. ಪ್ರಯೋಗಿಸುವರು.

ಎರಡು ವರ್ಣಗಳು (ಅಕ್ಷರಗಳು) ಕಾಲವಿಳಂಬವಿಲ್ಲದೆ ಅರ್ಥಕ್ಕನುಗುಣವಾಗಿ ಸೇರುವುದೇ ಸಂಧಿ ಎನಿಸುವುದು.
ಸಂಧಿಗಳಲ್ಲಿ ಎರಡು ವಿಧಗಳಿವೆ. ಅವುಗಳೆಂದರೆ

**1. ಕನ್ನಡ ಸಂಧಿ**
**2. ಸಂಸ್ಕೃತ ಸಂಧಿ**

* ಸ್ವರದ ಮುಂದೆ ಸ್ವರ ಬಂದು ಸಂಧಿಯಾದರೆ ಅದು ಸ್ವರಸಂಧಿ
* ಸ್ವರದ ಮುಂದೆ ವ್ಯಂಜನ ಬಂದು ಅಥವಾ ವ್ಯಂಜನದ ಮುಂದೆ ಸ್ವರ ಬಂದು ಸಂಧಿಯಾದರೆ ಅದು ವ್ಯಂಜನ ಸಂಧಿ.

**ಕನ್ನಡ ಸಂಧಿಗಳು**

**1. ಲೋಪಸಂಧಿ :–** ಸ್ವರದ ಮುಂದೆ ಸ್ವರವು ಬಂದು ಸಂಧಿಯಾಗುವಾಗ ಪೂರ್ವದಲ್ಲಿರುವ ಸ್ವರವು ಲೋಪವಾದರೆ ಅದನ್ನು ಲೋಪಸಂಧಿ ಎನ್ನುವರು.
ಉದಾ: ನಾವು + ಎಲ್ಲ = ನಾವೆಲ್ಲ

**2. ಆಗಮಸಂಧಿ :–** ಸ್ವರದ ಮುಂದೆ ಸ್ವರವು ಬಂದಾಗ ಆ ಎರಡು ಸ್ವರಗಳ ಮಧ್ಯದಲ್ಲಿ 'ಯ'ಕಾರ ಅಥವಾ 'ವ'ಕಾರ ಹೊಸದಾಗಿ ಬಂದರೆ ಅದನ್ನು ಆಗಮಸಂಧಿ ಎನ್ನುವರು.
ಉದಾ: ಹೊಲ + ಅನ್ನು = ಹೊಲವನ್ನು ---> ವಕಾರಾಗಮ ಸಂಧಿ
ಕೆರೆ + ಅಲ್ಲಿ = ಕೆರೆಯಲ್ಲಿ ---> ಯಕಾರಾಗಮ ಸಂಧಿ

**3. ಆದೇಶಸಂಧಿ :–** ಸಂಧಿಯಾಗುವಾಗ ಒಂದು ಅಕ್ಷರದ ಸ್ಥಾನದಲ್ಲಿ ಬೇರೊಂದು ಅಕ್ಷರವು ಬಂದರೆ ಅದನ್ನು ಆದೇಶಸಂಧಿ ಎನ್ನುವರು. (ಸಾಮಾನ್ಯವಾಗಿ ಕ,ತ,ಪ ಗಳಿಗೆ ಗ,ದ,ಬ ಗಳು ಆದೇಶವಾಗಿ ಬರುತ್ತವೆ)
ಉದಾ: ಹುಲ್ಲು + ಕಾವಲು = ಹುಲ್ಲುಗಾವಲು
ಮೈ + ತೊಳೆ = ಮೈದೊಳೆ
ಕಣ್ + ಪನಿ = ಕಂಬನಿ

ಸಂಧಿ ಕಾರ್ಯಕವು ಪೂರ್ವಪದದ ಕೊನೆಯ ಅಕ್ಷರದಲ್ಲಿ ಮತ್ತು ಉತ್ತರ ಪದದ ಮೊದಲ ಅಕ್ಷರದಲ್ಲಿ ಮಾತ್ರವೇ ನಡೆಯುತ್ತದೆ.

@KTBS NOT TO BE REPUBLISHED

**ಚಟುವಟಿಕೆ 1 : ಕೊಟ್ಟಿರುವ ಸಂಧಿ ಪದಗಳನ್ನು ಮಾದರಿಯಂತೆ ಬಿಡಿಸಿ ಬರೆದು, ಸಂಧಿಕಾರ್ಯ_ವನ್ನು ಗುರುತಿಸಿ, ಬರೆಯಿರಿ.**

**ಮಾದರಿ :– ಬೇರೊಬ್ಬ = ಬೇರೆ + ಒಬ್ಬ ---> ಸ್ವರ ಲೋಪವಾಗಿದೆ (ಲೋಪಸಂಧಿ)**

1. ಹಣ್ಣನ್ನು = _____ + _____ ---> _____
2. ನಾವೆಲ್ಲಾ = _____ + _____ ---> _____
3. ಅವನೂರು = _____ + _____ ---> _____

4. ಕೈಯಿಂದ = _____ + _____ ---> _____

5. ಚಳಿಯಿಂದ = _____ + _____ ---> _____

6. ಹಣವನ್ನು = _____ + _____ ---> _____

7. ಹೊಲವನ್ನು = _____ + _____ ---> _____

8. ಹೊಸಗನ್ನಡ = _____ + _____ ---> _____

9. ಬೆಟ್ಟದಾವರೆ = _____ + _____ ---> _____

10. ಕಂಬನಿ = _____ + _____ ---> _____

**ಚಟುವಟಿಕೆ 2 : ಕೊಟ್ಟಿರುವ ಪದಗಳನ್ನು ಮಾದರಿಯಂತೆ ಕೂಡಿಸಿ ಬರೆದು ಸಂಧಿಯನ್ನು ಹೆಸರಿಸಿ.**

**ಮಾದರಿ: ಮಾತು + ಇಲ್ಲ = ಮಾತಿಲ್ಲ ---> ಲೋಪಸಂಧಿ**

1. ನಿನಗೆ + ಅಲ್ಲದೆ = _____ ---> _____

2. ಅಕ್ಷರ + ಅನ್ನು = _____ ---> _____

3. ತೆನೆ + ಅನ್ನು = _____ ---> _____

4. ಮಳೆ + ಕಾಲ = _____ ---> _____

5. ಹೊಸ + ಕನ್ನಡ = _____ ---> _____

**ಚಟುವಟಿಕೆ 3 : ಕೊಟ್ಟಿರುವ ವಾಕ್ಯಗಳಲ್ಲಿ ಸಂಧಿ ಪದಗಳನ್ನು ಗುರುತಿಸಿ ಬರೆಯಿರಿ.**

**ಮಾದರಿ: ನಮ್ಮ ಊರಲ್ಲಿ ಶಿವ ಮಂದಿರ ಇದೆ.**

1. ರೈತರು ಭತ್ತವನ್ನು ಬೆಳೆಯುತ್ತಾರೆ ----> _____

2. ಹೂಬುಟ್ಟಿಯಲ್ಲಿ ತರತರದ ಹೂಗಳಿವೆ ----> _____

3. ನಾವೆಲ್ಲಾ ಭಾರತೀಯರು ----> _____

4. ಚಳಿಗಾಲದಲ್ಲಿ ಮರಗಳ ಎಲೆಗಳು ಉದುರುತ್ತವೆ --> _____

5. ಜಗತ್ತು ಶಕ್ತಿಯನ್ನು ಪೂಜಿಸುತ್ತದೆ ----> _____

@KTBS NOT TO BE REPUBLISHED

# ಸಮಾಸಗಳು–1

Z1T5D3
ಹೆಚ್ಚಿನ ಕಲಿಕೆಗಾಗಿ ಸ್ಕ್ಯಾನ್ ಮಾಡಿ

**ಕಲಿಕಾ ಫಲ :** ಸಮಾಸದ ವ್ಯಾಕರಣ ನಿಯಮಗಳನ್ನು ತಿಳಿಯುವರು ಮತ್ತು ಪ್ರಾಯೋಗಿಕ ವ್ಯಾಕರಣಾಂಶಗಳನ್ನು ಬಳಸುವರು. ಪ್ರಯೋಗಿಸುವರು.

ಎರಡು ಅಥವಾ ಅನೇಕ ಪದಗಳು ಅರ್ಥಕ್ಕನುಗುಣವಾಗಿ ಸೇರಿ ಮಧ್ಯದಲ್ಲಿರುವ ವಿಭಕ್ತಿ ಪ್ರತ್ಯಯವನ್ನು ಲೋಪ ಮಾಡಿಕೊಂಡು ಒಂದು ಪದವಾಗುವುದೇ ಸಮಾಸವಾಗಿದೆ.
ಉದಾ: ಹಿರಿದಾದ + ಮರ = ಹೆಮ್ಮರ

**ಪೂರ್ವ ಪದ**
ಸಮಾಸದಲ್ಲಿ ಬರುವ ಮೊದಲ ಪದ
ಉದಾ: ಹಿರಿದಾದ

**ಉತ್ತರ ಪದ**
ಸಮಾಸದಲ್ಲಿ ಬರುವ ಎರಡನೆಯ ಪದ
ಉದಾ: ಮರ

**ವಿಗ್ರಹ ವಾಕ್ಯ**
ಸಮಾಸ/ಸಮಸ್ತ ಪದವನ್ನು ಬಿಡಿಸಿ ಬರೆಯುವುದು
ಉದಾ: ಹಿರಿದಾದ + ಮರ

@KTBS NOT TO BE REPUBLISHED

**ಚಟುವಟಿಕೆ 1 : ಕೊಟ್ಟಿರುವ ಸಮಾಸ ಪದಗಳನ್ನು ಮಾದರಿಯಂತೆ ವಿಗ್ರಹವಾಕ್ಯ ಮಾಡಿ ಬರೆಯಿರಿ.**

| ಮಾದರಿ: | ಮಳೆಗಾಲ | = | ಮಳೆಯ + ಕಾಲ |
|---|---|---|---|
| 1. | ಹೆಜ್ಜೇನು | = | _____ + _____ |
| 2. | ಮುಕ್ಕಣ್ಣ | = | _____ + _____ |
| 3. | ಕೆಂದಾವರೆ | = | _____ + _____ |
| 4. | ಹೆಬ್ಬಾಗಿಲು | = | _____ + _____ |
| 5. | ಪಂಚೇಂದ್ರಿಯಗಳು | = | _____ + _____ |

**ಚಟುವಟಿಕೆ 2 : ಕೊಟ್ಟಿರುವ ವಿಗ್ರಹವಾಕ್ಯದ ಪದಗಳನ್ನು ಮಾದರಿಯಂತೆ ಕೂಡಿಸಿಬರೆಯಿರಿ.**

| ಮಾದರಿ: | ಮೂರು | + | ಮಡಿ | = | ಮುಮ್ಮಡಿ |
|---|---|---|---|---|---|
| 1. | ತಲೆಯಲ್ಲಿ | + | ನೋವು | = | _____ |
| 2. | ಕಾಲಿಗೆ | + | ಕಡಗ | = | _____ |
| 3. | ಸಪ್ತವಾದ | + | ಸ್ವರಗಳು | = | _____ |
| 4. | ಹಿರಿಯ | + | ಮಗ | = | _____ |
| 5. | ಪಕ್ಷಿಯ | + | ಗೂಡು | = | _____ |

ಬೆಂಬಲಿತ ಕಲಿಕೆಯ ಹಂತ – ಚಟುವಟಿಕೆ ಹಾಳೆ 12

# ಸಮಾಸಗಳು–2

ಹೆಚ್ಚಿನ ಕಲಿಕೆಗಾಗಿ ಸ್ಕ್ಯಾನ್ ಮಾಡಿ

**ಕಲಿಕಾ ಫಲ :** ಸಮಾಸದ ವ್ಯಾಕರಣ ನಿಯಮಗಳನ್ನು ತಿಳಿಯುವರು ಮತ್ತು ಪ್ರಾಯೋಗಿಕ ವ್ಯಾಕರಣಾಂಶಗಳನ್ನು ಬಳಸುವರು. ಪ್ರಯೋಗಿಸುವರು.

**ಚಟುವಟಿಕೆ 1 :** ಕೊಟ್ಟಿರುವ ಪದಗಳ ಗುಂಪಿನಲ್ಲಿರುವ ಸಮಾಸ ಪದಗಳನ್ನು ತತ್ಪುರುಷ, ಕರ್ಮಧಾರೆಯ ಹಾಗೂ ದ್ವಿಗು ಸಮಾಸಗಳಾಗಿ ವಿಂಗಡಿಸಿ ಬರೆಯಿರಿ.

ದೇವಮಂದಿರ, ಬೆಳ್ಗೊಡೆ, ಒಗ್ಗಟ್ಟು, ನೀಲಸಮುದ್ರ, ವಯೋವೃದ್ಧ, ಹಳೆಗನ್ನಡ, ನವರಾತ್ರಿ, ಹೆಬ್ಬಾವು, ಮೃಗಾಲಯ, ಸಪ್ತಸ್ವರಗಳು, ಮುಮ್ಮಡಿ, ದೇಶರಕ್ಷಣೆ,

| ತತ್ಪುರುಷ ಸಮಾಸ | ಕರ್ಮಧಾರೆಯ ಸಮಾಸ | ದ್ವಿಗು ಸಮಾಸ |
|---|---|---|
| | | |
| | | |
| | | |
| | | |
| | | |
| | | |
| | | |
| | | |
| | | |
| | | |
| | | |

@KTBS NOT TO BE REPUBLISHED

ಬೆಂಬಲಿತ ಕಲಿಕೆಯ ಹಂತ – ಚಟುವಟಿಕೆ ಹಾಳೆ 13

# ವಿಭಕ್ತಿ ಪ್ರತ್ಯಯಗಳು

ಹೆಚ್ಚಿನ ಕಲಿಕೆಗಾಗಿ ಸ್ಕ್ಯಾನ್ ಮಾಡಿ

**ಕಲಿಕಾ ಫಲ :** ಭಾಷಾ ವ್ಯಾಕರಣಾಂಶವಾದ ವಿಭಕ್ತಿ ಪ್ರತ್ಯಯಗಳ ಬಗ್ಗೆ ತಿಳಿಯುವರು. ಪದಸಂಪತ್ತನ್ನು ಹೆಚ್ಚಿಸಿಕೊಳ್ಳುವರು.

**ನಾಮಪ್ರಕೃತಿ ಹಾಗೂ ವಾಕ್ಯಕ್ಕೆ ಅರ್ಥವನ್ನು ಕಲ್ಪಿಸುವಂತಹ ಪ್ರತ್ಯಯಗಳನ್ನು ವಿಭಕ್ತಿ ಪ್ರತ್ಯಯಗಳು ಎನ್ನುವರು.**

ಉದಾ: ವಾಕ್ಯ 1 –> ಕೊಡಲಿ ಸೌದೆ ಕತ್ತರಿಸಿದನು

ವಾಕ್ಯ 2 –> ಕೊಡಲಿಯಿಂದ ಸೌದೆಯನ್ನು ಕತ್ತರಿಸಿದನು

ವಾಕ್ಯ 2ರಲ್ಲಿಸ್ಪಷ್ಟವಾದ ಅರ್ಥವನ್ನು ಕೊಡುತ್ತದೆ. ಇಲ್ಲಿ ಇಂದ, ಅನ್ನು ಎಂಬ ಪ್ರತ್ಯಯಗಳು ವಾಕ್ಯದ ಅರ್ಥವನ್ನು ಸ್ಪಷ್ಟವಾಗಿ ತಿಳಿಯಲು ಸಹಕಾರಿಯಾಗಿದೆ. ಇಂತಹ ಏಳು ಬಗೆಯ ಪ್ರತ್ಯಯಗಳು ನಮ್ಮ ಕನ್ನಡ ಭಾಷೆಯಲ್ಲಿದೆ. ಅವುಗಳೆಂದರೆ

| ಕ್ರ.ಸಂ. | ವಿಭಕ್ತಿಗಳು | ಹೊಸಗನ್ನಡ ಪ್ರತ್ಯಯಗಳು |
|---|---|---|
| 1 | ಪ್ರಥಮಾ | ಉ |
| 2 | ದ್ವಿತೀಯಾ | ಅನ್ನು |
| 3 | ತೃತೀಯಾ | ಇಂದ |
| 4 | ಚತುರ್ಥೀ | ಗೆ/ಕ್ಕೆ |
| 5 | ಪಂಚಮೀ | ದೆಸೆಯಿಂದ |
| 6 | ಷಷ್ಠೀ | ಅ |
| 7 | ಸಪ್ತಮೀ | ಅಲ್ಲಿ |

© KTBS NOT TO BE REPUBLISHED

**ಚಟುವಟಿಕೆ 1 : ಕೊಟ್ಟಿರುವ ಪದಗಳಲ್ಲಿ ಅಡಕವಾಗಿರುವ ಪ್ರತ್ಯಯ ಮತ್ತು ವಿಭಕ್ತಿಯ ಹೆಸರನ್ನು ಬರೆಯಿರಿ.**

| ನಾಮಪದಗಳು | ಪ್ರತ್ಯಯಗಳು | ವಿಭಕ್ತಿಗಳು |
|---|---|---|
| ಮಾದರಿ: ಮರಕ್ಕೆ | ಕ್ಕೆ | ಚತುರ್ಥೀ ವಿಭಕ್ತಿ |
| ಪೂರ್ವದಲ್ಲಿ | | |
| ಜಗತ್ತನ್ನು | | |
| ತಲಕಾಡಿನ | | |
| ಮೈಸೂರಿನಿಂದ | | |
| ದೇವರಿಗೆ | | |
| ಹಕ್ಕಿಯು | | |
| ದಕ್ಷಿಣಕ್ಕೆ | | |
| ಅವನಿಂದ | | |
| ನಿನ್ನಲ್ಲಿ | | |
| ಮುಂಗಾರಿನ | | |

**ಚಟುವಟಿಕೆ 2 :** ಕೊಟ್ಟಿರುವ 'ಅ' ಪಟ್ಟಿಯಲ್ಲಿರುವ ವಿಭಕ್ತಿಗಳನ್ನು 'ಬ' ಪಟ್ಟಿಯ ಪ್ರತ್ಯಯಗಳೊಂದಿಗೆ ಹೊಂದಿಸಿ ಬರೆಯಿರಿ.

| | 'ಅ' ಪಟ್ಟಿ | 'ಬ' ಪಟ್ಟಿ | ಉತ್ತರಗಳು |
|---|---|---|---|
| 1. | ಪ್ರಥಮಾ | ಇಂದ | |
| 2. | ತೃತೀಯಾ | ಅ | |
| 3. | ಸಪ್ತಮೀ | ಗೆ / ಕ್ಕೆ | |
| 4. | ದ್ವಿತೀಯಾ | ಉ | |
| 5. | ಷಷ್ಠೀ | ಅಲ್ಲಿ | |
| 6. | ಚತುರ್ಥೀ | ಅನ್ನು | |

**ಚಟುವಟಿಕೆ 3 : ಕೊಟ್ಟಿರುವ ನಾಮಪ್ರಕೃತಿ ಮತ್ತು ವಿಭಕ್ತಿ ಪ್ರತ್ಯಯಗಳನ್ನು ಮಾದರಿಯಂತೆ ಕೂಡಿಸಿ ಬರೆದು, ವಿಭಕ್ತಿಯನ್ನು ಹೆಸರಿಸಿ.**

**ಬೆಟ್ಟ + ಅಲ್ಲಿ = ಬೆಟ್ಟದಲ್ಲಿ ---> ಸಪ್ತಮೀ**

1. ನಾಲ್ಕು + ಅನ್ನು = _____ ---> _____
2. ಹಸು + ಉ = _____ ---> _____
3. ರಾಧೆ + ಅ = _____ ---> _____
4. ಲೇಖನಿ + ಇಂದ = _____ ---> _____
5. ಕೆರೆ + ಗೆ = _____ ---> _____

**ಚಟುವಟಿಕೆ 4 : ಕೊಟ್ಟಿರುವ ನಾಮಪ್ರಕೃತಿಗೆ ಮಾದರಿಯಂತೆ ವಿಭಕ್ತಿ ಪ್ರತ್ಯಯಗಳನ್ನು ಬಳಸಿ ವಾಕ್ಯದಲ್ಲಿ ಪ್ರಯೋಗಿಸಿರಿ.**

**ನಾಮಪ್ರಕೃತಿ ---> ಮರ**

ಮಾದರಿ: 1. ಮರವು ನಮಗೆ ಅಮ್ಲಜನಕವನ್ನು ನೀಡುತ್ತದೆ.
2. ಜನರು ದೊಡ್ಡ ಮರವನ್ನು ಕಡಿಯಲು ವಿರೋಧಿಸಿದರು.
3. ಕೋತಿಗಳು ಮರದಿಂದ ಮರಕ್ಕೆ ನೆಗೆಯುತ್ತಿವೆ.
4. ಮಕ್ಕಳು ಮರಕ್ಕೆ ಹಗ್ಗಕಟ್ಟಿ ಆಟವಾಡಿದರು.
5. ಮರದ ದೆಸೆಯಿಂದ ಹಣ್ಣುಗಳು ಉದುರಿದವು.
6. ಶಿಶಿರ ಋತುವಿನಲ್ಲಿ ಮರದ ಎಲೆಗಳು ಉದುರುತ್ತವೆ.
7. ಹಕ್ಕಿಗಳು ಮರದಲ್ಲಿ ಗೂಡುಗಳನ್ನು ಕಟ್ಟಿವೆ.

**ನಾಮಪ್ರಕೃತಿ ---> ಕುದುರೆ**

1. _____
2. _____
3. _____
4. _____
5. _____
6. _____
7. _____

@KTBS NOT TO BE REPUBLISHED

ಬೆಂಬಲಿತ ಕಲಿಕೆಯ ಹಂತ – ಚಟುವಟಿಕೆ ಹಾಳೆ 14

# ಲೇಖನ ಚಿಹ್ನೆಗಳು – 1

T2Q2V7

ಹೆಚ್ಚಿನ ಕಲಿಕೆಗಾಗಿ ಸ್ಕ್ಯಾನ್ ಮಾಡಿ

**ಕಲಿಕಾ ಫಲ :** ವಿಭಿನ್ನ ಉದ್ದೇಶಗಳಿಗಾಗಿ ಬರೆಯುತ್ತಿರುವ ತಮ್ಮ ಬರೆವಣಿಗೆಯಲ್ಲಿ ಲೇಖನ ಚಿಹ್ನೆಗಳು

**ಉದಾ: ಪೂರ್ಣ ವಿರಾಮ, ಅಲ್ಪವಿರಾಮ, ಪ್ರಶ್ನಾರ್ಥಕ, ಭಾವಸೂಚಕ, ಉದ್ಧರಣ ಚಿಹ್ನೆಗಳನ್ನು ಸೂಕ್ತವಾಗಿ ಬಳಸುವರು.**

| | 'ಅ' ಪಟ್ಟಿ | 'ಬ' ಪಟ್ಟಿ | ಉತ್ತರಗಳು |
|---|---|---|---|
| 1. | ಉದ್ಧರಣ ಚಿಹ್ನೆ | : | |
| 2. | ಪೂರ್ಣ ವಿರಾಮ | ‘ ‘ | |
| 3. | ಭಾವಸೂಚಕ ಚಿಹ್ನೆ | , | |
| 4. | ವಾಕ್ಯವೇಷ್ಟನ ಚಿಹ್ನೆ | “ “ | |
| 5. | ವಿವರಣಾತ್ಮಕ ಚಿಹ್ನೆ | ! | |
| 6. | ಅಲ್ಪ ವಿರಾಮ ಚಿಹ್ನೆ | . | |







@KTBS NOT TO BE REPUBLISHED

ಬೆಂಬಲಿತ ಕಲಿಕೆಯ ಹಂತ – ಚಟುವಟಿಕೆ ಹಾಳೆ 15

# ಲೇಖನ ಚಿಹ್ನೆಗಳು–2

H7P1G5

ಹೆಚ್ಚಿನ ಕಲಿಕೆಗಾಗಿ ಸ್ಕ್ಯಾನ್ ಮಾಡಿ

**ಕಲಿಕಾ ಫಲ :** ವಿಭಿನ್ನ ಉದ್ದೇಶಗಳಿಗಾಗಿ ಬರೆಯುತ್ತಿರುವ ತಮ್ಮ ಬರೆವಣಿಗೆಯಲ್ಲಿ ಲೇಖನ ಚಿಹ್ನೆಗಳು ಉದಾ: ಪೂರ್ಣ ವಿರಾಮ, ಅಲ್ಪವಿರಾಮ, ಪ್ರಶ್ನಾರ್ಥಕ, ಭಾವಸೂಚಕ, ಉದ್ಧರಣ ಚಿಹ್ನೆಗಳನ್ನು ಸೂಕ್ತವಾಗಿ ಬಳಸುವರು.

**ಚಟುವಟಿಕೆ 1 : ಕೊಟ್ಟಿರುವ ವಾಕ್ಯಗಳಲ್ಲಿ ಸೂಕ್ತ ಲೇಖನ ಚಿಹ್ನೆಗಳನ್ನು ಬಳಸಿ, ಬರೆಯಿರಿ.**

**1. ಕುವೆಂಪು ಅವರ ಪೂರ್ಣ ಹೆಸರು ಕುಪ್ಪಳ್ಳಿ ವೆಂಕಟಪ್ಪ ಪುಟ್ಟಪ್ಪ**

ಉತ್ತರ : _____

**2. ಅಯ್ಯೋ ದೇವರೆ ಆ ಮಗುವಿಗೆ ಎಂಥಾ ಕಷ್ಟ ಬಂತಪ್ಪ**

ಉತ್ತರ : _____

**3. ಕರ್ನಾಟಕದಲ್ಲಿ ಹತ್ತಿ, ಭತ್ತ, ಗೋಧಿ, ಕಬ್ಬು, ಜೋಳ, ನವಣೆ ಮುಂತಾದ ಬೆಳೆಗಳನ್ನು ಬೆಳೆಯುತ್ತಾರೆ**

ಉತ್ತರ : _____

**4. ಶಿವರಾಮ ಕಾರಂತರ ಯಾವ ಕೃತಿಗೆ ಜ್ಞಾನಪೀಠ ಪ್ರಶಸ್ತಿ ದೊರಕಿದೆ**

ಉತ್ತರ : _____

**5. ಮಾತು ಬಲ್ಲವನಿಗೆ ಜಗಳವಿಲ್ಲ ಊಟ ಬಲ್ಲವನಿಗೆ ರೋಗವಿಲ್ಲ**

ಉತ್ತರ : _____

**ಚಟುವಟಿಕೆ 2 : ಕೊಟ್ಟಿರುವ ವಾಕ್ಯಗಳಲ್ಲಿ ಬಳಕೆಯಾಗಿರುವ ಲೇಖನ ಚಿಹ್ನೆಗಳನ್ನು ಆರಿಸಿ ಹೆಸರಿಸಿ.**

**1. ದಟ್ಟ ಕಾಡೊಂದರಲ್ಲಿ ಸಿಂಹ, ಹುಲಿ, ಆನೆ, ಜಿಂಕೆ, ನರಿ, ಸಾರಂಗ ಮುಂತಾದ ಪ್ರಾಣಿಗಳು ವಾಸವಾಗಿದ್ದವು.**

| | |
|---|---|
| | |

**2. "ನೀವೇನು ಚರ್ಚೆ ಮಾಡುತ್ತಿದ್ದೀರಿ ಸ್ನೇಹಿತರೇ?" ಎಂದು ಒಂಟೆಯು ಕೇಳಿತು.**

| | |
|---|---|
| | |

@KTBS NOT TO BE REPUBLISHED

3. "ಅಬ್ಬಾ! ನಾನು ಎಚ್ಚರಿಕೆ ವಹಿಸಿದ್ದು ಬಹಳ ಒಳ್ಳೆಯದೇ ಆಯಿತು".

| | |
|---|---|
| | |
| | |

4. ಶಬರಿ ವೃದ್ಧೆ, ಚೀರ ಕೃಷ್ಣಾಜಿನಾಂಬರೆ ; ನೋಡುವುದಕ್ಕೆ ಬುದ್ಧಿಹೀನಳಂತೆ ಕಾಣುತ್ತಾಳೆ.

| | |
|---|---|
| | |
| | |

5. ಕುಮಾರವ್ಯಾಸ ಕವಿಯು 'ರೂಪಕ ಸಾಮ್ರಾಜ್ಯ ಚಕ್ರವರ್ತಿ' ಎಂಬ ಬಿರುದನ್ನು ಹೊಂದಿದ್ದನು.

| | |
|---|---|
| | |
| | |

6. ಕಟ್ಟುವುದು ಕಠಿಣ; ಕೆಡಹುವುದು ಸುಲಭ.

| | |
|---|---|
| | |
| | |

7. ರನ್ನನು 'ಸಾಹಸ ಭೀಮ ವಿಜಯಂ (ಗದಾಯುದ್ಧ)' ಎಂಬ ಮಹಾಕಾವ್ಯವನ್ನು ರಚಿಸಿದ್ದಾನೆ.

| | |
|---|---|
| | |
| | |

8. ಮನುಷ್ಯ ತನ್ನ ಜೀವನದಲ್ಲಿ ಪ್ರೀತಿ, ನಂಬಿಕೆ, ವಿಶ್ವಾಸದಂತಹ ಮೌಲ್ಯಗಳನ್ನು ಬೆಳೆಸಿಕೊಂಡು ಬದುಕಬೇಕು.

| | |
|---|---|
| | |
| | |

@KTBS NOT TO BE REPUBLISHED

ಬೆಂಬಲಿತ ಕಲಿಕೆಯ ಹಂತ – ಚಟುವಟಿಕೆ ಹಾಳೆ 16

# ದ್ವಿರುಕ್ತಿ–ಜೋಡುನುಡಿ

ಹೆಚ್ಚಿನ ಕಲಿಕೆಗಾಗಿ ಸ್ಕ್ಯಾನ್ ಮಾಡಿ

**ಕಲಿಕಾ ಫಲ :** ಭಾಷಾ ವ್ಯಾಕರಣಾಂಶವಾದ ದ್ವಿರುಕ್ತಿ ಜೋಡುನುಡಿಗಳ ಬಗ್ಗೆ ತಿಳಿಯುವರು. ಪದಸಂಪತ್ತನ್ನು ಹೆಚ್ಚಿಸಿಕೊಳ್ಳುವರು.

ದ್ವಿರುಕ್ತಿ : **ಒಂದು ವಿಶೇಷಾರ್ಥವನ್ನು ವ್ಯಕ್ತಪಡಿಸುವುದಕ್ಕಾಗಿ ಒಂದು ಪದವನ್ನೋ, ವಾಕ್ಯವನ್ನೋ ಎರಡೆರಡು ಸಲ ಪ್ರಯೋಗ ಮಾಡುವುದಕ್ಕೆ ದ್ವಿರುಕ್ತಿ ಎನ್ನುವರು.** (ದ್ವಿ ಎಂದರೆ ಎರಡು, ಉಕ್ತಿ ಎಂದರೆ ಮಾತು.)

ಉದಾಹರಣೆ : ಬೇಡಬೇಡ, ಹೋಗುಹೋಗು, ನಿಲ್ಲುನಿಲ್ಲು ಮುಂತಾದವು.

ಅಲ್ಲಿ+ ಅಲ್ಲಿ ಎಂಬ ದ್ವಿರುಕ್ತಿ ಪದವು ಅಲ್ಲಲ್ಲಿ ಎಂದೂ ಸಹ ಆಗುವುದು. ಇಂತಹ ಪದಗಳನ್ನು ವಿಶೇಷ ದ್ವಿರುಕ್ತಿಗಳು ಎಂದು ಕರೆಯುತ್ತಾರೆ.

**ಉದಾಹರಣೆಗೆ : ಕಡೆಗೆ ಕಡೆಗೆ – ಕಡೆಕಡೆಗೆ ಅಥವಾ ಕಟ್ಟಕಡೆಗೆ, ಬಯಲು ಬಯಲು – ಬಟ್ಟಬಯಲು, ನಡುವೆ ನಡುವೆ– ನಡುನಡುವೆ ಅಥವಾ ನಟ್ಟನಡುವೆ ಮುಂತಾದವು.**

ಜೋಡುನುಡಿ : **ಬೇರೆಬೇರೆ ಅರ್ಥವಿರುವ ಪದಗಳನ್ನು ಜೊತೆಯಾಗಿ ಬಳಕೆ ಮಾಡುತ್ತೇವೆ. ಅಂತಹ ಪದಗಳನ್ನು ಜೋಡುನುಡಿ ಎನ್ನುತ್ತೇವೆ.** (ಜೋಡು ಎಂದರೆ ಜೊತೆ, ನುಡಿ ಎಂದರೆ ಪದ.)

**ಉದಾಹರಣೆ : ಹಾಲುಜೇನು, ಸುಖದುಃಖ, ನೋವುನಲಿವು, ಬೆಟ್ಟಗುಡ್ಡ ಮುಂತಾದವು.**

ಕೆಲವೊಮ್ಮೆ ಮೊದಲಿನ ಪದಕ್ಕೆ ಅರ್ಥವಿದ್ದು ಎರಡನೆಯ ಪದಕ್ಕೆ ಯಾವುದೇ ಅರ್ಥವಿರುವುದಿಲ್ಲ. ಅಂತಹ ಪದಗಳನ್ನೂ ಸಹ ಜೋಡುನುಡಿ ಎನ್ನುವರು

**ಉದಾಹರಣೆ : ಮನೆಗಿನೆ, ಆಸ್ತಿಗೀಸ್ತಿ, ಮಕ್ಕಳುಗಿಕ್ಕಳು ಮುಂತಾದವು.**

ಚಟುವಟಿಕೆ 1 : **ಕೊಟ್ಟಿರುವ ಕಥೆಯಲ್ಲಿರುವ ದ್ವಿರುಕ್ತಿ–ಜೋಡುನುಡಿ, ಹೊಸ ಪದಗಳನ್ನು ಆರಿಸಿಬರೆದು, ಹೊಸ ಪದಗಳಿಗೆ ಶಬ್ದಕೋಶದ ಸಹಾಯದಿಂದ ಅರ್ಥವನ್ನು ಹುಡುಕಿ ಬರೆಯಿರಿ.**

## ಒಂದು ಲೋಟ ನೀರಿನ ಕಥೆ

ಕೋಶಲ ಎಂಬ ರಾಜ್ಯ. ಅದನ್ನು ಒಬ್ಬ ರಾಯನು ಆಳುತ್ತಿದ್ದನು. ಒಂದು ದಿನ ಅವನು ದಟ್ಟವಾದ ಕಾನನದಲ್ಲಿ ಬೇಟೆಯಾಡಲು ಹೊರಟನು. ಅವನು ತನ್ನ ಅಶ್ವದಲ್ಲಿ ಕುಳಿತು ಹಳ್ಳ–ಕೊಳ್ಳಗಳನ್ನು ದಾಟಿ ಕಾನನವನ್ನು ತಲುಪಿದನು. ಅಲ್ಲಲ್ಲಿ ಕಾಣುತ್ತಿದ್ದ ನದಿ–ತೊರೆಗಳು ಅವನನ್ನು ಆಕರ್ಷಿಸಿದವು. ಅಲ್ಲಿ ಒಂದೊಂದು ಮರಗಳೂ ಸಹ ಹಚ್ಚಹಸುರಿನಿಂದ ಕಂಗೊಳಿಸುತ್ತಿದ್ದವು. ಆ ಸಮಯದಲ್ಲಿ ಹುಲಿಯೊಂದು ರಾಯನನ್ನು ತಿನ್ನಲು ಘರ್ಜಿಸುತ್ತಾ ನೆಗೆಯಿತು. ಆಗ ರಾಯನು ಬಿಲ್ಲು–ಬಾಣಗಳನ್ನು ಹುಡುಕಲು ಅವು ಆ ಸಮಯದಲ್ಲಿ ನೆಲಕ್ಕೆ ಬಿದ್ದಿದ್ದವು. ಹುಲಿಯಿಂದ ತಪ್ಪಿಸಿಕೊಂಡ ರಾಯನು ತನ್ನ ಪ್ರಾಣವನ್ನು ಉಳಿಸಿಕೊಳ್ಳಲು ಕಾಡಿನ ಸಿಕ್ಕಸಿಕ್ಕ ದಾರಿಯಲ್ಲಿ ಸಾಗಿದನು.

ಹೀಗೆ ರಾಯನು ದಾರಿತಪ್ಪಿ ಒಂದು ಮರಳುಗಾಡಿನ ಬಳಿ ಬಂದನು. ದಾರಿ ಕಾಣದೆ ಕುಡಿಯಲು ನೀರೂ ಇಲ್ಲದೆ ಬಾಯಾರಿಕೆಯಿಂದ ಬಳಲಿ ಸುಸ್ತಾಗಿ ಮಲಗಿಬಿಟ್ಟನು. ಅಲ್ಲಿ ಯಾವುದೇ ಜನರಾಗಲೀ, ಮನೆಗಳಾಗಲೀ ಕಾಣುತ್ತಿರಲಿಲ್ಲ. ಸತ್ತು ಹೋಗುವಷ್ಟು ಬಾಯಾರಿಕೆಯಾಗಿತ್ತು. ಆ ಸಮಯದಲ್ಲಿ ಅಲ್ಲೊಬ್ಬ ದಾರಿಹೋಕನು ನೀರಿನ ಮಡಕೆಯನ್ನು ಹೊತ್ತುಕೊಂಡು ಹೋಗುತ್ತಿದ್ದನು. ಅವನನ್ನು ಕಂಡ ರಾಯನು ಹತ್ತಿರ ಕರೆದು ನೀರನ್ನು ಕೊಡಬೇಕೆಂದು

NOT TO BE @KTBS REPUBLISHED

ಆದೇಶಿಸಿದನು. ರಾಯನ ಅಹಂಕಾರವನ್ನು ಕಂಡ ದಾರಿಹೋಕನು ರಾಯನಿಗೆ ಬುದ್ಧಿ ಕಲಿಸಬೇಕೆಂದು ಯೋಚಿಸಿ ಒಂದು ಲೋಟ ನೀರಿಗೆ ರಾಜನು ಧರಿಸಿದ್ದ ಆಭರಣಗಳನ್ನೆಲ್ಲಾ ಕೊಡಬೇಕೆಂದು ಕೇಳಿದನು. ಅದಕ್ಕೆ ರಾಯನು ಒಪ್ಪಲಿಲ್ಲ.

ದಾರಿಹೋಕನು ನೀರು ಕೊಡದೆ ಹೊರಟನು. ರಾಯನು ತನ್ನ ಜೀವ ಉಳಿದರೆ ಸಾಕೆಂದು ಆತನನು ಕೂಗಿ ಕರೆದು ಆಭರಣಗಳನ್ನು ಕೊಡಲು ಒಪ್ಪಿದನು. ಈಗ ದಾರಿಹೋಕನು ಒಂದು ಲೋಟ ನೀರಿಗೆ ರಾಯನ ಅರ್ಧ ರಾಜ್ಯವನ್ನು ಕೇಳಿದನು. ಇದು ಅತಿಯಾಯಿತು ಎಂದು ರಾಯನು ಬೈದು ಬೇಡಬೇಡ ಹೋಗು ಎಂದು ಕಳುಹಿಸಿದನು. ದಾರಿಹೋಕನು ಸರಿ ಎಂದು ಹೊರಟನು.

ರಾಯನಿಗೆ ತುಂಬಾ ಬಾಯಾರಿಕೆಯಾಗಿ ದಾಹವನ್ನು ತಡೆಯಲಾಗದೆ ದಾರಿಹೋಕನನ್ನು ಕರೆದು ಅರ್ಧ ರಾಜ್ಯವನ್ನು ಕೊಡುವೆನೆಂದು ತಿಳಿಸಿ ನೀರು ಕೇಳಿದನು. ಈಗ ದಾರಿಹೋಕನು ಒಂದು ಲೋಟ ನೀರಿಗೆ ಪೂರ್ತಿ ರಾಜ್ಯವನ್ನೇ ಕೇಳಿದನು. ಕೋಪಗೊಂಡ ರಾಜನು ಸತ್ತರೂ ಸರಿ ಒಂದೇಒಂದು ಲೋಟ ನೀರಿಗೆ ರಾಜ್ಯವನ್ನು ಕೊಡುವುದಿಲ್ಲ ಎಂದು ಕಳುಹಿಸಿಬಿಟ್ಟನು. ದಾರಿಹೋಕನು ಮಡಕೆಯ ನೀರನ್ನು ಹೊತ್ತುಕೊಂಡು ಹೊರಟನು. ಸ್ವಲ್ಪ ದೂರ ಹೋದ ನಂತರ ರಾಯನು ಸಾಯುವ ಸ್ಥಿತಿ ತಲುಪಿದನು. ತಾನು ಬದುಕಿದರೆ ಸಾಕೆಂದು ಆ ದಾರಿಹೋಕನನು ಮತ್ತೆಮತ್ತೆ ಕೂಗಿ ಕರೆದು ಒಂದು ಲೋಟ ನೀರಿಗೆ ತನ್ನ ರಾಜ್ಯವನ್ನು ಕೊಡುವೆನೆಂದು ಮಾತು ಕೊಟ್ಟು ಒಂದು ಲೋಟ ನೀರನ್ನು ಕುಡಿದನು. ಆ ನೀರು ಅವನ ಜೀವವನ್ನು ಉಳಿಸಿತು.

ಆನಂತರ ದಾರಿಹೋಕನನ್ನು ತನ್ನ ತುರಗದಲ್ಲಿ ಕೂರಿಸಿಕೊಂಡು ತನ್ನ ರಾಜ್ಯಕ್ಕೆ ಹಿಂದಿರುಗಿ ಬಂದು ನಡೆದ ಘಟನೆಯನ್ನು ತಿಳಿಸಿ ತನ್ನ ಇಡೀ ರಾಜ್ಯ ಒಂದು ಲೋಟ ನೀರಿಗೆ ಸಮ ಎಂದು ಹೇಳಿ ದಾರಿಹೋಕನಿಗೆ ರಾಜ್ಯವನ್ನು ನೀಡಲು ಮುಂದಾದನು. ಆಗ ದಾರಿಹೋಕನು ರಾಜನ ರಾಜ್ಯವನ್ನು ನಿರಾಕರಿಸಿ ತಾನು ರಾಜನ ಅಹಂಕಾರವನ್ನು ಅಳಿಸಲು ಹಾಗೂ ನೀರಿನ ಬೆಲೆಯನ್ನು ತಿಳಿಸಲು ಹೀಗೆ ಮಾಡಿದೆ ಎಂದು ಹೇಳಿ ರಾಯನಿಗೆ ಕೈಮುಗಿದನು. ಆಗ ರಾಯನಿಗೆ ಒಂದು ಲೋಟ ನೀರು ಎಷ್ಟು ಅಮೂಲ್ಯ ಎಂದು ಅರಿವಾಯಿತು. ದಾರಿಹೋಕನನ್ನು ಸನ್ಮಾನಿಸಿ, ನೂರು ಹೊನ್ನಿನ ನಾಣ್ಯಗಳನ್ನು ಕೊಡುಗೆಯಾಗಿ ನೀಡಿ ಕಳುಹಿಸಿಕೊಟ್ಟನು. ಅಂದಿನಿಂದ ರಾಯನು ತನ್ನ ರಾಜ್ಯದಲ್ಲಿ ಅಂತರ್ಜಲವನ್ನು ಹೆಚ್ಚಿಸಲು ಹಲವು ಯೋಜನೆಗಳನ್ನು ರೂಪಿಸಿ, ಅವುಗಳನ್ನು ಜಾರಿಗೆ ತಂದನು ಹಾಗೂ ನೀರಿನ ಮಹತ್ವವನ್ನು ತನ್ನ ಪ್ರಜೆಗಳು ಅರಿಯುವಂತೆ ಮಾಡಿದನು.

"ನೀರು ಅತ್ಯಮೂಲ್ಯವಾದದ್ದು. ಅದನ್ನು ಮಿತವಾಗಿ ಬಳಸಬೇಕು."



| ದ್ವಿರುಕ್ತಿ ಪದಗಳು | ಜೋಡುನುಡಿ ಪದಗಳು | ಹೊಸ ಪದಗಳು ಮತ್ತು ಅರ್ಥ |
|---|---|---|
| | | |
| | | |
| | | |
| | | |
| | | |

© DTEBS NOT TO BE REPUBLISHED

ಬೆಂಬಲಿತ ಕಲಿಕೆಯ ಹಂತ – ಚಟುವಟಿಕೆ ಹಾಳೆ 17

# ಅರ್ಥವ್ಯತ್ಯಾಸ–ಧ್ವನಿಸಾಮ್ಯತೆ–1

L1M2N4

ಹೆಚ್ಚಿನ ಕಲಿಕೆಗಾಗಿ ಸ್ಕ್ಯಾನ್ ಮಾಡಿ

**ಕಲಿಕಾ ಫಲ :** ಪದಗಳು, ಅಕ್ಷರಗಳ ಧ್ವನಿಸಾಮ್ಯತೆ, ವ್ಯತ್ಯಾಸ ಗಮನಿಸಿ ಓದುವರು. ಸರಳ ವಾಕ್ಯಗಳ ರಚನೆ ಕಲಿತು, ವಾಕ್ಯ ರಚಿಸುವರು.

**ಚಟುವಟಿಕೆ 1 : ಕೊಟ್ಟಿರುವ ಪದಗಳ ಧ್ವನಿಸಾಮ್ಯತೆ ಹಾಗೂ ಅರ್ಥವ್ಯತ್ಯಾಸಗಳನ್ನು ತಿಳಿದು ಮಾದರಿಯಂತೆ ಸರಳವಾದ ವಾಕ್ಯಗಳನ್ನು ರಚಿಸಿರಿ.**

| ಕ್ರ.ಸಂ | ಪದಗಳು | ಅರ್ಥ | ವಾಕ್ಯ |
|---|---|---|---|
| ಮಾದರಿ | ದನ | ಪ್ರಾಣಿ | ಗದ್ದೆಯ ಬಯಲಿನಲ್ಲಿ ದನಗಳು ಮೇಯುತ್ತಿದ್ದವು. |
| | ಧನ | ಹಣ | ಮನುಷ್ಯ ಧನವಂತನಾಗುವುದಕ್ಕಿಂತ ಗುಣವಂತನಾಗಬೇಕು. |
| 1 | ಒಲೆ | | |
| | ಓಲೆ | | |
| 2 | ಅಂದ | | |
| | ಅಂಧ | | |
| 3 | ಶರ | | |
| | ಸರ | | |
| 4 | ಮರಳು | | |
| | ಮರುಳು | | |
| 5 | ಪ್ರದಾನ | | |
| | ಪ್ರಧಾನ | | |
| 6 | ಅಕ್ಕಿ | | |
| | ಹಕ್ಕಿ | | |
| 7 | ಹುಲಿ | | |
| | ಉಲಿ | | |

@KTBS NOT TO BE REPUBLISHED

| | | | |
|---|---|---|---|
| 8 | ಮದ್ಯ | | |
| | ಮಧ್ಯೆ | | |
| 9 | ಪಲ | | |
| | ಫಲ | | |
| 10 | ನೆರಳು | | |
| | ನೆರಳು | | |
| 11 | ಮಣ | | |
| | ಮನ | | |
| 12 | ಅಸು | | |
| | ಹಸು | | |

@KTBS NOT TO BE REPUBLISHED



ಬೆಂಬಲಿತ ಕಲಿಕೆಯ ಹಂತ – ಚಟುವಟಿಕೆ ಹಾಳೆ 18

# ಅರ್ಥವ್ಯತ್ಯಾಸ–ಧ್ವನಿಸಾಮ್ಯತೆ–2

ಹೆಚ್ಚಿನ ಕಲಿಕೆಗಾಗಿ ಸ್ಕ್ಯಾನ್ ಮಾಡಿ

**ಕಲಿಕಾ ಫಲ :** ಪದಗಳು, ಅಕ್ಷರಗಳ ಧ್ವನಿಸಾಮ್ಯತೆ, ವ್ಯತ್ಯಾಸ ಗಮನಿಸಿ ಓದುವರು. ಸರಳ ವಾಕ್ಯಗಳ ರಚನೆ ಕಲಿತು, ವಾಕ್ಯ ರಚಿಸುವರು.

**ಚಟುವಟಿಕೆ 1 : ಕೊಟ್ಟಿರುವ ಪದಗಳಲ್ಲಿ ಧ್ವನಿವ್ಯತ್ಯಾಸ ಹಾಗೂ ಅರ್ಥವ್ಯತ್ಯಾಸಗಳನ್ನು ಗುರುತಿಸಿ ಮಾದರಿಯಂತೆ ನಾಮಪದ ಮತ್ತು ಕ್ರಿಯಾಪದಗಳಾಗಿ ಪ್ರಯೋಗಿಸಿ ವಾಕ್ಯರಚಿಸಿರಿ.**

| ಪದಗಳು | ವಾಕ್ಯಗಳು |
|---|---|
| ಮಾದರಿ: ಹೊಳೆ | ನಾಮಪದ :– ಪರಿಸರ ಸಮತೋಲನದಲ್ಲಿ ಹೊಳೆಗಳ ಪಾತ್ರ ಮಹತ್ವದ್ದಾಗಿದೆ. |
| | ಕ್ರಿಯಾಪದ :– ಮದುಮಗಳು ತೊಟ್ಟಿರುವ ವಜ್ರದ ಉಂಗುರವು ಫಳಫಳ ಎಂದು ಹೊಳೆಯುತ್ತಿದೆ. |
| ಕರ | ನಾಮಪದ :– |
| | ಕ್ರಿಯಾಪದ :– |
| ತಂದೆ | ನಾಮಪದ :– |
| | ಕ್ರಿಯಾಪದ :– |
| ಕಾಡು | ನಾಮಪದ :– |
| | ಕ್ರಿಯಾಪದ :– |
| ಕುಡಿ | ನಾಮಪದ :– |
| | ಕ್ರಿಯಾಪದ :– |
| ಹಾಡು | ನಾಮಪದ :– |
| | ಕ್ರಿಯಾಪದ :– |
| ಹರಿ | ನಾಮಪದ :– |
| | ಕ್ರಿಯಾಪದ :– |
| ಮಡಿ | ನಾಮಪದ :– |
| | ಕ್ರಿಯಾಪದ :– |
| ನುಡಿ | ನಾಮಪದ :– |
| | ಕ್ರಿಯಾಪದ :– |
| ಬರೆ | ನಾಮಪದ :– |
| | ಕ್ರಿಯಾಪದ :– |
| ತಾಳಿ | ನಾಮಪದ :– |
| | ಕ್ರಿಯಾಪದ :– |

@KTBS NOT TO BE REPUBLISHED

# ತತ್ಸಮ – ತದ್ಭವ

ಹೆಚ್ಚಿನ ಕಲಿಕೆಗಾಗಿ ಸ್ಕ್ಯಾನ್ ಮಾಡಿ

**ಕಲಿಕಾ ಫಲ :** ಭಾಷಾ ವ್ಯಾಕರಣಾಂಶವಾದ ತತ್ಸಮ ತದ್ಭವಗಳ ಬಗ್ಗೆ ತಿಳಿಯುವರು. ಪದಸಂಪತ್ತನ್ನು ಹೆಚ್ಚಿಸಿಕೊಳ್ಳುವರು.

* **ತತ್ಸಮ : ತತ್+ಸಮ. 'ತತ್' ಎಂದರೆ ಮೂಲಕ್ಕೆ ಸಮವಾದದ್ದು ಎಂದರ್ಥ.** ಕನ್ನಡ ಭಾಷೆಯಲ್ಲಿ ಸೇರಿ ಹೋಗಿರುವ ಸಂಸ್ಕೃತ ಪದಗಳು, ಸಂಸ್ಕೃತದಿಂದ ಕನ್ನಡಕ್ಕೆ ಬರುವಾಗ ಬದಲಾವಣೆ ಹೊಂದದೆ ಕನ್ನಡ ಭಾಷೆಯಲ್ಲಿ ಬಳಸಲ್ಪಡುವ ಪದಗಳನ್ನು ತತ್ಸಮಗಳು ಎನ್ನುವರು.
**ಉದಾ: ವಸಂತ, ಚಂದ್ರ, ಕಾವ್ಯ, ಪುಸ್ತಕ ಇತ್ಯಾದಿ.**

* **ತದ್ಭವ : ತತ್+ಭವ. ಸಂಸ್ಕೃತ ಅಥವಾ ಪ್ರಾಕೃತದಿಂದ ಹುಟ್ಟಿದ ಅಪಭ್ರಂಶ ಶಬ್ದ.** ಸಂಸ್ಕೃತದಿಂದ ಕನ್ನಡಕ್ಕೆ ಬರುವಾಗ ಬದಲಾವಣೆ ಹೊಂದಿ ಪ್ರಯೋಗವಾಗುವ ಪದಗಳು. ಸಂಸ್ಕೃತದಿಂದ ಕನ್ನಡಕ್ಕೆ ಬರುವಾಗ ಅಲ್ಪ ಸ್ವಲ್ಪ ಬದಲಾವಣೆಯನ್ನಾಗಲೀ, ಪೂರ್ಣ ಬದಲಾವಣೆಯನ್ನಾಗಲೀ, ಹೊಂದಿ ಬಂದಿರುವ ಪದಗಳನ್ನು ತದ್ಭವಗಳು ಎನ್ನುವರು.
**ಉದಾ: ಕಾವ್ಯ >ಕಬ್ಬ, ರಾಜ >ರಾಯ, ವೈಶಾಖ >ಬೇಸಗೆ**

**ತತ್ಸಮ ಪದಗಳು ತದ್ಭವ ಪದಗಳಾಗಿ ಪ್ರಯೋಗವಾಗುವಾಗ ಪ್ರಮುಖವಾಗಿ ಎರಡು ರೀತಿಯ ಪದಗಳನ್ನು ಗಮನಿಸಬಹುದು.**

**1. ಅಲ್ಪ ಪ್ರಮಾಣದಲ್ಲಿ ಬದಲಾಗುವ ಪದಗಳು**
**2. ಪೂರ್ಣ ಪ್ರಮಾಣದಲ್ಲಿ ಬದಲಾಗುವ ಪದಗಳು**

@KTBS NOT TO BE REPUBLISHED

**ಅಲ್ಪಪ್ರಮಾಣದಲ್ಲಿ ಬದಲಾಗುವ ಪದಗಳು:–**

**'ಶ', 'ಷ', ಅಕ್ಷರಗಳು 'ಸ' ಅಕ್ಷರವಾಗಿ ಬದಲಾವಣೆ ಹೊಂದುತ್ತವೆ.**

* ಸಂತೋಷ > ಸಂತಸ
* ಅಂಕುಶ > ಅಂಕುಸ
* ಆಕಾಶ > ಆಗಸ

**'ಆ' ಕಾರದಿಂದ ಅಂತ್ಯವಾಗುವ ಪದಗಳು 'ಎ' ಕಾರವಾಗಿ ಬದಲಾವಣೆ ಹೊಂದುತ್ತವೆ.**

* ಸೀತಾ > ಸೀತೆ
* ಮಾಲಾ > ಮಾಲೆ

**'ಯ' ಅಕ್ಷರಗಳು 'ಜ' ಅಕ್ಷರಗಳಾಗಿ ಬದಲಾವಣೆ ಹೊಂದುತ್ತವೆ.**

* ಯುದ್ಧ > ಜುದ್ಧ
* ಯೋಗಿ > ಜೋಗಿ
* ಯೋಧ > ಜೋಧ

**'ವ' ಅಕ್ಷರಗಳು 'ಬ' ಅಕ್ಷರಗಳಾಗಿ ಬದಲಾವಣೆ ಹೊಂದುತ್ತವೆ.**

* ವನ > ಬನ
* ವೀರ > ಬೀರ
* ವೀದಿ > ಬೀದಿ



**'ಪ' ಅಕ್ಷರಗಳು 'ಹ' ಅಕ್ಷರಗಳಾಗಿ ಬದಲಾವಣೆ ಹೊಂದುತ್ತವೆ.**

* ಪಕ್ಷಿ > ಹಕ್ಕಿ
* ಹಲ್ಲಿ > ಪಲ್ಲಿ

**2. ಪೂರ್ಣ ಪ್ರಮಾಣದಲ್ಲಿ ಬದಲಾಗುವ ಪದಗಳು**

* ಮುಖ > ಮೊಗ
* ಸಂಸ್ಕೃತ > ಸಕ್ಕದ

**ಚಟುವಟಿಕೆ 1 : ಮಾದರಿಯಂತೆ 'ಇ' ಪಟ್ಟಿಯಲ್ಲಿರುವ ತದ್ಭವ ಪದಗಳನ್ನು 'ಅ' ಪಟ್ಟಿಯಲ್ಲಿರುವ ತತ್ಸಮ ಪದಗಳಿಗೆ ಸರಿ ಹೊಂದುವಂತೆ 'ಆ' ಪಟ್ಟಿಯಲ್ಲಿ ಬರೆಯಿರಿ.**

| | ' 'ಅ' ಪಟ್ಟಿ | 'ಆ' ಪಟ್ಟಿ | ಇ' ಪಟ್ಟಿ |
|---|---|---|---|
| ಮಾದರಿ | ದೃಷ್ಟಿ | ದಿಟ್ಟಿ | ಮಾಣಿಕ |
| 1. | ಮುಕ್ತಿ | | ನಿದ್ದೆ |
| 2. | ಹೃದಯ | | ದಿಟ್ಟಿ |
| 3. | ಪಕ್ಷಿ | | ಬಿನದ |
| 4. | ಮಾಣಿಕ್ಯ | | ಕೋಗಿಲೆ |
| 5. | ಆಶೆ | | ಬಸವ |
| 6. | ನಿದ್ರೆ | | ಕಜ್ಜ |
| 7. | ಬಸದೀ | | ಭಿನ್ನಾಣ |
| 8. | ದನಿ | | ಹರಣ |
| 9. | ವೈಶಾಖ | | ಹೂನ್ಯ |
| 10. | ಕಾರ್ಯ | | ರಾಯ |
| 11. | ವೃಷಭ | | ಶಕುತಿ |
| 12. | ವಿಜ್ಞಾನ | | ವರುಷ |
| 13. | ವರ್ಷ | | ಆಸೆ |
| 14. | ಪ್ರಾಣ | | ಬಸದಿ |
| 15. | ಶಕ್ತಿ | | ದನಿ |
| 16. | ಪುಣ್ಯ | | ಹಬ್ಬ |
| 17. | ರಾಜ | | ಮುಕುತಿ |
| 18. | ಪರ್ವ | | ಬೇಸಗೆ |
| 19. | ಕೋಕಿಲಾ | | ಹಕ್ಕಿ |
| 20. | ವಿನೋದ | | ಎದೆ |

@KTBS NOT TO BE REPUBLISHED

**ಚಟುವಟಿಕೆ 2. ಕೋಷ್ಟಕ 1ರಲ್ಲಿರುವ ತತ್ಸಮ ಪದಗಳಿಗೆ ಕೋಷ್ಟಕ 2 ರಲ್ಲಿ ನೀಡಲಾಗಿರುವ ಪದಚೌಕದಲ್ಲಿ ತದ್ಭವ ಪದ ಹುಡುಕಿ ಖಾಲಿ ಜಾಗದಲ್ಲಿ ಬರೆಯಿರಿ.**

| ಕೋಷ್ಟಕ 1 | | | |
|---|---|---|---|
| | ತತ್ಸಮ | > | ತದ್ಭವ |
| 1. | ಶ್ರೀ | > | |
| 2. | ಸೀರೆ | > | |
| 3. | ಶಿರ | > | |
| 4. | ಶಾಲಾ | > | |
| 5. | ತಪಸ್ವಿ | > | |
| 6. | ಮಾಲಾ | > | |
| 7. | ಯಂತ್ರ | > | |
| 8. | ಕವಿ | > | |

| ಕೋಷ್ಟಕ 2 | | | |
|---|---|---|---|
| ಜಂ | ತ್ರ | ಮಾ | ಸಿ |
| ಕ | ಶಾ | ಲೆ | ರಿ |
| ಬ್ಬಿ | ತ | ವ | ಸಿ |
| ಗ | ಣ | ಚೀ | ರ |

@KTBS NOT TO BE REPUBLISHED

ಬೆಂಬಲಿತ ಕಲಿಕೆಯ ಹಂತ – ಚಟುವಟಿಕೆ ಹಾಳೆ 20

# ಗಾದೆಗಳು

S7X8U7

ಹೆಚ್ಚಿನ ಕಲಿಕೆಗಾಗಿ ಸ್ಕ್ಯಾನ್ ಮಾಡಿ

**ಕಲಿಕಾ ಫಲ :** ಜನಬಳಕೆಯ ಗಾದೆಗಳು ಹಾಗೂ ವಿದ್ಯಾರ್ಥಿಗಳ ಪರಿಸರದಲ್ಲಿ ಬಳಕೆಯಲ್ಲಿರುವ ಗಾದೆಗಳು ಹಾಗೂ ಅವುಗಳ ಮಹತ್ತ್ವವನ್ನು ಅರಿಯುವರು.

**ಚಟುವಟಿಕೆ 1 : ಗುಂಪಿನಲ್ಲಿ ನೀವು ನಿಮ್ಮ ಮನೆಗಳಲ್ಲಿ ಹಾಗೂ ನಿಮ್ಮ ಸುತ್ತಮುತ್ತಲಿನ ಪರಿಸರದಲ್ಲಿ ಬಳಸುವ ಗಾದೆಗಳನ್ನು ಗುಂಪಿನಲ್ಲಿ ಚರ್ಚಿಸಿ, ಪಟ್ಟಿಮಾಡಿ, ಬರೆಯಿರಿ.**

**ಕ್ರ. ಸಂ ಗುಂಪಿನಲ್ಲಿ ಸಂಗ್ರಹಿಸಿದ ಗಾದೆಗಳು.**

1 _____

2 _____

3 _____

4 _____

5 _____

6 _____

7 _____

8 _____

9 _____

10 _____

@KTBS NOT TO BE REPUBLISHED

**ಚಟುವಟಿಕೆ 2 : ಕೊಟ್ಟಿರುವ ಗಾದೆಗಳನ್ನು ಪೂರ್ಣಗೊಳಿಸಿ ಬರೆಯಿರಿ.**

1. ಬೆಳ್ಳಗಿರುವುದೆಲ್ಲಾ _____

2. ಗಿಡವಾಗಿ ಬಗ್ಗದ್ದು _____

3. ಎತ್ತು ಏರಿಗ್ ಎಳುದ್ರೆ ಕೋಣ _____

4. ಉಪ್ಪಿಗಿಂತ ರುಚಿಯಿಲ್ಲ : _____

5. ಹೆತ್ತತಾಯಿ ಹೊತ್ತನಾಡು _____

6. _____ ಆನೆ ಕೊಟ್ಟರೂ ಬಾರದು.

7. _____ ದೊಣ್ಣೆಗೆ ನಿಮಿಷ.

8. _____ ಗತಿಗೇಡು

9. _____ ಕಾಲು ಚಾಚು

10. _____ ಮೌನ ಬಂಣಾರ

**ಚಟುವಟಿಕೆ 3 : ಗಾದೆಗಳನ್ನು ವಿಸ್ತರಿಸಿ ಬರೆಯುವ ವಿಧಾನವನ್ನು ಪ್ರಶ್ನೆಗಳಿಗೆ ಉತ್ತರಿಸುತ್ತಾ ತಿಳಿಯಿರಿ..**

1. ನಾವು ಆಡುವ ಮಾತು ಹೇಗಿರಬೇಕು?

2. ನಾವು ಕೆಲಸ ಮಾಡಿದರೆ ಏನಾಗುತ್ತದೆ? ಕೆಲಸ ಮಾಡದೆ ಸುಮ್ಮನಿದ್ದರೆ ಏನಾಗುತ್ತದೆ?

3. ನಮ್ಮ ಗುಣ–ನಡೆತೆ ಹೇಗಿರಬೇಕು?

4. ತುಂಬಾ ಆಸೆ ಪಟ್ಟರೆ ಏನಾಗುತ್ತದೆ? ಆಸೆ ಮಿತವಾಗಿದ್ದರೆ ಏನಾಗುತ್ತದೆ?

**ಚಟುವಟಿಕೆ 4 : ಚಟುವಟಿಕೆ 1ರಲ್ಲಿ ನೀವು ಸಂಗ್ರಹಿಸಿದ ಯಾವುದಾದರೂ ಮೂರು ಗಾದೆಗಳನ್ನು ಅದರ ಮಹತ್ವದೊಂದಿಗೆ ಮಾದರಿಯಂತೆ ವಿಸ್ತರಿಸಿ ಬರೆಯಿರಿ.**

ಮಾದರಿ : **"ಸತ್ಯಕ್ಕೆ ಸಾವಿಲ್ಲ: ಸುಳ್ಳಿಗೆ ಸುಖವಿಲ್ಲ"**

ಗಾದೆಗಳು ಹಿರಿಯರ ಅನುಭವದ ನುಡಿಮುತ್ತುಗಳು. ಗಾದೆಗಳು ಆಕಾರದಲ್ಲಿ ವಾಮನನಾದರೂ ಅರ್ಥದಲ್ಲಿ ತ್ರಿವಿಕ್ರಮನಾಗಿವೆ. ವೇದ ಸುಳ್ಳಾದರೂ ಗಾದೆ ಸುಳ್ಳಾಗದು ಎಂಬ ಮಾತೇ ಗಾದೆಯ ಮಹತ್ವವನ್ನು ತಿಳಿಸುತ್ತದೆ. ಅಂತಹ ಕನ್ನಡದ ಹೆಸರಾಂತ ಗಾದೆಗಳಲ್ಲಿ 'ಸತ್ಯಕ್ಕೆ ಸಾವಿಲ್ಲ: ಸುಳ್ಳಿಗೆ ಸುಖವಿಲ್ಲ' ಎಂಬುದೂ ಒಂದಾಗಿದೆ.

ನಾವು ಯಾವಾಗಲೂ ಸತ್ಯವನ್ನೇ ಹೇಳಬೇಕು. ಸುಳ್ಳನ್ನು ಹೇಳಬಾರದು. ಏಕೆಂದರೆ ಸತ್ಯವನ್ನು ಹೇಳಿದರೆ ಯಾವುದೇ ಭಯಪಡುವ ಅವಶ್ಯಕತೆ ಇರುವುದಿಲ್ಲ ಹಾಗೂ ಅದರಿಂದ ಒಳ್ಳೆಯದೇ ಆಗುತ್ತದೆ. ಎಲ್ಲರೂ ನಮ್ಮನ್ನು ನಂಬುತ್ತಾರೆ. ಆದರೆ ಸುಳ್ಳನ್ನು ಹೇಳಿದರೆ ಆ ಕ್ಷಣದಲ್ಲಿ ಖುಷಿ ಆಗಬಹುದು, ನಮ್ಮ ಕೆಲಸ ನಡೆಯಬಹುದು, ನಮ್ಮನ್ನು ಎಲ್ಲರೂ ನಂಬಬಹುದು. ಆದರೆ ಅದು ಸುಳ್ಳು ಎಂದು ತಿಳಿದ ತಕ್ಷಣ ಎಲ್ಲರೂ ನಮ್ಮನ್ನು ನಂಬುವುದಿಲ್ಲ. ಅನಾಹುತಗಳೂ ಸಂಭವಿಸಬಹುದು.

ಸತ್ಯವನ್ನೇ ಆಡಿದ ಸತ್ಯ ಹರಿಶ್ಚಂದ್ರನನ್ನು ಇಂದಿಗೂ ಎಲ್ಲರೂ ನೆನೆಯುತ್ತೇವೆ. ಸತ್ಯದ ಮಹತ್ವವನ್ನು ಸಾರುವ ಪುಣ್ಯಕೋಟಿಯ ಕಥೆ ಇಂದಿಗೂ ನಮ್ಮ ಮನಸ್ಸಿನಲ್ಲಿ ಅಚ್ಚಳಿಯದೆ ಉಳಿದಿದೆ. ಎಷ್ಟೇ ಕಷ್ಟವಾದರೂ ನಾವು ಸತ್ಯವನ್ನೇ ಹೇಳಬೇಕು. ಏಕೆಂದರೆ ಅದಕ್ಕೆ ಸಾವಿಲ್ಲ. ಸುಳ್ಳನ್ನು ಹೇಳಿದರೆ ಖಂಡಿತ ಸುಖ ದೊರೆಯುವುದಿಲ್ಲ ಎಂಬುದು ಈ ಮೇಲಿನ ಗಾದೆಯಲ್ಲಿ ಅರ್ಥಪೂರ್ಣವಾಗಿ ಅಡಕವಾಗಿದೆ.

**ಗಾದೆಗಳನ್ನು ಸಂದರ್ಭೋಚಿತವಾಗಿ ಬಳಸಿ.**

@KTBS NOT TO BE REPUBLISHED

@KTBS
NOT TO BE REPUBLISHED

ಬೆಂಬಲಿತ ಕಲಿಕೆಯ ಹಂತ – ಚಟುವಟಿಕೆ ಹಾಳೆ 21

# ಪತ್ರಲೇಖನ–1

C4Y3A5

ಹೆಚ್ಚಿನ ಕಲಿಕೆಗಾಗಿ ಸ್ಕ್ಯಾನ್ ಮಾಡಿ

**ಕಲಿಕಾ ಫಲ :** ಪತ್ರದ ರಚನೆ ಮತ್ತು ವಿಷಯವನ್ನು ಸ್ಪಷ್ಟವಾಗಿ ವಿನ್ಯಾಸಗೊಳಿಸುವ ಸಾಮರ್ಥ್ಯವನ್ನು ಅಭಿವೃದ್ಧಿಪಡಿಸುವರು.

ಪತ್ರವು ಸಾಮಾನ್ಯ ಕಾಳಜಿಯ ನಿರ್ದಿಷ್ಟ ವಿಷಯಕ್ಕೆ ಸಂಬಂಧಿಸಿದಂತೆ ಒಬ್ಬ ವ್ಯಕ್ತಿಯು ಮತ್ತೊಬ್ಬ ವ್ಯಕ್ತಿಗೆ ಬರೆದ ಸಂದೇಶವಾಗಿರುತ್ತದೆ.

ಎರಡು ರೀತಿಯ ಪತ್ರ ಲೇಖನಗಳನ್ನು ಕಾಣಬಹುದು

1. ವ್ಯಾವಹಾರಿಕ ಪತ್ರ ಲೇಖನ.
2. ಖಾಸಗಿ/ಕೌಟುಂಬಿಕ/ವೈಯಕ್ತಿಕ ಪತ್ರ ಲೇಖನ.

## ವ್ಯಾವಹಾರಿಕ ಪತ್ರ

**ವ್ಯಾವಹಾರಿಕ ಪತ್ರ ಲೇಖನ :– ಒಂದು ವಿಷಯಕ್ಕೆ ಸಂಬಂಧಿಸಿದಂತೆ ನಿರ್ದಿಷ್ಟ ಅಧಿಕಾರಿಗೆ, ಆಡಳಿತದ ವಿಷಯ, ಜಾಹಿರಾತು, ಪ್ರಕಟಣೆ ಹಾಗೂ ಇತರೆ ವಿಷಯಗಳಿಗೆ ಸಂಬಂಧಿಸಿದಂತೆ ಬರೆಯುವ ಮನವಿ**

@KTBS NOT TO BE REPUBLISHED

**ಚಟುವಟಿಕೆ 1 : 'ಅ' ಪಟ್ಟಿಯಲ್ಲಿರುವ ಪದನಾಮಕ್ಕೆ 'ಇ' ಪಟ್ಟಿಯಲ್ಲಿರುವ ವಿಳಾಸವನ್ನು ಸರಿ ಹೊಂದುವಂತೆ 'ಆ' ಪಟ್ಟಿಯಲ್ಲಿ ಬರೆಯಿರಿ.**

| 'ಅ' ಪಟ್ಟಿ | 'ಆ' ಪಟ್ಟಿ | 'ಇ' ಪಟ್ಟಿ |
|---|---|---|
| 1. ವ್ಯವಸ್ಥಾಪಕರು | | ಜಿಲ್ಲಾಧಿಕಾರಿಗಳ ಕಛೇರಿ, ಮಂಡ್ಯ |
| 2. ಮುಖ್ಯ ಶಿಕ್ಷಕರು | | ಜನದನಿ ದಿನಪತ್ರಿಕೆ, ಶಿವಮೊಗ್ಗ |
| 3. ಅಧ್ಯಕ್ಷರು | | ಚೇತನ ಪುಸ್ತಕಾಲಯ, ಬೆಂಗಳೂರು |
| 4. ಜಿಲ್ಲಾಧಿಕಾರಿಗಳು | | ಚಾಮರಾಜೇಂದ್ರ ಮೃಗಾಲಯ, ಮೈಸೂರು |
| 5. ಪ್ರಕಾಶಕರು | | ಗ್ರಾಮ ಪಂಚಾಯಿತಿ, ಹಾರೋಹಳ್ಳಿ |
| 6. ಸಂಪಾದಕರು | | ಸರ್ಕಾರಿ ಪ್ರೌಢ ಶಾಲೆ, ಹುಬ್ಬಳ್ಳಿ |

**ಚಟುವಟಿಕೆ 2 : ಕೊಟ್ಟಿರುವ ಪತ್ರಗಳಲ್ಲಿ ಸಂಬೋದನೆಯ ಹಂತವನ್ನು (ಇವರಿಂದ ಮತ್ತು ಇವರಿಗೆ) ಮಾದರಿಯಂತೆ ಬರೆಯಿರಿ.**

**ಮಾದರಿ: ನಿಮ್ಮನ್ನು ಹಾವೇರಿಯ ವಿದ್ಯಾನಗರ ಬಡಾವಣೆಯ 'ಸಂಜೀವ' ಎಂದು ಭಾವಿಸಿಕೊಂಡು, ನಿಮ್ಮ ಬಡಾವಣೆಯ ಚರಂಡಿಗಳನ್ನು ದುರಸ್ತಿಪಡಿಸುವಂತೆ ಕೋರಿ, 'ನಗರಸಭೆಯ ಅಧ್ಯಕ್ಷರಿಗೆ' ಒಂದು ಮನವಿ ಪತ್ರ ಬರೆಯಿರಿ.**

| ಇವರಿಂದ | ಇವರಿಗೆ |
|---|---|
| ಸಂಜೀವ | ಮಾನ್ಯಅಧ್ಯಕ್ಷರು |
| ವಿದ್ಯಾನಗರಬಡಾವಣೆ | ನಗರಸಭೆ |
| ಹಾವೇರಿ | ಹಾವೇರಿ |

**1. ನಿಮ್ಮನ್ನು ಮೈಸೂರು ಜಿಲ್ಲೆಯ ಹೆಚ್.ಡಿ.ಕೋಟೆ ತಾಲೂಕಿನ ಮುಳ್ಳೂರು ಸರ್ಕಾರಿ ಪ್ರೌಢಶಾಲೆಯ 'ಪ್ರಣೀತ' ಎಂದು ಭಾವಿಸಿಕೊಂಡು ನಿಮ್ಮ ಗ್ರಾಮಕ್ಕೆ ಶುದ್ಧ ಕುಡಿಯುವ ನೀರಿನ ಘಟಕವನ್ನು ಸ್ಥಾಪಿಸುವಂತೆ ಕೋರಿ ಗ್ರಾಮ ಪಂಚಾಯಿತಿ ಅಧ್ಯಕ್ಷರಿಗೆ ಒಂದು ಮನವಿ ಪತ್ರ ಬರೆಯಿರಿ.**

| ಇವರಿಂದ | ಇವರಿಗೆ |
|---|---|
| | |
| | |
| | |
| | |

**2. ನಿಮ್ಮನ್ನು ಬೆಂಗಳೂರಿನ ರಾಜರಾಜೇಶ್ವರಿ ನಗರದ ಕರ್ನಾಟಕ ಪಬ್ಲಿಕ್ ಶಾಲೆಯ 'ಚಂದನ್' ಎಂದು ಭಾವಿಸಿಕೊಂಡು ಶಾಲಾ ವಿದ್ಯಾರ್ಥಿಗಳಿಗೆ ಆರೋಗ್ಯ ತಪಾಸಣೆ ಕೈಗೊಳ್ಳುವಂತೆ ಕೋರಿ ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿಗಳಿಗೆ ಒಂದು ಮನವಿ ಪತ್ರ ಬರೆಯಿರಿ.**

| ಇವರಿಂದ | ಇವರಿಗೆ |
|---|---|
| | |
| | |
| | |
| | |

@KTBS NOT TO BE REPUBLISHED

3. ನಿಮ್ಮನ್ನು ಶಿವಮೊಗ್ಗದ ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿ ಸಹನ ಎಂದು ಭಾವಿಸಿಕೊಂಡು ನಿಮ್ಮ ಊರಿನಲ್ಲಿ ಅತಿವೃಷ್ಟಿಯಿಂದಾದ ಅನಾಹುತಕ್ಕೆ ಪರಿಹಾರವನ್ನು ನೀಡುವಂತೆ ಕೋರಿ ಜಿಲ್ಲಾಧಿಕಾರಿಗಳಿಗೆ ಒಂದು ಪತ್ರವನ್ನು ಬರೆಯಿರಿ.

| ಇವರಿಂದ | ಇವರಿಗೆ |
|---|---|
| | |
| | |
| | |
| | |

4. ನಿಮ್ಮನ್ನು ಚಿತ್ರದುರ್ಗದ ಓಬವ್ವ ಬಡಾವಣೆಯ ಕರ್ನಾಟಕ ಪಬ್ಲಿಕ್ ಶಾಲೆಯ 'ಅನುಪಮ' ಎಂದು ಭಾವಿಸಿಕೊಂಡು ಕುವೆಂಪು ಅವರ 'ಶ್ರೀರಾಮಾಯಣ ದರ್ಶನಂ' ಪುಸ್ತಕವನ್ನು ಕಳುಹಿಸಿಕೊಡುವಂತೆ ಕೋರಿ ಮೈಸೂರಿನ ಸ್ವಪ್ನ ಪುಸ್ತಕಾಲಯದ ಪ್ರಕಾಶಕರಿಗೆ ಒಂದು ಮನವಿ ಪತ್ರವನ್ನು ಬರೆಯಿರಿ.

| ಇವರಿಂದ | ಇವರಿಗೆ |
|---|---|
| | |
| | |
| | |
| | |

5. ನಿಮ್ಮನ್ನು ಚಿಕ್ಕಮಗಳೂರಿನ ಸರ್ಕಾರಿ ಪ್ರೌಢಶಾಲೆಯ 'ಆರಾಧನಾ' ಎಂದು ಭಾವಿಸಿಕೊಂಡು, ತಾರಾಲಯದ ವೀಕ್ಷಣೆಗೆ ಸಮಯವಕಾಶ ಕೋರಿ ಬೆಂಗಳೂರಿನ ನೆಹರೂ ತಾರಾಲಯದ ವ್ಯವಸ್ಥಾಪಕರಿಗೆ ಮನವಿ ಪತ್ರವನ್ನು ಬರೆಯಿರಿ.

| ಇವರಿಂದ | ಇವರಿಗೆ |
|---|---|
| | |
| | |
| | |
| | |

@KTBS NOT TO BE REPUBLISHED

ಬೆಂಬಲಿತ ಕಲಿಕೆಯ ಹಂತ – ಚಟುವಟಿಕೆ ಹಾಳೆ 22

# ಪತ್ರಲೇಖನ–2

ಹೆಚ್ಚಿನ ಕಲಿಕೆಗಾಗಿ ಸ್ಕ್ಯಾನ್ ಮಾಡಿ

**ಕಲಿಕಾ ಫಲ :** ಪತ್ರದ ರಚನೆ ಮತ್ತು ವಿಷಯವನ್ನು ಸ್ಪಷ್ಟವಾಗಿ ವಿನ್ಯಾಸಗೊಳಿಸುವ ಸಾಮರ್ಥ್ಯವನ್ನು ಅಭಿವೃದ್ಧಿಪಡಿಸುವರು.

**ಚಟುವಟಿಕೆ 1 : ಕೊಟ್ಟಿರುವ ಪತ್ರದ ಹಂತಗಳನ್ನು ಕ್ರಮಾನುಗತವಾಗಿ ಜೋಡಿಸಿ ಬರೆಯಿರಿ.**

| | |
|---|---|
| ಇವರಿಗೆ | |
| ಇಂತಿ, | |
| ತಮ್ಮ ವಿಶ್ವಾಸಿ | |
| ದಿನಾಂಕ | |
| ಸ್ಥಳ | |
| ವಂದನೆಗಳೊಂದಿಗೆ | |
| ಇವರಿಂದ | |
| ವಿಷಯ | |
| ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ | |
| ಮಾನ್ಯರೆ | |

@KTBS NOT TO BE REPUBLISHED

**ಚಟುವಟಿಕೆ 2 : ನಿಮ್ಮನ್ನು ಬೆಳಗಾವಿ ಜಿಲ್ಲೆಯ ಸವದತ್ತಿ ತಾಲೂಕಿನ ಸರ್ಕಾರಿ ಪ್ರೌಢಶಾಲೆಯ 'ರೇಣುಕಾನರಸಾಪುರ' ಎಂದು ಭಾವಿಸಿಕೊಂಡು, ಮೈಸೂರಿನ ಅಂಬಾವಿಲಾಸ ಅರಮನೆಯನ್ನು ವೀಕ್ಷಿಸಲು ಸಮಯಾವಕಾಶವನ್ನು ಕೋರಿ, ಅರಮನೆ ಮಂಡಳಿಯ ಆಡಳಿತಾಧಿಕಾರಿಗಳಿಗೆ ಒಂದು ಮನವಿ ಪತ್ರವನ್ನು ಬರೆಯಿರಿ.**

@KTBS
NOT TO BE REPUBLISHED

ಬೆಂಬಲಿತ ಕಲಿಕೆಯ ಹಂತ – ಚಟುವಟಿಕೆ ಹಾಳೆ 23

# ಛಂದಸ್ಸು–1

ಹೆಚ್ಚಿನ ಕಲಿಕೆಗಾಗಿ ಸ್ಕ್ಯಾನ್ ಮಾಡಿ

**ಕಲಿಕಾ ಫಲ :** ಕಾವ್ಯ ಕವಿತೆಗಳನ್ನು ಓದಿ ಅವುಗಳಲ್ಲಿನ ಛಂದಸ್ಸು ವ್ಯಾಕರಣಾಂಶದ ವಿಶೇಷತೆಗಳ ಬಗ್ಗೆ ತಿಳಿದು ಅರ್ಥಮಾಡಿಕೊಳ್ಳುವರು.

* **ಪದ್ಯರಚನೆಯ ನಿಯಮಗಳನ್ನು ತಿಳಿಸುವ ಶಾಸ್ತ್ರವನ್ನು ಛಂದಸ್ಸು ಎನ್ನುವರು.**
* ಛಂದಸ್ಸಿನಲ್ಲಿ ಪ್ರಧಾನವಾಗಿ ಮೂರು ಅಂಶಗಳಿವೆ.
  1. ಗಣ
  2. ಯತಿ
  3. ಪ್ರಾಸ




* 'ಗಣ' ಎಂದರೆ ಗುಂಪು ಎಂದರ್ಥ.
* 'ಗಣ' ದಲ್ಲಿ ಮೂರು ವಿಧಗಳಿವೆ.

**1. ಅಂಶಗಣ** * ಅಂಶಗಳ ಆಧಾರದ ಮೇಲೆ ಗುಂಪು ಮಾಡುವುದು. ಅಂಶಗಣದಲ್ಲಿ ಬರುವ ಪ್ರಮುಖ ಪದ್ಯ ಪ್ರಕಾರಗಳೆಂದರೆ ಸಾಂಗತ್ಯ, ತ್ರಿಪದಿ, ಏಳೆ, ಅಕ್ಕರಗಳು ಮುಂತಾದವು

**2. ಮಾತ್ರಾಗಣ** ಮಾತ್ರೆಗಳ ಆಧಾರದ ಮೇಲೆ ಗುಂಪು ಮಾಡುವುದು. ಮಾತ್ರಾಗಣದಲ್ಲಿ ಬರುವ ಪ್ರಮುಖ ಪದ್ಯ ಪ್ರಕಾರಗಳೆಂದರೆ ಕಂದಪದ್ಯ, ಷಟ್ಪದಿ, ರಗಳೆ

**3. ಅಕ್ಷರಗಣ** – ಅಕ್ಷರಗಳ ಆಧಾರದ ಮೇಲೆ ಗುಂಪು ಮಾಡುವುದು.ಅಕ್ಷರಗಣದಲ್ಲಿ ಬರುವ ಪ್ರಮುಖ ಪದ್ಯ ಪ್ರಕಾರಗಳೆಂದರೆ ಖ್ಯಾತ ಕರ್ಣಾಟಕ ವೃತ್ತಗಳು.

ಮಾತ್ರಾಗಣ

* ಮಾತ್ರೆ * ಅಕ್ಷರವನ್ನು ಉಚ್ಚರಿಸಲು ತೆಗೆದುಕೊಳ್ಳುವ ಸಮಯವನ್ನು ಮಾತ್ರೆ ಎನ್ನುವರು.
* ಮಾತ್ರೆಯಲ್ಲಿ ಪ್ರಮುಖವಾಗಿ ಎರಡು ವಿಧಗಳಿವೆ.

* **ಲಘು** * ಒಂದು ಮಾತ್ರಾಕಾಲದಲ್ಲಿ ಉಚ್ಚರಿಸಬಹುದಾದ ಅಕ್ಷರವನ್ನು ಲಘು ಎನ್ನುವರು.

ಲಘುವನ್ನು **'U'** ಈ ರೀತಿ ಸಂಕೇತಿಸಲಾಗಿದೆ. ಇದಕ್ಕೆ 1 ಮಾತ್ರೆಯ ಬೆಲೆ ಇರುತ್ತದೆ.

* **ಗುರು** '–' ಎರಡು ಮಾತ್ರಾಕಾಲದಲ್ಲಿ ಉಚ್ಚರಿಸಬಹುದಾದ ಅಕ್ಷರವನ್ನು ಗುರು ಎನ್ನುವರು

ಗುರುವನ್ನು ' – ' ಈ ರೀತಿ ಸಂಕೇತಿಸಲಾಗಿದೆ. ಇದಕ್ಕೆ 2 ಮಾತ್ರೆಯ ಬೆಲೆಇರುತ್ತದೆ.

| | | |
|---|---|---|
| **ಲಘು** | **'U'** | **1 ಮಾತ್ರೆಯ ಬೆಲೆ.** |
| **ಗುರು** | **' – '** | **2 ಮಾತ್ರೆಯ ಬೆಲೆ.** |

* ಅಕ್ಷರಗಳು 'ಲಘು', 'ಗುರು' ಎಂದು ಗುರುತಿಸಬೇಕಾದರೆ ಕೆಲವು ನಿಯಮಗಳನ್ನು ಅರಿಯಬೇಕು.
* ಕೆಳಕಂಡ ಸಂದರ್ಭಗಳಲ್ಲಿ ಒಂದು ಅಕ್ಷರವನ್ನು ಗುರು ( – ) ಎಂದು ಗುರುತಿಸಬೇಕು.

| **1. ಎಲ್ಲಾ ದೀರ್ಘಸ್ವರಗಳು ಗುರುವಾಗುತ್ತವೆ.** | | | | | | |
|---|---|---|---|---|---|---|
| – | – | – | – | – | – | – |
| **ಆ** | **ಈ** | **ಊ** | **ಏ** | **ಐ** | **ಓ** | **ಔ** |

@KTBS NOT TO BE REPUBLISHED


**2. ಎಲ್ಲಾ ದೀರ್ಘ ಸ್ವರ ಸಹಿತ ಗುಣಿತಾಕ್ಷರಗಳು ಗುರುವಾಗುತ್ತವೆ.**

| – | – | – | – | – | – | – |
|---|---|---|---|---|---|---|
| ಕಾ | ಕೀ | ಕೂ | ಕೇ | ಕೈ | ಕೋ | ಕೌ |
| ಕ್+ಆ | ಕ್+ಈ | ಕ್+ಊ | ಕ್+ಏ | ಕ್+ಐ | ಕ್+ಓ | ಕ್+ಔ |

ಇದೇ ರೀತಿ ದೀರ್ಘಸ್ವರ ಸಹಿತವಾದ ಎಲ್ಲಾ ಗುಣಿತಾಕ್ಷರಗಳು ಗುರುವಾಗುತ್ತವೆ ಎಂಬುದನ್ನು ನೆನಪಿನಲ್ಲಿಡಿ.

**3. ಅನುಸ್ವಾರ ಮತ್ತು ವಿಸರ್ಗದಿಂದ ಕೂಡಿದ ಅಕ್ಷರಗಳು ಗುರುವಾಗುತ್ತದೆ**

| – | – | – | – | – |
|---|---|---|---|---|
| ಅಂದ | ಗಂಧ | ಮಂದಾರ | ದುಃಖ | ಬಹುಶಃ |



**4. ಒತ್ತಕ್ಷರದ ಹಿಂದಿನ ಅಕ್ಷರಗಳು ಗುರುವಾಗುತ್ತದೆ.**

| – | – | – | – | – |
|---|---|---|---|---|
| ಅಮ್ಮ | ಕಣ್ಣಿಣಿ | ಆಸ್ತಿ | ಸೂರ್ಯತ | ರಮ್ಯ |

**5. ವ್ಯಂಜನಾಕ್ಷರವಿದ್ದಾಗ ಅದರ ಹಿಂದಿನ ಅಕ್ಷರದ ಜೊತೆ ಸೇರಿ ಗುರುವಾಗುತ್ತದೆ.**

| – | – |
|---|---|
| ರಮೇಶ್ | ಭವನ್ |

ವ್ಯಂಜನಾಕ್ಷರಕ್ಕೆ ಗುರುವನ್ನಾಗಲಿ, ಲಘುವನ್ನಾಗಲಿ ಗುರುತಿಸಬಾರದು.

©KTBS NOT TO BE REPUBLISHED

**6. ಷಟ್ಪದಿಯ ಮೂರು ಮತ್ತು ಆರನೆಯ ಸಾಲಿನ ಕೊನೆಯ ಅಕ್ಷರ ಲಘುವಾಗಿದ್ದರೂ ಗುರುವಾಗುತ್ತದೆ.**

| ಒಂದು ಅಕ್ಷರವು ಹಲವು ಕಾರಣಗಳಿಂದ ಗುರುವಾದರೂ ಸಹ ಒಂದೇ ಗುರುವನ್ನು ಗುರುತಿಸಬೇಕು. |
|---|
| **ಜಾತ್ರೆ (ಇಲ್ಲಿ 'ಜಾ' ಅಕ್ಷರವು ದೀರ್ಘಸ್ವರ ಅಕ್ಷರವಾದ ಕಾರಣ ಗುರುವಾಗುತ್ತದೆ. ಮತ್ತು ಒತ್ತಕ್ಷರದ ಹಿಂದಿನ ಅಕ್ಷರವಾದ ಕಾರಣದಿಂದಲೂ ಸಹ ಗುರುವಾಗುತ್ತದೆ. ಆದರೆ ಎರಡು ಸಂದರ್ಭಗಳಿದ್ದಾಗಲೂ ಒಂದೇ ಗುರುವನ್ನು ಗುರುತಿಸಬೇಕು)** |

**ಮೇಲಿನ ಸಂದರ್ಭಗಳನ್ನು ಹೊರತುಪಡಿಸಿ, ಉಳಿದ ಎಲ್ಲಾ ಸಂದರ್ಭಗಳಲ್ಲೂ ಅಕ್ಷರಗಳು ಲಘುವಾಗುತ್ತದೆ.**

ಪಾದ/ಪದಿ : ಪದ್ಯದ ಸಾಲುಗಳನ್ನು ಪಾದ / ಪದಿ ಎನ್ನುವರು.

| | |
|---|---|
| **ದ್ವಿಪದಿ** | **ಎರಡು ಸಾಲು** |
| **ತ್ರಿಪದಿ** | **ಮೂರು ಸಾಲು** |
| **ಕಂದಪದ್ಯ** | **ನಾಲ್ಕು ಸಾಲು** |
| **ಷಟ್ಪದಿ** | **ಆರು ಸಾಲು** |

ಪ್ರಸ್ತಾರವೆಂದರೆ ಮಾತ್ರೆಗಳ ಕಾಲದ ಆಧಾರದ ಮೇಲೆ ಲಘು, ಗುರುವನ್ನು ಗುರುತಿಸುವುದು ಎಂದರ್ಥ.

ಚಟುವಟಿಕೆ 1 : ಕೊಟ್ಟಿರುವ ಪದಗಳಿಗೆ ಪ್ರಸ್ತಾರ ಹಾಕಿರಿ.

| | | | |
|---|---|---|---|
| ರಾಜ್ಯ | ಸಹನ | ಸಾಲು | ಸೀತಾ |
| ಕೋಗಿಲೆ | ಸಾವಿರ | ಕೈತೋಟ | ಮೌನ |
| ಸಾಮರಸ್ಯ | ಕುಂಕುಮ | ದುಃಖ | ಮಹೇಂದ್ರ |
| ಬನದೊಳ್ | ಹೇಮಂತ | ಕರ್ನಾಟಕ | ಆಚಾರ್ಯ |
| ವರ್ತನೆ | ಪ್ರಾರ್ಥನೆ | ವಿದ್ಯಾರ್ಥಿ | ಅರ್ಜುನ |
| ಅನರ್ಥ | ಸ್ಪರ್ಧಾತ್ಮಕ | ರೈತಾಪಿ | ಪೈರು |
| ಜೈಕಾರ | ಗೈರುಹಾಜರಿ | ಭೈರವ | ಕೃಪೆ |
| ಧೃತರಾಷ್ಟ್ರ | ಸೃಜನಶೀಲತೆ | ಕೃಷಿಕ | ನೃಪ |
| ಅನಘ | ಮಠ | ಧನಕನಕ | ಫಲಾಹಾರ |
| ರಾಜರಥ | ಪ್ರಥಮ | ಗಂಭೀರ | ಖಗ |

@KTBS NOT TO BE REPUBLISHED

ಬೆಂಬಲಿತ ಕಲಿಕೆಯ ಹಂತ – ಚಟುವಟಿಕೆ ಹಾಳೆ 24

# ಛಂದಸ್ಸು –2

I1P7C7

ಹೆಚ್ಚಿನ ಕಲಿಕೆಗಾಗಿ ಸ್ಕ್ಯಾನ್ ಮಾಡಿ

**ಕಲಿಕಾ ಫಲ :** ಕಾವ್ಯ ಕವಿತೆಗಳನ್ನು ಓದಿ ಅವುಗಳಲ್ಲಿನ ಛಂದಸ್ಸು ವ್ಯಾಕರಣಾಂಶದ ವಿಶೇಷತೆಗಳ ಬಗ್ಗೆ ತಿಳಿದು ಅರ್ಥಮಾಡಿಕೊಳ್ಳುವರು.

## ಕಂದಪದ್ಯ

**ಕಂದಪದ್ಯದ ಲಕ್ಷಣಗಳು :**

* ನಾಲ್ಕು ಸಾಲುಗಳ ಪದ್ಯ
* ಒಂದು ಮತ್ತು ಮೂರನೇ ಸಾಲುಗಳು ಪರಸ್ಪರ ಮಾತ್ರಾದೃಷ್ಟಿಯಿಂದ ಸಮನಾಗಿದ್ದು, 4 ಮಾತ್ರೆಯ ಮೂರು ಗಣಗಳಿರುತ್ತವೆ.
* ಎರಡು ಮತ್ತು ನಾಲ್ಕನೇ ಸಾಲುಗಳು ಪರಸ್ಪರ ಮಾತ್ರಾದೃಷ್ಟಿಯಿಂದ ಸಮನಾಗಿದ್ದು, 4 ಮಾತ್ರೆಯ ಐದು ಗಣಗಳಿರುತ್ತವೆ.
* 4 ಮಾತ್ರೆಗೆ ಒಂದು ಗಣ ಮಾಡಬೇಕು.
* ಒಟ್ಟು 16 ಗಣಗಳಿದ್ದು, ಒಟ್ಟು 64 ಮಾತ್ರೆಗಳಿರುತ್ತವೆ.

**ಚಟುವಟಿಕೆ 1 : ಕೊಟ್ಟಿರುವ ಕಂದಪದ್ಯದ ಲಕ್ಷಣಗಳನ್ನು ತಿಳಿದು, ಕಂದಪದ್ಯಕ್ಕೆ ಪ್ರಸ್ತಾರ ಹಾಕಿರಿ**

ವಿಪಿನಚರನಿನಗೆತಕ್ಕುದು
ಚಪಲಮೃಗವ್ರಜದಬೇಂಟೆಯುಜ್ಜುಗಮೆಮ್ಮೀ
ತಪದವಿಚಾರಂತಕ್ಕುದೆ
ವಿಪರೀತಂನಿನ್ನನುಡಿಯನೊಲ್ವರೆಬಲ್ಗರ್

@KTBS NOT TO BE REPUBLISHED

ಯತಿ : ಯತಿ ಎಂದರೆ ಪದ್ಯವನ್ನು ವಾಚಿಸುವಾಗ ನಿರ್ದಿಷ್ಟ ಸ್ಥಳದಲ್ಲಿ ನಿಲ್ಲಿಸಬೇಕು. ಅಂತಹ ಸ್ಥಳವನ್ನು ಯತಿ ಎನ್ನುವರು. **'ಯತಿಯೆಂಬುದುಸರ್ವತಾಣಂ'**

* ಪದ್ಯದ ಒಂದು ನಿರ್ದಿಷ್ಟ ಸ್ಥಳದಲ್ಲಿ ಒಂದು ಪದ ಅಥವಾ ವ್ಯಂಜನಾಕ್ಷರಗಳು ಪುನರಾವರ್ತನೆಗೊಂಡರೆ ಅದನ್ನು ನಾವು ಪ್ರಾಸ ಪದ ಎಂದು ಕರೆಯುತ್ತಾರೆ. ಮಂಕುತಿಮ್ಮನ ಕಗ್ಗ ಸತ್ಯವಂತರ ಸಂಗವಿರಲು ಕನಕದಾಸರ ಕೀರ್ತನೆ ನಗುಮೊಗದಿಲೋಗರ

**ಚಟುವಟಿಕೆ 3 : ಕೊಟ್ಟಿರುವ ಪದ್ಯಗಳನ್ನು ಓದಿ ಅದರಲ್ಲಿರುವ ಪ್ರಾಸಪದಗಳನ್ನು ಗುರುತಿಸಿ ಬರೆಯಿರಿ.**

ನಗುಮನದಿ ಲೋಗರ ವಿಕಾರಂಗಳನು ನೋಡಿ,
ಬಿಗಿ ತುಟಿಯ; ದುಡಿವಂದು ನೋವಪಡುವಂದು ॥
ಪೊಗು; ವಿಶ್ವಜೀವನದ ಜೀವಾಂತರಂಗದಲಿ।
ನಗುನಗುತ ಬಾಳ್; ತೆರಳು – ಮಂಕುತಿಮ್ಮ ॥

ಅಕ್ಕಿಯೊಳಗನ್ನವನು ಮೊದಲಾರು ಕಂಡವನು
ಅಕ್ಕರದ ಬರಹಕ್ಕೆ ಮೊದಲಿಗನದಾರು?
ಲೆಕ್ಕವಿರಿಸಿಲ್ಲ ಜಗ ತನ್ನಾದಿಬಂಧುಗಳ.
ದಕ್ಕುವುದೇ ನಿನಗೆ ಜಸ ಮಂಕುತಿಮ್ಮ.

ಹುಲ್ಲಾಗು ಬೆಟ್ಟದಡಿ, ಮನೆಗೆ ಮಲ್ಲಿಗೆಯಾಗು,
ಕಲ್ಲಾಗು ಕಷ್ಟಗಳ ಮಳೆಯ ವಿಧಿ ಸುರಿಯೆ.
ಬೆಲ್ಲ–ಸಕ್ಕರೆಯಾಗು ದೀನದುರ್ಬಲರಿಂಗೆ.
ಎಲ್ಲರೊಳಗೊಂದಾಗು ಮಂಕುತಿಮ್ಮ.

– ಡಿ.ವಿ.ಜಿ.

ಸತ್ಯವಂತರ ಸಂಗವಿರಲು ತೀರ್ಥವೇತಕೆ
ನಿತ್ಯ ಜ್ಞಾನಿಯಾದ ಮೇಲೆ ಚಿಂತೆ ಯಾತಕೆ ॥ ಪ ॥
ತಾನು ಉಣ್ಣದ ಪರರಿಗಿಕ್ಕದ ಧನವಿದ್ದೇತಕೆ
ಮಾನ ಹೀನನಾಗಿ ಬಾಳ್ವ ಮನುಜನೇತಕೆ
ಜ್ಞಾನವಿಲ್ಲದೇ ನೂರು ಕಾಲ ಬದುಕಲೇತಕೆ
ಮಾನಿನಿಯ ತೊರೆದವಗೆ ಭೋಗವೇತಕೆ ॥ 1 ॥
ಮಾತು ಕೇಳದೆ ಮಲತು ನಡೆವ ಮಕ್ಕಳೇತಕೆ
ಪ್ರೀತಿ ಇಲ್ಲದೆ ಎಡೆಯನಿಕ್ಕಿದ ಅನ್ನವೇತಕೆ
ನೀತಿಯರಿತು ನಡೆಯದಿರುವ ಬಂಟನೇತಕೆ
ಸೋತು ಹೆಣ್ಣಿಗೆ ಹೆದರಿ ನಡೆವ ಪುರುಷನೇತಕೆ ॥ 2 ॥
ಸಂಜ್ಞೆಯರಿತು ನಡೆಯದಿರುವ ಸತಿ ಇದ್ದೇತಕೆ
ಮುನ್ನ ಕೊಟ್ಟು ಪಡೆಯದನ್ನು ಬಯಸಲೇತಕೆ
ಮನ್ನಣೆಯ ನಡೆಸದಿರುವ ದೊರೆಯು ಏತಕೆ
ಚೆನ್ನ ಆದಿ ಕೇಶವನಲ್ಲದ ದೈವವೇತಕೆ ॥ 3 ॥

**–ಕನಕದಾಸರು**

**ಈ ಪದ್ಯಗಳಲ್ಲಿ ಇರುವ ಪ್ರಾಸ ಪದಗಳು–**

| | |
|---|---|
| | |
| | |
| | |
| | |
| | |
| | |

@KTBS NOT TO BE REPUBLISHED

ಚಟುವಟಿಕೆ 2 : ಈ ಪ್ರಾಸ ಪದಗಳ ಸಹಾಯದಿಂದ ಅಥವಾ ನಿಮ್ಮದೇ ಆದ ಪ್ರಾಸ ಪದಗಳನ್ನು ಬಳಸಿಕೊಂಡು ಕವಿತೆಗಳನ್ನು ರಚಿಸಿರಿ.

**ನಾನು ಬರೆದ ಕವಿತೆ**

**ಚಟುವಟಿಕೆ 3 :** ಕೊಟ್ಟಿರುವ ಪದಗಳಿಗೆ ಸರಿಹೊಂದುವ ಪ್ರಾಸಪದಗಳನ್ನು ಬರೆಯಿರಿ.

| ಎರಡು ಅಕ್ಷರಗಳ ಪದ | ಮೂರು ಅಕ್ಷರಗಳ ಪದಗಳು | ನಾಲ್ಕು ಅಕ್ಷರಗಳ ಪದಗಳು | ಐದು ಅಕ್ಷರಗಳ ಪದಗಳು |
|---|---|---|---|
| ಅನ್ನ | ಕದನ | ಚದುರಿಸು | ಬರೆವಣಿಗೆ |
| ಸರ | ಚಂದಿರ | ಬರೆಯಿರಿ | ಹೋರಾಡಿದರು |
| ಶಾಲೆ | ಸಜ್ಜನ | | |
| ನಲಿಯೋಣ | ಜಗ | | |
| ಜನುಮ | ಜನರಿಗೆ | | |
| ನೀರು | ಶಿಕ್ಷಕ | | |
| ಗಂಡು | ಕನಸು | | |
| ಚಾತ್ರೆ | ಬೆಳಕು | | |

@KTBS NOT TO BE REPUBLISHED

ಬೆಂಬಲಿತ ಕಲಿಕೆಯ ಹಂತ – ಚಟುವಟಿಕೆ ಹಾಳೆ 25

# ಅಲಂಕಾರ – 1

Q9K6T4

ಹೆಚ್ಚಿನ ಕಲಿಕೆಗಾಗಿ ಸ್ಕ್ಯಾನ್ ಮಾಡಿ

**ಕಲಿಕಾ ಫಲ :** ಕಾವ್ಯ ಕವಿತೆಗಳನ್ನು ಓದಿ ಅವುಗಳಲ್ಲಿನ ಅಲಂಕಾರಗಳ ಬಗ್ಗೆ ತಿಳಿದು ಅರ್ಥಮಾಡಿಕೊಳ್ಳುವರು. ಕಾವ್ಯದ ಸೌಂದರ್ಯವನ್ನು ಹೆಚ್ಚಿಸಲು ಬಳಸುವ ಪದಗಳಿಗೆ ಅಲಂಕಾರ ಎನ್ನುವರು.

## ಅಲಂಕಾರಗಳಲ್ಲಿ ಎರಡು ವಿಧ

**1. ಶಬ್ದಾಲಂಕಾರ**

**2. ಅರ್ಥಾಲಂಕಾರ**

**1. ಶಬ್ದಾಲಂಕಾರ : ಶಬ್ದ ಅಥವಾ ಪದಗಳ ಜೋಡಣೆಯ ಮೂಲಕ ಕಾವ್ಯ ಅಥವಾ ಮಾತಿನ ಸೌಂದರ್ಯವನ್ನು ಹೆಚ್ಚಿಸುವುದನ್ನು ಶಬ್ದಾಲಂಕಾರ ಎನ್ನುವರು.**

**ಉದಾ:** ಬಲ್ಲವನೆಬಲ್ಲ, ಬೆಲ್ಲದ ರುಚಿಯ. ತುಂಟನಾದದ ಮಂಟಪದಲ್ಲಿ ಕೂತರೂ ತಂಟೆ ಬಿಡಲಾರ.

**2. ಅರ್ಥಾಲಂಕಾರ : ಪದಗಳ ಅರ್ಥ ಚಮತ್ಕಾರದಿಂದ ಕಾವ್ಯದ ಸೌಂದರ್ಯವನ್ನು ಹೆಚ್ಚಿಸುವುದನ್ನು ಅರ್ಥಾಲಂಕಾರ ಎನ್ನುವರು.**

**ಉದಾ:** ಸೀತೆಯ ಮುಖ ಕಮಲದಂತೆ ಅರಳಿತು. ಭೀಮ ದುರ್ಯೋಧನರು ಮದಗಜಗಳಂತೆ ಹೋರಾಡಿದರು.

**ಪ್ರಮುಖ ಅರ್ಥಾಲಂಕಾರಗಳು**

| ಅಲಂಕಾರದ ಹೆಸರು | ಲಕ್ಷಣ |
|---|---|
| ಉಪಮಾಲಂಕಾರ | ಎರಡು ವಸ್ತುಗಳಿಗೆ ಪರಸ್ಪರವಾಗಿ ಇರುವ ಹೋಲಿಕೆಯನ್ನು ಹೇಳುವುದು |
| ರೂಪಕಾಲಂಕಾರ | ಅತಿ ಸಾಮ್ಯದಿಂದಾಗಿ ಉಪಮೇಯ, ಉಪಮಾನಗಳಲ್ಲಿ ಅಭೇದವನ್ನು ಹೇಳಿ ವರ್ಣಿಸುವುದು. |
| ದೃಷ್ಟಾಂತಾಲಂಕಾರ | ಎರಡು ಬೇರೆಬೇರೆ ವಾಕ್ಯಗಳಲ್ಲಿ ಅರ್ಥಸಾದೃಶ್ಯದಿಂದ ಬಿಂಬ ಪ್ರತಿಬಿಂಬ ಭಾವವು ತೋರಿಬರುವುದು |
| ಅರ್ಥಾಂತರನ್ಯಾಸಲಂಕಾರ | ಒಂದು ವಿಶೇಷ ವಾಕ್ಯವನ್ನು ಸಾಮಾನ್ಯ ವಾಕ್ಯದಿಂದ ಅಥವಾ ಸಾಮಾನ್ಯ ವಾಕ್ಯದಿಂದ ವಿಶೇಷ ವಾಕ್ಯದಿಂದ ಸಮರ್ಥನೆ ಮಾಡುವುದು. |
| ಉತ್ಪ್ರೇಕ್ಷಾಲಂಕಾರ | ಉಪಮೇಯವಾದ ವಸ್ತುವನ್ನು ಅಥವಾ ಸನ್ನಿವೇಶವನ್ನು ಉಪಮಾನವಾದ ವಸ್ತುವನ್ನಾಗಿ ಅಥವಾ ಸನ್ನಿವೇಶವನ್ನಾಗಿ ಕಲ್ಪಿಸಿಹೇಳುವುದು |
| ಶ್ಲೇಷಾಲಂಕಾರ | ಒಂದು ಪದವು ಒಂದಕ್ಕಿಂತ ಹೆಚ್ಚು ಅರ್ಥಕೊಡುವಂತೆ ಇರುವುದು. |

**ಉಪಮಾಲಂಕಾರ : ಎರಡು ವಸ್ತುಗಳಿಗೆ ಪರಸ್ಪರವಾಗಿ ಇರುವ ಹೋಲಿಕೆಯನ್ನು ಹೇಳುವುದನ್ನು ಉಪಮಾಲಂಕಾರ ಎನ್ನುವರು.**

© KTBS NOT TO BE REPUBLISHED

**ಚಟುವಟಿಕೆ** 1 : ಕೊಟ್ಟಿರುವ ಚಿತ್ರಗಳನ್ನು ಗಮನಿಸಿ, ಪರಸ್ಪರ ಹೋಲಿಕೆ ಬರುವ ರೀತಿಯಲ್ಲಿ ವಾಕ್ಯ ರಚಿಸಿರಿ.






ಚಿತ್ರ 1. _____

_____

ಚಿತ್ರ 2. _____

_____

@KTBS NOT TO BE REPUBLISHED

**ಚಟುವಟಿಕೆ 2 : ಕೊಟ್ಟಿರುವ ಹೇಳಿಕೆಗಳನ್ನು ಮಾದರಿಯಂತೆ ಸಮನ್ವಯಗೊಳಿಸಿ ಬರೆಯಿರಿ.**

ಮಾದರಿ : **ಸೀತೆಯ ಮುಖವು ಕಮಲದಂತೆ ಅರಳಿತು**

* ಇಲ್ಲಿ ಹೋಲಿಸಿಕೊಳ್ಳುತ್ತಿರುವ ಪದ **ಸೀತೆಯ ಮುಖ**. ಇದನ್ನೇ 'ಉಪಮೇಯ' (ವರ್ಣ್ಯ) ಎನ್ನುವರು.
ಸೀತೆಯ ಮುಖವನ್ನು **ಕಮಲ**ಕ್ಕೆ ಹೋಲಿಸಲಾಗಿದೆ. ಇದನ್ನೇ 'ಉಪಮಾನ' (ಅವರ್ಣ್ಯ) ಎನ್ನುವರ
ಉಪಮೇಯ ಮತ್ತು ಉಪಮಾನ ಈ ಎರಡಕ್ಕೂ ಸಾಮಾನ್ಯ ಲಕ್ಷಣಕ್ಕೆ ಸಂಬಂಧಿಸಿದ ಪದ 'ಸಮಾನ ಧರ್ಮ' ಅಥವಾ
'ಸಾಧಾರಣ ಧರ್ಮ' ಎನ್ನುತ್ತೇವೆ. ಇಲ್ಲಿ **ಅರಳು**ವುದು ಎಂಬುದು ಸಮಾನ ಧರ್ಮ
ಸಾಮಾನ್ಯ ಧರ್ಮಕ್ಕೂ ಉಪಮಾನಕ್ಕೂ ಸಂಬಂಧ ಕಲ್ಪಿಸುವ ಪದ **ಅಂತೆ** ಇದನ್ನೇ 'ಉಪಮಾವಾಚಕ' ಎನ್ನುವರು.

ಇಲ್ಲಿ ಉಪಮೇಯವಾದ **ಸೀತೆಯ ಮುಖ**ವನ್ನು ಉಪಮಾನವಾದ**ಕಮಲ**ಕ್ಕೆ **ಅರಳು**ವುದು ಎಂಬ ಸಮಾನಧರ್ಮದೊಂದಿಗೆ ಹೋಲಿಸಿ ಹೇಳಿರುವುದರಿಂದ ಇದನ್ನು 'ಉಪಮಾಲಂಕಾರ' ಎನ್ನುವರು.
ಈ ರೀತಿ ಬರೆಯುವುದನ್ನು ಸಮನ್ವಯ ಎನ್ನುವರು.

**ವಾಕ್ಯ 1 : ಭೀಮ ದುರ್ಯೋಧನರು ಮದಗಜಗಳಂತೆ ಹೋರಾಡಿದರು.**

ಇಲ್ಲಿ ಹೋಲಿಸಿಕೊಳ್ಳುತ್ತಿರುವ ಪದ _____ಇದನ್ನೇ 'ಉಪಮೇಯ' (ವರ್ಣ್ಯ) ಎನ್ನುವರು.
ಭೀಮ ದುರ್ಯೋಧನರನ್ನು _____ ಹೋಲಿಸಲಾಗಿದೆ. ಇದನ್ನೇ 'ಉಪಮಾನ' (ಅವರ್ಣ್ಯ) ಎನ್ನುವರು.
ಸಾಮಾನ್ಯ ಧರ್ಮಕ್ಕೂ ಉಪಮಾನಕ್ಕೂ ಸಂಬಂಧ ಕಲ್ಪಿಸುವ ಪದ _____ಇದನ್ನೇ 'ಉಪಮಾವಾಚಕ' ಎನ್ನುವರು.
ಉಪಮೇಯ ಮತ್ತು ಉಪಮಾನ ಈ ಎರಡಕ್ಕೂ ಸಾಮಾನ್ಯ ಲಕ್ಷಣಕ್ಕೆ ಸಂಬಂಧಿಸಿದ ಪದ _____'ಸಮಾನ ಧರ್ಮ' ಅಥವಾ 'ಸಾಧಾರಣ ಧರ್ಮ' ಎನ್ನುತ್ತೇವೆ.

ಇಲ್ಲಿ ಉಪಮೇಯವಾದ _____ಎಂಬುವುದನ್ನು ಉಪಮಾನವಾದ _____ ಎಂಬ ಸಮಾನಧರ್ಮದೊಂದಿಗೆ ಹೋಲಿಸಿ ಹೇಳಿರುವುದರಿಂದ ಇದನ್ನು 'ಉಪಮಾಲಂಕಾರ' ಎನ್ನುವರು.
ಈ ರೀತಿ ಬರೆಯುವುದನ್ನು ಸಮನ್ವಯ ಎನ್ನುವರು.

@KTBS
NOT TO BE REPUBLISHED

**ವಾಕ್ಯ 2 : ಮಗುವಿನ ಮುಖವು ಚಂದ್ರನಂತೆ ಮನೋಹರವಾಗಿದೆ.**

ಇಲ್ಲಿ ಹೋಲಿಸಿಕೊಳ್ಳುತ್ತಿರುವ ಪದ _____ ಇದನ್ನೇ 'ಉಪಮೇಯ' (ವರ್ಣ್ಯ) ಎನ್ನುವರು.
ಮಗುವಿನ ಮುಖವನ್ನು _____ ಹೋಲಿಸಲಾಗಿದೆ. ಇದನ್ನೇ 'ಉಪಮಾನ' (ಅವರ್ಣ್ಯ) ಎನ್ನುವರು.
ಉಪಮೇಯ ಮತ್ತು ಉಪಮಾನ ಈ ಎರಡಕ್ಕೂ ಸಾಮಾನ್ಯ ಲಕ್ಷಣಕ್ಕೆ ಸಂಬಂಧಿಸಿದ ಪದ
'ಸಮಾನ ಧರ್ಮ' ಅಥವಾ 'ಸಾಧಾರಣ ಧರ್ಮ' ಎನ್ನುತ್ತೇವೆ."
ಸಾಮಾನ್ಯ ಧರ್ಮಕ್ಕೂ ಉಪಮಾನಕ್ಕೂ ಸಂಬಂಧ ಕಲ್ಪಿಸುವ ಪದ _____ ಇದನ್ನೇ 'ಉಪಮಾವಾಚಕ' ಎನ್ನುವರು.
ಇಲ್ಲಿ ಉಪಮೇಯವಾದ _____ಉಪಮಾನವಾದ _____ ಕ್ಕೆ _____
ಎಂಬ ಸಮಾನ ಧರ್ಮದೊಂದಿಗೆ ಹೋಲಿಸಿ ಹೇಳಿರುವುದರಿಂದ ಇದನ್ನು'ಉಪಮಾಲಂಕಾರ' ಎನ್ನುವರು.
ಈ ರೀತಿ ಬರೆಯುವುದನ್ನು ಸಮನ್ವಯ ಎನ್ನುವರು.

**ಚಟುವಟಿಕೆ 3 : ಖಾಲಿ ಜಾಗವನ್ನು ಸೂಕ್ತ ಪದಗಳಿಂದ ತುಂಬಿಸಿ.**

ಕೊಟ್ಟಿರುವ ಹೇಳಿಕೆಗಳಲ್ಲಿ ಉಪಮೇಯ, ಉಪಮಾನ, ಉಪಮಾವಾಚಕ ಮತ್ತು ಸಮಾನ ಧರ್ಮಗಳನ್ನು ಗುರುತಿಸಿ ನೀಡಲಾದ ಖಾಲಿ ಜಾಗದಲ್ಲಿ ಬರೆಯಿರಿ.

| ಕ್ರ.ಸಂ | ಹೇಳಿಕೆಗಳು | ಉಪಮೇಯ | ಉಪಮಾನ | ಉಪಮಾವಾಚಕ |
|---|---|---|---|---|
| 1 | ಶಾಂತಲೆಯು ನವಿಲನಂತೆ ನರ್ತಿಸುತ್ತಿದ್ದಳು. | | | |
| 2 | ಆಕಾಶದಲ್ಲಿರುವ ಮೋಡಗಳು ಹತ್ತಿಯಂತೆ ಕಾಣುತ್ತಿವೆ. | | | |
| 3 | ಬೇಸಿಗೆಯ ಬಿರುಬಿಸಿಲು ಬೆಂಕಿಯಂತೆ ಸುಡುತ್ತಿದೆ. | | | |
| 4 | ಭೀಮನು ರಣಾಂಗಣದಲ್ಲಿ ಸಿಂಹದಂತೆ ಘರ್ಜಿಸಿದನು. | | | |

@KTBS NOT TO BE REPUBLISHED

ಬೆಂಬಲಿತ ಕಲಿಕೆಯ ಹಂತ – ಚಟುವಟಿಕೆ ಹಾಳೆ 26

# ಅಲಂಕಾರ – 2

A7A1Q3

ಹೆಚ್ಚಿನ ಕಲಿಕೆಗಾಗಿ ಸ್ಕ್ಯಾನ್ ಮಾಡಿ

**ಕಲಿಕಾ ಫಲ :** ಕಾವ್ಯ ಕವಿತೆಗಳನ್ನು ಓದಿ ಅವುಗಳಲ್ಲಿನ ಅಲಂಕಾರಗಳ ಬಗ್ಗೆ ತಿಳಿದು ಅರ್ಥಮಾಡಿಕೊಳ್ಳುವರು.

**ಚಟುವಟಿಕೆ 1 : ಕೊಟ್ಟಿರುವ ಹೇಳಿಕೆಗಳಲ್ಲಿ ಅಲಂಕಾರವನ್ನು ಹೆಸರಿಸಿ, ಲಕ್ಷಣಬರೆದು, ಮಾದರಿಯಂತೆ ಸಮನ್ವಯಿಸಿ.**

**ಮಾದರಿ : ದಸರಾ ಹಬ್ಬದಲ್ಲಿ ಮೈಸೂರು ನಗರವು ಇಂದ್ರನ ಅಮರಾವತಿಯಂತೆ ಝಗಮಗಿಸುತ್ತಿದೆ.**

**ಅಲಂಕಾರ** : **ಉಪಮಾಲಂಕಾರ**

**ಲಕ್ಷಣ** : ಎರಡು ವಸ್ತುಗಳಿಗೆ ಪರಸ್ಪರವಾಗಿ ಇರುವ ಹೋಲಿಕೆಯನ್ನು ಹೇಳುವುದನ್ನು ಉಪಮಾಲಂಕಾರ ಎನ್ನುವರು.

**ಉಪಮೇಯ** : ದಸರಾ ಹಬ್ಬದಲ್ಲಿ ಮೈಸೂರು ನಗರ

**ಉಪಮಾನ** : ಇಂದ್ರನ ಅಮರಾವತಿ

**ಉಪಮಾವಾಚಕ** : ಅಂತೆ

**ಸಮಾನಧರ್ಮ** : ಝಗಮಗಿಸುವುದು.

**ಸಮನ್ವಯ** : ಇಲ್ಲಿ ಉಪಮೇಯವಾದ 'ದಸರಾ ಕಾಲದ ಮೈಸೂರು ನಗರ'ವನ್ನು ಉಪಮಾನವಾದ 'ಇಂದ್ರನ ಅಮರಾವತಿ'ಗೆ 'ಝಗಮಗಿಸುತ್ತದೆ' ಎಂಬ ಸಮಾನಧರ್ಮದೊಂದಿಗೆ ಹೋಲಿಸಿ ಹೇಳಿರುವುದರಿಂದ ಇದನ್ನು 'ಉಪಮಾಲಂಕಾರ' ಎನ್ನುವರು.

@KTBS NOT TO BE REPUBLISHED

**ವಾಕ್ಯ 1 : ಪೀತಾಂಬರವನ್ನುಟ್ಟ ಶ್ರೀಕೃಷ್ಣನು ಚಿನ್ನದ ಕಿರೀಟದಲ್ಲಿರುವ ರತ್ನದಂತೆ ಹೊಳೆಯುತ್ತಿದ್ದನು.**

ಅಲಂಕಾರ : _____

ಲಕ್ಷಣ : _____

ಉಪಮೇಯ : _____

ಉಪಮಾನ : _____

ಉಪಮಾವಾಚಕ : _____

ಸಮಾನಧರ್ಮ : _____

ಸಮನ್ವಯ : _____

**ವಾಕ್ಯ 2 : ರಾಮ ಲಕ್ಷ್ಮಣರು ಅಶ್ವಿನಿ ದೇವತೆಗಳಂತೆ ಶೋಭಿಸುತ್ತಿದ್ದರು.**

ಅಲಂಕಾರ : _____

ಲಕ್ಷಣ : _____

ಉಪಮೇಯ : _____

ಉಪಮಾನ : _____

ಉಪಮಾವಾಚಕ : _____

ಸಮಾನಧರ್ಮ : _____

ಸಮನ್ವಯ : _____

**ವಾಕ್ಯ 3 : ಗೀಜುಗನ ಗೂಡುಗಳು ತೊಟ್ಟಿಲನಂತೆ ತೂಗಾಡುತ್ತಿದ್ದವು**

ಅಲಂಕಾರ : _____

ಲಕ್ಷಣ : _____

ಉಪಮೇಯ : _____

ಉಪಮಾನ : _____

ಉಪಮಾವಾಚಕ : _____

ಸಮಾನಧರ್ಮ : _____

ಸಮನ್ವಯ : _____

@KTBS NOT TO BE REPUBLISHED

**ವಾಕ್ಯ 4 : ರಾಮನು ಕಂಡ ಮಾಯಾಮೃಗದ ಕಣ್ಣುಗಳು ವಜ್ರದಂತೆ ಹೊಳೆಯುತ್ತಿದ್ದವು.**

ಅಲಂಕಾರ : _____

ಲಕ್ಷಣ : _____

ಉಪಮೇಯ : _____

ಉಪಮಾನ : _____

ಉಪಮಾವಾಚಕ : _____

ಸಮಾನಧರ್ಮ : _____

ಸಮನ್ವಯ : _____

# ಪ್ರಬಂಧ – 1

ಹೆಚ್ಚಿನ ಕಲಿಕೆಗಾಗಿ ಸ್ಕ್ಯಾನ್ ಮಾಡಿ

**ಕಲಿಕಾ ಫಲ :** ಪ್ರಬಂಧ ಬರೆಹದ ಮಹತ್ತ್ವವನ್ನು ಅರಿತು ದೈನಂದಿನ ವ್ಯಾವಹಾರಿಕ ಸಂದರ್ಭಗಳಲ್ಲಿ ಲಿಖಿತ ಅಭಿವ್ಯಕ್ತಿ ಕೌಶಲ್ಯ ಬೆಳೆಸಿಕೊಳ್ಳುವರು.

**ಪ್ರಬಂಧ ಎಂದರೆ ಕಟ್ಟು ಎಂದರ್ಥ ಅಂದರೆ ಉತ್ತಮವಾಗಿ ಜೋಡಿಸುವ ಕಲೆ.**

* ಯಾವುದಾದರೂ ಒಂದು ವಿಷಯದ ಬಗ್ಗೆ ವಿಷಯವನ್ನು ಸಂಗ್ರಹಿಸಿ, ವಿವರವಾಗಿ, ಅರ್ಥವತ್ತಾಗಿ ಮತ್ತು ಆಕರ್ಷಕವಾಗಿ ಬರೆಯುವ ಕಲೆಯೇ ಪ್ರಬಂಧ.

* ವಿಷಯಸಂಗ್ರಹಣೆ ನಮ್ಮ ಅನುಭವದಿಂದ ಆಗಬಹುದು. ಅನ್ಯರನ್ನು ಸಂಪರ್ಕಿಸಿ ಸಂಗ್ರಹಿಸುವುದು. ಇಲ್ಲವೇ ಇತರೆ ಗ್ರಂಥಗಳನ್ನು ಅಧ್ಯಯನ ಮಾಡಿ ವಿಷಯವನ್ನು ಕ್ರೋಢೀಕರಿಸಬಹುದು. ಪ್ರಬಂಧ ಬರೆಯುವುದು ಎಂದರೆ ಉದ್ದುದ್ದ ಸಾಲುಗಳಲ್ಲಿ ಹೆಚ್ಚು ಹೆಚ್ಚು ಪುಟಗಳಲ್ಲಿ ಬರೆದರೆ ಮಾತ್ರ ಅದು ಪ್ರಬಂಧ ಎಂಬ ಭ್ರಮೆ ಬೇಡ. ವಿಷಯಕ್ಕೆ ತಕ್ಕಂತೆ ಸೂಕ್ತವಾದ ಪದ ಬಳಕೆ ಸಂಕ್ಷಿಪ್ತವಾಗಿ ಹೇಳುವ ಕಲೆ ಇದಾಗಿದೆ.

* ನಮ್ಮ ಪ್ರಬಂಧ ಬರೆಹವು ಪರಿಚಿತ ವಸ್ತು, ಸನ್ನಿವೇಶವನ್ನುಕುರಿತು ಇದ್ದರೆ ಹೆಚ್ಚು ಸೂಕ್ತ.

**ಚಟುವಟಿಕೆ 1 : ಕೊಟ್ಟಿರುವ ವಿಷಯಗಳ ಕುರಿತು, ಮೊದಲು ತರಗತಿಯಲ್ಲಿ ಮಾತನಾಡಿ, ನಂತರ, ಉತ್ತಮವಾದ ವಾಕ್ಯರಚನೆಯ ಮೂಲಕ ವಿಷಯಗಳನ್ನು ಕುರಿತು ನೀಡಲಾದ ಖಾಲಿ ಜಾಗದಲ್ಲಿ ಬರೆಯಿರಿ.**

**1. ಪ್ರಾಥಮಿಕ ಶಾಲಾ ಹಂತದಲ್ಲಿ ನನ್ನ ಬಾಲ್ಯ**

@KTBS NOT TO BE REPUBLISHED

**2. ನನ್ನ ಮೇಲೆ ಪ್ರಭಾವ ಬೀರಿದ ಶಿಕ್ಷಕರು.**

**3. ನನ್ನ ಹುಡುಗಾಟ, ನನ್ನ ಪ್ರಯಾಣ**

**4. ನಾನು ಮಾಡಿದ ಪ್ರವಾಸ**

@KTBS
NOT TO BE REPUBLISHED

**ಚಟುವಟಿಕೆ 2 : ಕೊಟ್ಟಿರುವ ವಿಷಯಗಳ ಕುರಿತು ವಾಕ್ಯ ವೃಂದದಲ್ಲಿ ಬರೆಯಿರಿ.**

**1. ಪ್ರತಿಯೊಬ್ಬರಿಗೂ ಯಾವುದಾದರೊಂದು ಆಟದಲ್ಲಿ ವಿಶೇಷ ಆಸಕ್ತಿ ಇರುತ್ತದೆ. ಹಾಗಾದರೆ ನಿಮಗೆ ಇಷ್ಟವಾದ ಆಟವನ್ನು ಕುರಿತು ನಿಮ್ಮದೇ ಆದಮಾತುಗಳಲ್ಲಿ 7–8 ವಾಕ್ಯಗಳಲ್ಲಿ ಬರೆಯಿರಿ.**

**2. ರಸ್ತೆ ಸುರಕ್ಷತೆಯಲ್ಲಿ ಅನುಸರಿಸಬೇಕಾದ ನಿಯಮಗಳನ್ನು ಕುರಿತು ಬರೆಯಿರಿ.**

@KTBS
NOT TO BE REPUBLISHED

ಬೆಂಬಲಿತ ಕಲಿಕೆಯ ಹಂತ – ಚಟುವಟಿಕೆ ಹಾಳೆ 28

# ಪ್ರಬಂಧ – 2

ಹೆಚ್ಚಿನ ಕಲಿಕೆಗಾಗಿ ಸ್ಕ್ಯಾನ್ ಮಾಡಿ

**ಕಲಿಕಾ ಫಲ :** ಪ್ರಬಂಧ ಬರೆಹದ ಮಹತ್ತ್ವವನ್ನು ಅರಿತು ದೈನಂದಿನ ವ್ಯಾವಹಾರಿಕ ಸಂದರ್ಭಗಳಲ್ಲಿ ಲಿಖಿತ ಅಭಿವ್ಯಕ್ತಿ ಕೌಶಲ್ಯ ಬೆಳೆಸಿಕೊಳ್ಳುವರು.

**ಪ್ರಬಂಧ ಬರೆವಣಿಗೆಯ ಹಂತಗಳು :–**

* **ಪೀಠಿಕೆ**
* **ವಿಷಯ ನಿರೂಪಣೆ**
* **ಉಪಸಂಹಾರ**

ಈ ಹಂತದಲ್ಲಿ ನಿಮ್ಮ ಬರೆವಣಿಗೆ ಶೈಲಿ ಹೀಗಿದ್ದರೆ ಚೆನ್ನ, ಇಲ್ಲಿ ಉದಾಹರಣೆಗಾಗಿ 'ಸಮೂಹ ಮಾಧ್ಯಮಗಳು' ವಿಷಯದ ಕುರಿತು ವಿವರಣೆ ನೀಡಲಾಗಿದೆ.

* **ಪೀಠಿಕೆ / ಪ್ರಸ್ತಾವನೆ :** ಈ ಹಂತದಲ್ಲಿ ವಿಷಯವನ್ನು ಆಧರಿಸಿದಂತೆ ಏನು? ಏಕೆ? ಹೇಗೆ? ಈ ಅಂಶಗಳನ್ನು ಗಮನಿಸಿ, ಸಂಕ್ಷಿಪ್ತವಾದ ಮಾಹಿತಿಯನ್ನು ಐದಾರು ಸಾಲುಗಳಲ್ಲಿ ಬರೆಯುವುದು.

**ಉದಾಹರಣೆಗೆ :** ಸಮೂಹ ಮಾಧ್ಯಮಗಳು ಎಂದರೇನು? ಸಮೂಹ ಮಾಧ್ಯಮಗಳು ಯಾವುವು ಎಂಬುದರ ಬಗ್ಗೆ ಪಟ್ಟಿ ನೀಡುವುದು. ಇಂದು ಅದರ ಅಗತ್ಯತೆಯ ಬಗ್ಗೆ ತಿಳಿಸುವುದು.

* **ವಿಷಯ ನಿರೂಪಣೆ :** ಈ ಹಂತದಲ್ಲಿ ವಿಷಯವನ್ನು ಆಧರಿಸಿದಂತೆ ವಿವರವನ್ನು ವಿಸ್ತೃತ ರೂಪದಲ್ಲಿ ವಿವರಿಸುವುದು. ಪೀಠಿಕಾ ಹಂತದಲ್ಲಿ ನೀಡಲಾದ ಮಾಹಿತಿಯನ್ನು ಪರಿಗಣಿಸಿ, ಹೆಚ್ಚಿನ ಮಾಹಿತಿ ನೀಡುವುದು ವಾಕ್ಯರಚನೆ, ವಿಷಯದ ಬಂಧ, ಕ್ರಮಾನುಗತ ವಿಚಾರಗಳಿಗೆ ಆದ್ಯತೆ ನೀಡುವುದು.

ಉದಾಹರಣೆಗೆ: ಸಮೂಹ ಮಾಧ್ಯಮಗಳ ಪಟ್ಟಿಯನ್ನಾಧರಿಸಿದಂತೆ ರೇಡಿಯೋ, ದೂರದರ್ಶನ, ಗಣಕ ಯಂತ್ರ, ಸಂಚಾರಿವಾಣಿ, ವೃತ್ತಪತ್ರಿಕೆಗಳು, ಅಂತರ್ಜಾಲ ಮೊದಲಾದವುಗಳ ಬಗ್ಗೆ ಕ್ರಮಾನುಗತ ವಿವರಣೆ ನೀಡಿ, ಪ್ರಸ್ತುತ ಸಮಾಜಕ್ಕೆ ಅವುಗಳ ಪ್ರಾಮುಖ್ಯತೆ ತಿಳಿಸಿ, ವಿವರವಾಗಿ ಬರೆಯಲು ಮಾರ್ಗದರ್ಶನ ನೀಡುವುದು.

* **ಮುಕ್ತಾಯ / ಉಪಸಂಹಾರ :** ಈ ಹಂತದಲ್ಲಿ ವಿಷಯವನ್ನಾಧರಿಸಿದಂತೆ, ನಾವು ಈ ಬಗ್ಗೆ ಹೇಗೆ ಹಿತಮಿತವಾಗಿ ಬಳಸಬೇಕು, ಈ ಬಗ್ಗೆ ನಮ್ಮ ಸ್ವಂತ ಅಭಿಪ್ರಾಯವೇನು? ಇದರಿಂದಾಗುವ ಪ್ರಯೋಜನಗಳೇನು ಎಂಬುದನ್ನು ಸಂಕ್ಷಿಪ್ತವಾಗಿ ತಿಳಿಸುವುದು.

**ಉದಾಹರಣೆಗೆ:** ಸಮೂಹ ಮಾಧ್ಯಮಗಳನ್ನು ವಿದ್ಯಾರ್ಥಿಗಳಾದ ನಾವು ಹೇಗೆ ಸೂಕ್ತವಾಗಿ ಬಳಕೆ ಮಾಡಿಕೊಳ್ಳಬೇಕು, ಜ್ಞಾನಾರ್ಜನೆಯಲ್ಲಿ ಇದರ ಪಾತ್ರವೇನು ಮುಂತಾದ ಅಂಶಗಳ ಬಗ್ಗೆ ಸಂಕ್ಷಿಪ್ತವಾಗಿ ತಿಳಿಸುವುದು.

**ಚಟುವಟಿಕೆ 1 : ಕೊಟ್ಟಿರುವ ವಿಷಯಕ್ಕೆ ನೀಡಲಾದ ಸುಳಿವುಗಳನ್ನು ಆಧರಿಸಿ, ಸರಳ ವಾಕ್ಯಗಳ ಮೂಲಕ ಪ್ರಬಂಧ ಬರೆಯಿರಿ.**

**1. ವಿಷಯ : ಗ್ರಂಥಾಲಯದ ಮಹತ್ತ್ವ**

ಸುಳಿವು : ಗ್ರಂಥಾಲಯ ಎಂದರೇನು– ಗ್ರಂಥಗಳನ್ನು ಓದಲು, ಆಕರ ಗ್ರಂಥಗಳನ್ನು ಬಳಸಲು, ಇಲ್ಲವೇ ಪುಸ್ತಕಗಳನ್ನು ಎರವಲು ರೂಪದಲ್ಲಿ ಪಡೆಯಲು ಬೇಕಾದ ಪುಸ್ತಕಗಳನ್ನು ಸಂಗ್ರಹಿಸಿರುವ ಸ್ಥಳ– ಅನೇಕ ಭಾಷೆಗಳಿಗೆ, ಅನೇಕ ವಿಷಯಗಳಿಗೆ ಸಂಬಂಧಿಸಿದ ಪುಸ್ತಕಗಳು ಕೆಲವರಿಗೆ ಹಣಕೊಟ್ಟು ಪುಸ್ತಕಗಳನ್ನು ಕೊಂಡುಕೊಳ್ಳಲು ಸಾಧ್ಯವಾಗುವುದಿಲ್ಲ– ಸಾರ್ವಜನಿಕ ಗ್ರಂಥಾಲಯಗಳು– ಪುಸ್ತಕಗಳನ್ನು ಓದುವುದರಿಂದ ಆಗುವ ಅನುಕೂಲ– ಗ್ರಂಥಾಲಯಗಳ ಅವಶ್ಯಕತೆ

© KSEEB NOT TO BE REPUBLISHED

@KTBS
NOT TO BE REPUBLISHED

**2. ವಿಷಯ : ರಾಷ್ಟ್ರೀಯ ಹಬ್ಬಗಳ ಮಹತ್ವ**

**ಸುಳಿವು :** ರಾಷ್ಟ್ರೀಯ ಹಬ್ಬಗಳು ಯಾವುವು– ರಾಷ್ಟ್ರದ ಜನರಲ್ಲಿರುವ ಜಾತಿ, ಮತ, ವರ್ಣ, ಧರ್ಮ, ಭಾಷೆ, ಪ್ರಾಂತ್ಯಗಳ ಭೇದಭಾವಗಳನ್ನು ಹೋಗಲಾಡಿಸಿ ನಾವೆಲ್ಲರೂ ಒಂದೇ ಎಂಬ ಭಾವ– ಆ ದಿನದ ವಿಶೇಷ ಆಚರಣೆಗಳು– ಆಚರಿಸುವ ಪ್ರಮುಖ ಸ್ಥಳಗಳು– ರಾಷ್ಟ್ರೀಯ ಹಬ್ಬಗಳ ಅವಶ್ಯಕತೆ.

@KTBS
NOT TO BE REPUBLISHED

ಚಟುವಟಿಕೆ 2 : ಕೊಟ್ಟಿರುವ ವಿಷಯಗಳ ಕುರಿತು ಪ್ರಬಂಧ ಬರೆಯಿರಿ.

1. ವಿಷಯ : ಜಲ ಸಂರಕ್ಷಣೆ

2. ವಿಷಯ : ಬಾಲ ಕಾರ್ಮಿಕ ಪದ್ಧತಿ

@KTBS
NOT TO BE REPUBLISHED